ಲಂಕೇಶ್

ಸೆಪ್ಟೆಂಬರ್ 26, 2007 ರೂ.10/-



ನಂಬಿಕೆ ಚರಿತ್ರೆ ಅಲ್ಲ


ಚಡ್ಡಿ ಸಂಚಿಗೆ ಮೀನುಗಾರರು ಬಲಿ

ದಕ್ಷಿಣ ಭಾರತೀಯರು ಕಪಿಗಳಾ?

ಅಯ್ಯೋ ರಾಮ!



ಸುರಪುರ: ದೊರೆಗಳಿಂದ ಮುಕ್ತಿ ಎಂದು?



ಉಜಿರೆ: ವಿಜಯರಾಘವ ಮತ್ತು ಚೋರರು



ಚನ್ನಿಗಪ್ಪನ 'ಲೀಲಾ' ವಿನೋದ



ಬಿಜೆಪಿ ಈಗಾಗಲೇ ಅಧಿಕಾರದಲ್ಲಿದೆ!

ಬರಲಿರುವ ಅಕ್ಟೋಬರ್ ಮೂರರಂದು ಬಿಜೆಪಿಗೆ ಅಧಿಕಾರ 'ಹಸ್ತಾಂತರ' ವಾಗುತ್ತದೆಯೋ ಇಲ್ಲವೋ ಎಂಬುದೇ ಈಗ ಕರ್ನಾಟಕ ರಾಜ್ಯದ ರಾಷ್ಟ್ರೀಯ ಪ್ರಶ್ನೆಯಾಗಿಬಿಟ್ಟಿದೆ! ಕರ್ನಾಟಕದ ಬಹುಪಾಲು ರಾಜಕೀಯ ಪಕ್ಷಗಳು ಮತ್ತು ಮುತ್ಸದ್ದಿಗಳೆಂದು ಕರೆಸಿಕೊಳ್ಳಬಯಸುವ ಬಹುಪಾಲು ಜನ ಇದನ್ನು ಕುಮಾರಸ್ವಾಮಿಯವರ ಪ್ರಾಮಾಣಿಕತೆಯ ಪ್ರಶ್ನೆಯನ್ನಾಗಿ ಮಾತ್ರವೇ ನೋಡುತ್ತಿದ್ದಾರೆ. ರಾಜಕಾರಣದಲ್ಲಿ ನ್ಯಾಯ, ನೀತಿ, ಪ್ರಾಮಾಣಿಕತೆ ಉಳಿಯಬೇಕೆಂದು ಬಯಸುವ ಮತ್ತು ಬಿಜೆಪಿಯಂತಹ ಕೋಮುವಾದಿ ಪಕ್ಷ ಯಾವ ಕಾರಣಕ್ಕೂ ಅಧಿಕಾರಕ್ಕೆ ಬರಬಾರದೆಂದು ಬಯಸುವ ಜನರೂ ಸಹ ಕುಮಾರಸ್ವಾಮಿ ಅಧಿಕಾರ 'ಹಸ್ತಾಂತರ' ಮಾಡದಿದ್ದರೆ ರಾಜಕೀಯದಲ್ಲಿ ಈಗಾಗಲೇ ಇರುವ ಅಪ್ರಾಮಾಣಿಕತೆಯನ್ನು ಪ್ರೋತ್ಸಾಹಿಸಿದಂತಾಗುವುದಿಲ್ಲವೇ ಎಂಬ ನೈತಿಕ ಗೊಂದಲದಲ್ಲಿದ್ದಾರೆ. ಹೀಗಾಗಿಯೇ ಹಲವು ಕೋಮುವಾದಿ ವಿರೋಧಿ ಮುತ್ಸದ್ದಿಗಳೂ ಸಹ ಕುಮಾರಸ್ವಾಮಿ ಅಧಿಕಾರ ಹಸ್ತಾಂತರ ಮಾಡುವುದೇ ಸರಿಯಾದದ್ದು ಎಂಬ ಅಭಿಪ್ರಾಯ ಪಡುತ್ತಿದ್ದಾರೆ.



ಆದರೆ ಮಾಧ್ಯಮಗಳು ಸೃಷ್ಟಿಸಿರುವ ಈ 'ಅಧಿಕಾರ ಹಸ್ತಾಂತರ' ಎನ್ನುವ ಪದಜಾಲ ಈಗಾಗಲೇ ಬಿಜೆಪಿ ಅಧಿಕಾರ ಅನುಭವಿಸುತ್ತಿದೆ ಎಂಬುದನ್ನು ಹೆಚ್ಚುಕಡಿಮೆ ಹಿನ್ನೆಲೆಗೆ ಸರಿಸಿಬಿಡುತ್ತಿದೆ. ಹಾಗೂ ಕಳೆದ ಫೆಬ್ರವರಿಯಲ್ಲಿ ಜೆಡಿಎಸ್ ಪಕ್ಷ ಬಿಜೆಪಿಯೊಂದಿಗೆ ಅಧಿಕಾರವನ್ನು ತತ್ವಭ್ರಷ್ಟವಾಗಿ ಹಂಚಿಕೊಂಡಾಗಲೇ ಆಯಾ ಪಕ್ಷಗಳು ಅಪ್ರಾಮಾಣಿಕರಾಗಿದ್ದರು ಮತ್ತು ಜನರು ತಮ್ಮಲ್ಲಿಟ್ಟ ಭರವಸೆಗೆ ದ್ರೋಹವನ್ನು ಬಗೆದಿದ್ದರು ಎಂಬುದನ್ನು ಮರೆಸಿಬಿಡಲಾಗುತ್ತಿದೆ.

ಮೊಟ್ಟಮೊದಲನೆಯ ಅಂಶವೇನೆಂದರೆ ಬಿಜೆಪಿಗೆ ಅಧಿಕಾರ ಸಿಗುತ್ತಿರುವುದು ಅಕ್ಟೋಬರ್ ಮೂರರಂದಲ್ಲ, ಬದಲಿಗೆ ಕಳೆದ 20 ತಿಂಗಳಿಂದಲೂ ಬಿಜೆಪಿ ಅಧಿಕಾರವನ್ನು ಅನುಭವಿಸುತ್ತಲೇ ಇದೆ. ಒಂದು ಸಮಬಲದ ಪಕ್ಷಗಳಿರುವ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿ ಸ್ಥಾನ ಏಕಪಕ್ಷ ಸರ್ಕಾರದಷ್ಟು ವಿಶೇಷವಾದದ್ದಲ್ಲ. ಅನ್ನುವುದಾದರೆ ಅಕ್ಟೋಬರ್ ಮೂರರಂದು ಇರುವ ಪ್ರಶ್ನೆ ಬಿಜೆಪಿಗೆ ಅಧಿಕಾರ ಹಸ್ತಾಂತರ ಆಗುತ್ತದೆಯೋ ಇಲ್ಲವೋ ಎಂಬುದಲ್ಲ, ಬದಲಿಗೆ ಮುಖ್ಯಮಂತ್ರಿ ಯಾರಾಗುತ್ತಾರೆ ಎನ್ನುವುದು. ಆ ಸ್ಥಾನದಲ್ಲಿ ಯಡಿಯೂರಪ್ಪನವರ ಬದಲಿಗೆ ಬಿಜೆಪಿಯ ಮತ್ಯಾರೇ ಬಂದು ಕುಳಿತರೂ ಅಥವಾ ಈಗಿರುವಂತೆ ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿ ಮುಂದುವರೆದರೂ ಬಿಜೆಪಿ ಒಂದು ಪಕ್ಷವಾಗಿ ಮತ್ತು ಒಂದು ಸಿದ್ಧಾಂತವಾಗಿ ರಾಜ್ಯಾಧಿಕಾರದಲ್ಲಿ ಅಬಾಧಿತವಾಗಿ ಮುಂದುವರೆದಂತೆಯೇ ಆಗುವುದಿಲ್ಲವೇ? ಬಿಜೆಪಿ ಪಕ್ಷ ತನ್ನ ದೂರಗಾಮಿ ಯೋಜನೆಯ ಭಾಗವಾಗಿ ಕಳೆದ ಇಪ್ಪತ್ತು ತಿಂಗಳಲ್ಲಿ ಕೀಲಕವಾದ ಮಂತ್ರಿ ಸ್ಥಾನಗಳನ್ನು ಪಡೆದುಕೊಂಡಿದೆ. ಮತ್ತು ಆಯಾ ಇಲಾಖೆಗಳನ್ನು ಯಥಾಶಕ್ತಿ ಕೋಮುವಾದಿಕರಣಗೊಳಿಸಿದೆ. ಆಯಕಟ್ಟಿನ ಜಾಗಗಳಲ್ಲಿ ತನ್ನ ಪಕ್ಷದ ಸಿದ್ಧಾಂತಕ್ಕೆ ಅನುಗುಣವಾದ ಅಧಿಕಾರಿಗಳನ್ನು ತಂದು ಕೂರಿಸಿದೆ.

ಅಂದರೆ ಬಿಜೆಪಿಗೆ ಅಧಿಕಾರ ಹಸ್ತಾಂತರವಾದರೆ ಏನೆಲ್ಲಾ ಅಪಾಯವಾಗಬಹುದೆಂದು ನಿರೀಕ್ಷಿಸಲಾಗಿತ್ತೋ ಅವೆಲ್ಲವನ್ನೂ ಕಳೆದ ಇಪ್ಪತ್ತು ತಿಂಗಳಲ್ಲಿ ಮಂಗಳೂರಿನಲ್ಲಿ, ಬಾಬಾಬುಡನ್ ಗಿರಿಯಲ್ಲಿ, ಹಂಪಿ ಮತ್ತು ಇನ್ನಿತರ ಕಡೆಗಳಲ್ಲಿ ನಾಡಿನ ಜನತೆ ಈಗಾಗಲೇ ಅನುಭವಿಸುತ್ತಿದ್ದಾರೆ. ಅಕ್ಟೋಬರ್ ಮೂರರ ನಂತರ ಬಿಜೆಪಿ ಸದಸ್ಯರೊಬ್ಬ ಮುಖ್ಯಮಂತ್ರಿಯಾದರೂ ಅಥವಾ ಈಗಿರುವ ವ್ಯವಸ್ಥೆಯೇ ಮುಂದುವರೆದರೂ ಈ ಅಪಾಯ ಇನ್ನೂ ಇಪ್ಪತ್ತು ತಿಂಗಳ ಕಾಲ ಮುಂದುವರೆಯುವುದು ಖಂಡಿತಾ. ಇದಕ್ಕೆ ಮೂಲ ಕಾರಣ ಕಳೆದ ಫೆಬ್ರವರಿಯಂದು ಜಾತ್ಯತೀತ ಜನತಾ ದಳ ಮತ್ತು ಬಿಜೆಪಿಯ ನಡುವೆ ಆದ ತತ್ವಭ್ರಷ್ಟ ಅಧಿಕಾರ ಲೋಲುಪ ಮೈತ್ರಿ! ಬಿಜೆಪಿಗೆ ಅಂದೇ ಅಧಿಕಾರ ಹಸ್ತಾಂತರವಾಗಿದೆ.

ಇನ್ನು ಪ್ರಾಮಾಣಿಕತೆಯ ಪ್ರಶ್ನೆ. ಕಳೆದ 2004ರ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಕೊಟ್ಟ ಜನಾದೇಶವನ್ನು ತಪ್ಪಾಗಿ ವ್ಯಾಖ್ಯಾನಿಸಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಕಳೆದ ಫೆಬ್ರವರಿಯಲ್ಲಿ ಅಧಿಕಾರ ಹಿಡಿದು ಜನತೆಗೆ ದ್ರೋಹ ಬಗೆದಾಗಲೇ ಇಬ್ಬರೂ ಅಪ್ರಾಮಾಣಿಕರೆಂದು ಸಾಬೀತಾಗಿದೆ. ಕೋಮುವಾದದ ವಿರುದ್ಧ ಎಂದೂ ಪ್ರಬಲ ಹೋರಾಟ ಕಟ್ಟದ ಮೃದು ಕೋಮುವಾದಿ ಕಾಂಗ್ರೆಸ್ ಸಹ ಅಪ್ರಾಮಾಣಿಕ. ಇದು ಸಹ ಸಾಕಷ್ಟು ಸಾರಿ ಸಾಬೀತಾಗಿದೆ. ಹೀಗಾಗಿ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡದಿದ್ದರೆ ಮಾತ್ರ ಅಪ್ರಾಮಾಣಿಕತೆಯಾಗುತ್ತದೆನ್ನುವುದು ಜನತೆಗೆ ಮಾಡಿದ ದ್ರೋಹವನ್ನು ಗೌಣವಾಗಿಸುತ್ತದೆಯಷ್ಟೆ. ನಮ್ಮ ಮುತ್ಸದ್ದಿಗಳು ಮತ್ತು ಮಾಧ್ಯಮಗಳು ಕಾಲಕ್ಕೆ ತಕ್ಕಂತೆ ಸೃಷ್ಟಿಸುವ ಪದಧಾರೆಗಳಲ್ಲಿ ವಾಸ್ತವ ಸ್ಥಿತಿ ಕೊಚ್ಚಿಹೋಗಬಾರದು.

ಹಾಗಾದರೆ ನಮ್ಮ ಮುಂದಿರುವ ಆಯ್ಕೆ ಏನು? ಪ್ರಗತಿಪರರು ಮತ್ತು ಕೋಮುವಾದ ವಿರೋಧಿಗಳು ಕೇವಲ ಬಿಜೆಪಿ ಸದಸ್ಯರೊಬ್ಬರು ಮುಖ್ಯಮಂತ್ರಿಯಾಗುತ್ತಿರುವುದನ್ನು ಮಾತ್ರ ವಿರೋಧಿಸಿದರೆ ಸಾಲದು. ಬದಲಿಗೆ ಜನತೆ ಕೊಟ್ಟ ಕೋಮುವಾದ ವಿರೋಧಿ ಜನಾದೇಶಕ್ಕೆ ದ್ರೋಹ ಬಗೆದ ಜೆಡಿಎಸ್ ಮತ್ತು ಬಿಜೆಪಿಯ ಅವಕಾಶವಾದಿ ಮೈತ್ರಿ ಯಾವುದೇ ರೂಪದಲ್ಲಿ ಮುಂದುವರೆಯುವುದನ್ನೇ ವಿರೋಧಿಸಬೇಕು. ಒಂದು ವೇಳೆ ಬಿಜೆಪಿಯನ್ನು ಹೊರಗಿಟ್ಟು ಸರ್ಕಾರ ರಚನೆ ಸಾಧ್ಯವಿಲ್ಲವಾದರೆ ಮತ್ತೊಮ್ಮೆ ಜನಾದೇಶವನ್ನು ಪಡೆಯಬೇಕು. ಆಗ ಸೌಹಾರ್ದ ಬಯಸುವ ಶಕ್ತಿಗಳು ಮೃದು ಕೋಮುವಾದಿಗಳ ಮತ್ತು ಉಗ್ರ ಕೋಮುವಾದಿಗಳಿಬ್ಬರ ವಿರುದ್ಧವೂ ಪ್ರಬಲ ಜನಾಭಿಪ್ರಾಯ ರೂಪಿಸಬೇಕು. ಇದನ್ನು ಬಿಟ್ಟು ಸೌಹಾರ್ದ ಕರ್ನಾಟಕಕ್ಕೆ ಬೇರೆ ಶಾರ್ಟ್ ಕಟ್‌ಗಳಿಲ್ಲ!!

ಕಬ್ಬು ಪರಿಹಾರ: ಹೇಳಿದ್ದು ಮಾರುದ್ದ, ಕೊಟ್ಟಿದ್ದು ಗೇಣುದ್ದ!

ಚಾರ್ವಾಕ

- ಶಿವಸುಂದರ್-

ಈ ಬಾರಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರಲ್ಲಿ ಶೇ.80 ಭಾಗ ರೈತರು ಕಬ್ಬು ಬೆಳೆಗಾರರೇ ಆಗಿದ್ದಾರೆ. ಏಕೆಂದರೆ ಕಬ್ಬು ಬೆಳೆದು ಕಟಾವಿಗೆ ಬಂದಿದ್ದರೂ ಸಕ್ಕರೆ ಕಂಪನಿಗಳು ಅವುಗಳನ್ನು ಕೊಳ್ಳಲು ಮುಂದೆ ಬರಲಿಲ್ಲ. ಕಬ್ಬು 12 ತಿಂಗಳ ಬೆಳೆ. ಅದನ್ನು 12 ತಿಂಗಳಿಗೆ ಕಟಾವು ಮಾಡಿದರೆ ಹೆಚ್ಚಿನ ತೂಕ ಸಿಗುತ್ತದೆ ಮತ್ತು ರೈತನಿಗೆ ಒಂದಷ್ಟು ದುಡ್ಡು ತಂದುಕೊಡುತ್ತದೆ. ಆದರೆ 12 ತಿಂಗಳ ನಂತರ ಕಟಾವಾಗದ ಪ್ರತಿ ತಿಂಗಳಿಗೂ ಕಬ್ಬಿನ ತೂಕ ಮತ್ತು ಅದರಲ್ಲಿಯ ಸಕ್ಕರೆ ಅಂಶ ಕಡಿಮೆಯಾಗುತ್ತಾ ಬರುತ್ತದೆ. ಒಂದು ಎಕರೆ ಜಮೀನಿನಲ್ಲಿ 12 ತಿಂಗಳಿಗೇ ಕಟಾವು ಮಾಡಿದರೆ 40 ಟನ್ ತೂಕದ ಕಬ್ಬು ದೊರೆಯುತ್ತಿತ್ತು, ಮತ್ತು ಟನ್ನಿಗೆ 1000 ರೂಪಾಯಿ ಬಂದಿದ್ದರೂ ಒಂದು ಎಕರೆಗೆ 40,000 ರೂಪಾಯಿ ದೊರೆತು, ಅದರಲ್ಲಿ ಹಾಕಿದ ಬಂಡವಾಳಕ್ಕೆ ಮತ್ತು ಸಾಲಕ್ಕೆ 30,000 ಹೋಗಿ ಕನಿಷ್ಠ ಜೀವನ ಸಾಗಿಸಲು ವರ್ಷಕ್ಕೆ ಒಂದು ಎಕರೆಗೆ 10,000 ರೂಪಾಯಿಗಳಾದರೂ ಉಳಿಯುತ್ತಿತ್ತು.

ಆದರೆ 16 ತಿಂಗಳಾದರೂ ಬೆಳೆ ಕಟಾವಾಗದಿದ್ದರೆ ಕಬ್ಬಿನ ತೂಕ ಎಕರೆಗೆ 40 ಟನ್ನಿನ ಬದಲು 20 ಟನ್ನಷ್ಟೇ ಆಗುತ್ತದೆ. ಅದರಲ್ಲಿ ಸಕ್ಕರೆ ಅಂಶ ಕಡಿಮೆ ಇರುತ್ತದಾದ್ದರಿಂದ ಸಕ್ಕರೆ ಕಂಪನಿಗಳು ಅದನ್ನು ಅತ್ಯಂತ ಕನಿಷ್ಠ ದರಕ್ಕೆ ಕೊಳ್ಳುತ್ತವೆ. ಆಗ ಕಬ್ಬು ಬೆಳೆದ ರೈತನ ಬಳಿ ಬದುಕು ನೀಗಿಸಲು ಸಾಕಷ್ಟು ಹಣವಿರುವುದಿರಲಿ ಸಾಲ ತೀರಿಸಲೂ ಹಣವಿಲ್ಲದಂತಾಗಿ ಅನಿವಾರ್ಯವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.



ಕರ್ನಾಟಕದಲ್ಲಿ ಆದದ್ದು ಇದೇ. 70ಕ್ಕೂ ಹೆಚ್ಚು ಕಬ್ಬು ರೈತರು ಆತ್ಮಹತ್ಯೆ ಮಾಡಿಕೊಂಡ ನಂತರ ಎಚ್ಚೆತ್ತ ಸರ್ಕಾರ ಕಟಾವಾಗದೆ ಉಳಿದ ಪ್ರತಿ ಎಕರೆ ಕಬ್ಬಿಗೆ 10,000ರೂ ಕೊಡುವುದಾಗಿ ಘೋಷಿಸಿತು. ಕಟಾವಾಗದೆ ಉಳಿದ ಕಬ್ಬೆಷ್ಟು ಎಂದು ಅಧ್ಯಯನ ಮಾಡಲು ತಿಂಗಳುಗಳನ್ನು ಕಳೆದ ಸರ್ಕಾರ ಈಗ ಕಟಾವಾಗದೆ ಉಳಿದ ಕಬ್ಬಿಗೆ 50 ಕೋಟಿ ರೂ.ಗಳನ್ನು ಎತ್ತಿಟ್ಟಿರುವುದಾಗಿ ಘೋಷಿಸಿದೆ. ಅಂದರೆ ಸರ್ಕಾರದ ಪ್ರಕಾರ 50,000 ಎಕರೆಗಳಲ್ಲಿ ಮಾತ್ರ ಕಬ್ಬು ಕಟಾವಾಗದೆ ಉಳಿದಿದೆ ಎಂದಾಗುತ್ತದೆ.

ಆದರೆ ಪ್ರಾರಂಭದ ದಿನಗಳಲ್ಲಿ ಸರ್ಕಾರವೇ ಹೇಳಿದ ಪ್ರಕಾರ ಕನಿಷ್ಠ 1.5 ಲಕ್ಷ ಎಕರೆಗಳಲ್ಲಾದರೂ ಕಬ್ಬು ಕಟಾವಾಗದೇ ಹೊಲದಲ್ಲೇ ಸೌದೆಯಾಗಿ ಕೂತಿದೆ. ಆಗೆಲ್ಲಾ ಭರವಸೆಗಳ ಸುರಿಮಳೆಯನ್ನೇ ಸುರಿಸಿದ ಸರ್ಕಾರ ಈಗ ಸಂಕಷ್ಟದಲ್ಲಿರುವ ರೈತರ ಮೂಗಿಗೆ ಬೆಣ್ಣೆ ಹಚ್ಚುವ ಕೆಲಸ ಮಾಡುತ್ತಿದೆ. ಸರ್ಕಾರ ಕೊಡುವ ಹಣದಲ್ಲಾದರೂ ಸಾಲ ತೀರಿಸಬಹುದೆಂದುಕೊಂಡಿದ್ದ ರೈತ ಈಗ ಮತ್ತೊಮ್ಮೆ ಹತಾಶೆಗೆ ದೂಡಲ್ಪಟ್ಟಿದ್ದಾನೆ. ಇದೆಲ್ಲದರ ಪರಿಣಾಮವಿಷ್ಟೆ: ರೈತರ ಆತ್ಮಹತ್ಯೆ ಕಡಿಮೆಯಾಗುವ ಬದಲು ಜಾಸ್ತಿಯಾಗುತ್ತದೆ.

ಇವರು ನಮ್ಮನ್ನಾಳುವವರು!



"ಮಹಾರಾಷ್ಟ್ರದ ರೈತರು ಸೋಮಾರಿಗಳು. ಗುಜರಾತಿನ ರೈತರಂತಲ್ಲ- ನಾನು ಹೆಲಿಕಾಪ್ಟರಿನಲ್ಲಿ ಬರುವಾಗ ಬೆಳಗ್ಗೆಯ ಹೊತ್ತು ರೈತರಾರೂ ಹೊಲದಲ್ಲಿ ಕಾಣಲೇ ಇಲ್ಲ."

-ಶಂಕರ್ ಸಿಂಘ್ ವಘೇಲ,
ಕೇಂದ್ರದ ಜವಳಿ ಮಂತ್ರಿ

ವಾರದ ಘೋಷಣೆ

"ಅಮೆರಿಕದ ಕಾರ್ಯದರ್ಶಿ ನೀಗ್ರೊಪಾಂಟೆ ಪಾಕಿಸ್ತಾನಕ್ಕೆ ಬಂದಿರುವುದು ಇಲ್ಲಿ ಮೇಡ್ ಇನ್ ವಾಷಿಂಗ್‌ಟನ್ ಪ್ರಜಾತಂತ್ರ ಸ್ಥಾಪಿಸುವುದಕ್ಕೆ. ನಾವದನ್ನು ಧಿಕ್ಕರಿಸುತ್ತೇವೆ."

-ಇಮ್ರಾನ್ ಖಾನ್

No Comments

"ಬೆಂಗಳೂರಿನಲ್ಲಿ 80 ಮಿಮಿ ಮಳೆಯಾದರೆ ಏನಾದರೂ ಕ್ರಮ ತೆಗೆದುಕೊಳ್ಳಬಹುದು. ಆದರೆ 120 ಮಿಮಿಗಿಂತ ಹೆಚ್ಚಿನ ಮಳೆಯಾದರೆ ನಮ್ಮ ಕೈಯಲ್ಲಿ ಏನು ಮಾಡಲೂ ಆಗುವುದಿಲ್ಲ."

- ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳ



"ಟಿಕೆಟ್ ಸಿಗಲಿಲ್ಲ ಎಂದು ಬೇರೆ ಪಕ್ಷಗಳಿಗೆ ಹೋಗಬೇಡಿ."

- ಸಿದ್ದರಾಮಯ್ಯ

"ಚುನಾವಣೆ ಬಂದಿದೆ. ಯಾರೂ ಪಕ್ಷದೊಳಗೆ ಗುಂಪುಗಾರಿಕೆ ಮಾಡಬೇಡಿ."

-ಮೀರ್ ಬಹಾದ್ದೂರ್,
ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ಅಧ್ಯಕ್ಷ



"ನಮ್ಮದು ಸನ್ಯಾಸಿ ಪಕ್ಷವಲ್ಲ. ಹೈಕಮಾಂಡ್ ಸೂಚನೆ ನೀಡಿದರೆ ನಾವು ಮತ್ತೆ ಜೆಡಿಎಸ್‌ನೊಂದಿಗೆ ಸರ್ಕಾರ ರಚಿಸಲು ಕೂಡಾ ಸಿದ್ಧ."

-ಧರ್ಮಸಿಂಗ್

"ಭಾರತದ ಶಕ್ತಿಯ ಅಗತ್ಯವನ್ನು ಪೂರೈಸಲು ಅಣುಶಕ್ತಿ ಅತ್ಯಗತ್ಯ."

-ಆರ್.ಚಿದಂಬರಂ, ಅಣು ವಿಜ್ಞಾನಿ

ನಂಬಿದ್ರೆನಂಬಿ ಬಿಟ್ರೆಬಿಡಿ



"ದ್ರಾವಿಡ್ ರಾಜೀನಾಮೆಗೆ ಅವರ ಖಾಸಗೀ ಕಾರಣಗಳೇ ಪ್ರಮುಖ."

-ಕಿರಣ್ ಮೋರೆ

"ಹಿಂದೂಗಳ ಭಾವನೆ ಕೆರಳಿಸುವಂಥ ಅಫಿಡವಿಟ್ ಹಾಕಿದವರಿಗೆ ತಕ್ಕ ಶಿಕ್ಷೆ ವಿಧಿಸಬೇಕು."

-ಸೀತಾರಾಂ ಯೆಚೂರಿ




"ನಮ್ಮ ದೇಶದ ಸಂವಿಧಾನಕ್ಕೆ ರಾಮಾಯಣವೇ ಸ್ಫೂರ್ತಿ."

-ರಾಮಾ ಜೋಯಿಸ್

"ಸೂರ್ಯ ಸತ್ತರೂ ಭೂಮಿ ಉಳಿಯುವ ಸಾಧ್ಯತೆ ಇದೆ!"

-ಅಮೆರಿಕದ ವಿಜ್ಞಾನಿಗಳ



"ನನ್ನ ಒಳಗೆ ಒಬ್ಬ ಹೂವಯ್ಯ ಇದ್ದನೆಂದು ಕಾಣುತ್ತದೆ. ಅದು ಈಗ ಹೊರಗೆ ಬಂದಿದೆ."

-ವಿಷ್ಣುವರ್ಧನ್

ಭಜರಂಗಿ ಭಾಷಣವಲ್ಲ, ನ್ಯಾಯಾದೇಶ!!

"..ಆದ್ದರಿಂದ ಸಂವಿಧಾನದ 51-ಎ ಕಲಮಿನ ಪ್ರಕಾರ ಯಾವುದೇ ಧರ್ಮ, ಜಾತಿ, ಪಂಗಡಕ್ಕೆ ಸೇರಿದ್ದರೂ ಭಗವದ್ಗೀತೆಯಲ್ಲಿ ಹೇಳಿರುವ ಧರ್ಮವನ್ನು ಪಾಲಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ."


-ಶ್ರೀ ವಾಸ್ತವ,
ಅಲಹಾಬಾದ್ ಹೈಕೋರ್ಟಿನ ಜಡ್

ಮತ್ತೊಂದು ಸತ್ಯ!

"ಒಟ್ಟಾರೆ ಭಾರತದಲ್ಲಿ ಕೇವಲ 42.72 ಮುಸ್ಲಿಮರು ಮಾತ್ರ ಉರ್ದು ತಮ್ಮ ಮಾತೃಭಾಷೆಯೆಂದು ದಾಖಲಿಸಿದ್ದಾರೆ. ಮುಸ್ಲಿಮರು ಬಹುಸಂಖ್ಯಾತರಾಗಿರುವ ಉತ್ತರ ಪ್ರದೇಶದಲ್ಲೂ ಕೇವಲ 51.5 ಮುಸ್ಲಿಮರು ಮಾತ್ರ ಉರ್ದು ತಮ್ಮ ಮಾತೃ ಭಾಷೆಯೆಂದು ದಾಖಲಿಸಿದ್ದಾರೆ."

-ಕೇಂದ್ರ ಸರ್ಕಾರ ಹೊರತಂದಿರುವ
ಭಾರತದ ಭಾಷಾ ಅಟ್ಲಾಸ್

ಕೇಸರಿ ಕಾಂಗ್ರೆಸ್



"ರಾಮ ನಮ್ಮ ಭಾರತದ ಸಂಸ್ಕೃತಿ ಮತ್ತು ಮೌಲ್ಯಗಳ ಅಂತರ್ಗತ ಭಾಗ ಮತ್ತು ಅದನ್ನು ದಾವೆಗಳ ಮೂಲಕ ಕೋರ್ಟುಗಳು ಪರಿಹಾರ ಮಾಡಬೇಕಾದ ವಿಷಯವಲ್ಲ. ನಮಗೆ ರಾಮ-ಶಿವರ ಬಗ್ಗೆ ಸರಿ ಸಮಾನವಾದ ಶ್ರದ್ಧೆ ಇದೆ."

-ಭಾರದ್ವಾಜ್,
ಕಾಂಗ್ರೆಸ್ಸಿನ ಕಾನೂನು ಮಂತ್ರಿ

ದಕ್ಷಿಣ ಭಾರತದವರು ಕಪಿಗಳಾ?



ಕಂಡಹಾಗೆ

ರಾಮಸೇತುವಿನ ಸುತ್ತ ನಡೆಯುತ್ತಿರುವ ವಾದ-ವಿವಾದಗಳಲ್ಲಿ ನನ್ನದೊಂದು ಪ್ರಶ್ನೆಗೆ ಯಾರಾದರೂ ಉತ್ತರ ನೀಡುತ್ತಾರಾ? ಪ್ರಶ್ನೆ ಏನೆಂದರೆ ರಾಮ ಸೇತುವನ್ನು ರಾಮನೇ ಕಟ್ಟಿದ್ದು-ನಂಬಿಕೆ/ಪುರಾಣ/ಚರಿತ್ರೆ, ಅಥವಾ ಇನ್ನಾವುದೋ ಕಾಗಕ್ಕ-ಗುಬ್ಬಕ್ಕ ಕತೆಯ ಪ್ರಕಾರ-ಎಂಬುದನ್ನು ಸತ್ಯ ಎಂದು ಒಪ್ಪಿಕೊಳ್ಳುವುದಾದರೆ, ಅದೇ ಪ್ರಕರಣ ಕುರಿತಂತೆ ನಾವು ದಕ್ಷಿಣ ಭಾರತದ ಜನ ವಾನರರು-ಅಂದರೆ ಕಪಿಗಳು, ಮಂಗಗಳು-ಎಂಬುದನ್ನು ಒಪ್ಪಿಕೊಳ್ಳಬೇಕಲ್ಲವೇ?

ಈ ಪ್ರಶ್ನೆ ಯಾಕೆಂದರೆ ರಾಮಾಯಣದ ಪ್ರಕಾರ ರಾಮನ ಸೈನ್ಯದಲ್ಲಿ ಇದ್ದದ್ದು ಕಪಿಗಳು. ಆ ಕಾಲದಲ್ಲೇ ರಾಮ ಆದರ್ಶ ಪುರುಷನಾಗಿದ್ದರೂ, ಏಕಪತ್ನಿವ್ರತಸ್ಥನಾಗಿದ್ದರೂ ದಕ್ಷಿಣ ಭಾರತದ 'ಜನ' ಇನ್ನೂ ಮಂಗಗಳಾಗಿಯೇ ಉಳಿದಿದ್ದರಲ್ಲದೆ, ಪಕ್ಕಾ ಕಾಡುಪ್ರಾಣಿಗಳಂತೆ ಜೀವಿಸುತ್ತಿದ್ದರು, ಒಬ್ಬರ ಹೆಂಡಂದಿರನ್ನು ಇನ್ನೊಬ್ಬರು ಲಪಟಾಯಿಸುತ್ತಿದ್ದರು, ವಿವೇಚನಾ ಶಕ್ತಿ ಇಲ್ಲದವರಾಗಿದ್ದರು!

ಕತೆ, ಪುರಾಣ, ಚರಿತ್ರೆ, ಇತಿಹಾಸ, ವಿಜ್ಞಾನ ಇವುಗಳ ನಡುವಿನ ವ್ಯತ್ಯಾಸವನ್ನು ಅರಿಯದ ಜನ "ಹದಿನೇಳು ಲಕ್ಷ ಐವತ್ತು ಸಾವಿರ ವರ್ಷಗಳ ಹಿಂದೆಯೇ ರಾಮನ ವಾನರ ಸೈನ್ಯ ಈ ಸೇತುವೆಯನ್ನು ನಿರ್ಮಿಸಿತ್ತು" ಎಂದು ವಾದಿಸುತ್ತಾರಲ್ಲದೆ, ಬೀದಿಗಿಳಿದು ಮಂಗಗಳಂತೆ ವರ್ತಿಸುತ್ತಾರೆ.

ಎಲ್ಲಾ ಧರ್ಮಗಳಲ್ಲೂ ಅತಿಶಯೋಕ್ತಿ ಎನಿಸುವ ಮೆಟಫರ್‌ಗಳಿರುತ್ತವೆ. ಅಥವಾ ಆ ಧರ್ಮ ಜನಿಸಿದ್ದ ಕಾಲದ ವರ್ತಮಾನದಲ್ಲಿ ಮನುಷ್ಯನ ಅರಿವಿಗೆ ಬಂದಿರುವ ಮಾಹಿತಿಯನ್ನು ಆಧರಿಸಿ ಹಲವು ಕತೆಗಳನ್ನು, ನೀತಿಪಾಠಗಳನ್ನು ಕಟ್ಟಿ ಕೊಡುತ್ತವಲ್ಲದೆ ಮನುಷ್ಯನ ಕಲ್ಪನೆಗೆ ಮೀರಿದ ಶಕ್ತಿಗಳನ್ನು ತಮ್ಮ ದೇವರಿಗೆ ಆರೋಪಿಸಿ ದೈವಶಕ್ತಿಯ ಬಗ್ಗೆ ನಂಬಿಕೆ ಜನಿಸುವಂತೆ ಮಾಡಿರಲಾಗುತ್ತದೆ.

ಉದಾಹರಣೆಗೆ ಕ್ರೈಸ್ತ ಧರ್ಮ ಎರಡು ಸಾವಿರ ವರ್ಷಗಳ ಹಿಂದೆ ಜನಿಸಿದಾಗ ಮಾನವನ ವಿಕಸನದ ಬಗ್ಗೆ ಗೊತ್ತಿರಲಿಲ್ಲ. ಆದ್ದರಿಂದ ಆ ಧರ್ಮದಲ್ಲಿ ಈಡನ್ ಗಾರ್ಡನ್‌ನ ಕಲ್ಪನೆ ಇದೆಯಲ್ಲದೆ, ಭೂಮಿ ಚಪ್ಪಟೆ ಆಗಿದೆ ಎಂದೂ, ಅದರ ಸುತ್ತ ಸೂರ್ಯನೇ ಚಲಿಸುತ್ತಾನೆಂದೂ ಅದರ ಧರ್ಮಗ್ರಂಥ ಬೈಬಲ್‌ನಲ್ಲಿ ದಾಖಲಿಸಲಾಗಿದೆ. ಅಂದಮಾತ್ರಕ್ಕೆ ಇವತ್ತು ಸತ್ಯ ಎಂದು ಸಾಬೀತುಪಡಿಸಲಾಗಿರುವ ಚಾರ್ಲ್ಸ್ ಡಾರ್ವಿನ್‌ನ ವಿಕಾಸವಾದವನ್ನು, ಕೊಪರ್ ನಿಕಸ್‌ನ ಸೌರ ಮಂಡಲದ ರೂಪವನ್ನು ನಿರಾಕರಿಸಲಾಗುತ್ತದೆಯೇ?

ಅಂದಹಾಗೆ ಹದಿನಾರನೇ ಶತಮಾನದಲ್ಲಿ ಕೊಪರ್‌ನಿಕಸ್ ಮತ್ತು 19 ನೇ ಶತಮಾನದಲ್ಲಿ ಚಾರ್ಲ್ಸ್ ಡಾರ್ವಿನ್ ಇಬ್ಬರೂ ಅಂದಿನ ಮೂಲಭೂತವಾದಿ ಕ್ರೈಸ್ತರ ನಿಂದನೆಗೆ ಗುರಿಯಾಗಿದ್ದರು. ನಮ್ಮ ವಿಪರ್ಯಾಸ ಎಂತಹದ್ದೆಂದರೆ ಇವತ್ತು 21 ನೇ ಶತಮಾನದಲ್ಲಿ ವೈಜ್ಞಾನಿಕವಾಗಿ ಲಭ್ಯವಿರುವ ಸಾಕ್ಷ್ಯಗಳನ್ನು ಆಧರಿಸಿ ರಾಮಸೇತುವನ್ನು ರಾಮನಾಗಲಿ, ಆತನ ಮಂಗಗಳ ಸೈನ್ಯವಾಗಲಿ ನಿರ್ಮಿಸಿದ್ದಲ್ಲ ಎಂದು ಹೇಳಿದರೆ "ಹಿಂದೂ ನಂಬಿಕೆಗಳಿಗೆ ಅವಮಾನ" ಎಂದು ಕೂಗಾಡುವವರು, ಪ್ರತಿಭಟನೆಗೆ ಇಳಿಯುವವರು ನಮ್ಮ ಸುತ್ತಲೂ ಇದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಒಬ್ಬ ಮುಸಲ್ಮಾನ್ ಯುವಕ ದೂರದ ಇಂಗ್ಲೆಂಡಿನಲ್ಲಿ ಬಾಂಬ್ ಸ್ಫೋಟಿಸಲು ಯತ್ನಿಸಿದ್ದನ್ನು ಕುರಿತಂತೆ "ಇದು ಕರ್ನಾಟಕಕ್ಕೆ ಅವಮಾನ", "ಬೆಂಗಳೂರು ಎಂಬ ಅಂತರರಾಷ್ಟ್ರೀಯ ಬ್ರಾಂಡ್‌ಗೆ ಕಳಂಕ" ಎಂದೆಲ್ಲಾ ಇದೇ ಚೆಡ್ಡಿಗಳು ಮತ್ತವರ ಬೆಂಬಲಿಗರು ಚೀರಾಡಿದ್ದರು. ಆದರೆ ಇವತ್ತು ವೈಜ್ಞಾನಿಕವೂ ಅಲ್ಲದ, ಐತಿಹಾಸಿಕ ಸತ್ಯವೂ ಅಲ್ಲದ ವಾದವನ್ನು ಇಟ್ಟುಕೊಂಡು ಬೀದಿಗಿಳಿಯುವುದರಿಂದ ಜಗತ್ತಿನ ಮುಂದೆ ಇಡೀ ದೇಶಕ್ಕೆ ತಾವು ಮಾಡುತ್ತಿರುವುದು ಅಪಮಾನ ಎಂಬುದು ಮಾತ್ರ ಇವರ ಮಾಸಿದ ಮಂಡೆಗಳಿಗೆ ಹಾಕುವುದೇ ಇಲ್ಲ.

ಹೋಗಲಿ, ಇಲ್ಲಿಯವರೆಗೂ ಲಭ್ಯವಾಗಿರುವ ಮಾಹಿತಿ ಏನನ್ನು ಹೇಳುತ್ತದೆ ಎಂಬುದಕ್ಕೆ, ಹಲವು ಅಂಕಿಅಂಶಗಳನ್ನು ಗಮನಿಸೋಣ. ಭೂಖಂಡ ಸರಿತ ಸಂಭವಿಸಿ ಇಂದಿನ ವಿವಿಧ ಖಂಡಗಳು ನಿರ್ಮಿತವಾಗಿದ್ದು ಸುಮಾರು 2,00,000,000 ವರ್ಷಗಳ ಹಿಂದೆ. ಅಷ್ಟೇ ಅಲ್ಲ, ಆಧುನಿಕ ಮಾನವ ರೂಪಗೊಂಡಿದ್ದೂ 1,00,000 ವರ್ಷಗಳ ಹಿಂದೆ. ಅದರಲ್ಲೂ ತೀರಾ ಇತ್ತೀಚೆಗೆ ಎನಿಸುವ 10,000 ವರ್ಷಗಳ ಹಿಂದಷ್ಟೇ ಆತ ಕಾಡುಪ್ರಾಣಿಯಂತೆ ಜೀವಿಸುವುದನ್ನು ನಿಲ್ಲಿಸಿ ಕೃಷಿಕನಾಗಿದ್ದು. ಅಂದರೆ ಹತ್ತು ಸಾವಿರ ವರ್ಷಗಳಷ್ಟು ಹಿಂದೆ ಭೂಮಿಯ ಮೇಲೆ ರಾಜರು, ರಾಜವಂಶಗಳು, ಇಂಥದ್ದು ಯಾವುದೂ ಇರಲಿಲ್ಲ.

ಭಾರತದ ಬಗ್ಗೆ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಮಧ್ಯಪ್ರದೇಶದ ಭೀಮ್‌ಬೆಟ್ಟ ಎಂಬಲ್ಲಿ ಲಭ್ಯವಾಗಿರುವ ಮಾಹಿತಿಯ ಪ್ರಕಾರ 9,000 ವರ್ಷಗಳ ಹಿಂದೆ ಇಲ್ಲಿ ಕಾಡುಮಾನವ ವಾಸಿಸುತ್ತಿದ್ದ. ಅದಕ್ಕಿಂತ ಪುರಾತನ ಕಾಲದಲ್ಲಿ ಇಲ್ಲಿ ಮಾನವ ಇದ್ದನೆಂಬುದಕ್ಕೆ ಯಾವುದೇ ಪುರಾವೆಗಳು ಸಿಕ್ಕಿಲ್ಲ. ಅಷ್ಟು ಮಾತ್ರವಲ್ಲ, ಹರಪ್ಪ ನಾಗರಿಕತೆ ಇದ್ದದ್ದು ಸುಮಾರು 4,000 ವರ್ಷಗಳ ಹಿಂದೆ; ಋಗ್ವೇದ ರಚಿತವಾಗಿದ್ದು 3,000 ವರ್ಷಗಳ ಹಿಂದೆ, ರಾಮಾಯಣವನ್ನು ವಾಲ್ಮೀಕಿ ರಚಿಸಿದ್ದು 2,300 ವರ್ಷಗಳ ಕೆಳಗೆ. ತುಳಸಿದಾಸ ತನ್ನ ರಾಮಚರಿತಮಾನಸ ಸೃಷ್ಟಿಸಿದ್ದು 400 ವರ್ಷಗಳ ಹಿಂದೆ.

ಈ ಎಲ್ಲಾ ಅಂಕಿ, ಅಂಶಗಳನ್ನು ಗಣನೆಗೆ ತೆಗೆದುಕೊಂಡು ನೋಡಿದಾಗ "ಹದಿನೇಳು ಲಕ್ಷ ಐವತ್ತು ಸಾವಿರ ವರ್ಷಗಳ ಹಿಂದೆಯೇ ರಾಮ ಈ ಸೇತುವೆಯನ್ನು ನಿರ್ಮಿಸಿದ್ದ" ಎಂದು ಚೆಡ್ಡಿಗಳು ಅರಚುತ್ತಿರುವುದು ಎಷ್ಟು ಹಾಸ್ಯಾಸ್ಪದವಾಗಿ ಕಾಣಿಸುತ್ತದಲ್ಲವೇ?!



* * * * * *

ಇವತ್ತು ಅಡ್ವಾಣಿ ಸೇರಿದಂತೆ ಸಂಘ ಪರಿವಾರದ ಪುಂಡ ಮಂಗಗಳು ಯಾವ ರಾಮಾಯಣವನ್ನಾಧರಿಸಿ ತಮ್ಮ ಈ ಮೊಂಡು ವಾದವನ್ನು ಮಂಡಿಸುತ್ತಿದ್ದಾರೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಅಕಸ್ಮಾತ್ ಅವರು ವಾಲ್ಮೀಕಿಯ ರಾಮಾಯಣವನ್ನೇ ಆಧರಿಸಿ ವಾದಿಸುತ್ತಿದ್ದರೆ, ಅದೇ ವಾಲ್ಮೀಕಿ ರಾಮಾಯಣವನ್ನು ಆಧರಿಸಿ ಪ್ರೋಲಂಕಿ ರಾಮಮೂರ್ತಿಯವರು ಅನುವಾದಿಸಿ ಹೇಳಿರುವುದೆಲ್ಲವನ್ನೂ ಸತ್ಯ ಎಂದೇ ಚೆಡ್ಡಿಗಳು ಒಪ್ಪಿಕೊಳ್ಳಬೇಕಾಗುತ್ತದೆ. ಅದರಲ್ಲೂ ರಾಮನನ್ನು ಷಂಡ, ನಪುಂಸಕ ಎಂದು ಸೀತೆ ಜರಿದದ್ದು, ರಾವಣನನ್ನು ಕಂಡು ಆಕೆ ಕಾಮೋದ್ರೇಕಿತಳಾಗಿದ್ದು, ಇಂತಹದ್ದೇ ಹಲವಾರು ಅಂಶಗಳನ್ನೂ 'ಸತ್ಯ' ಎಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕೆ ಅವರು ಸಿದ್ಧರಿದ್ದಾರೆಯೇ?

ಅವರು ಯಾವ ರಾಮಾಯಣವನ್ನು ಆಧರಿಸಿದ್ದಾರೆ ಎಂಬ ಪ್ರಶ್ನೆ ಯಾಕೆ ಮುಖ್ಯವೆಂದರೆ ನಮ್ಮ ದೇಶದಲ್ಲಿ ವಾಲ್ಮೀಕಿಯಿಂದ ಹಿಡಿದು ಕುವೆಂಪುರವರ ತನಕ ಹಲವಾರು ಜನ ವಿವಿಧ ದೃಷ್ಟಿಕೋನಗಳಿಂದ ರಾಮಾಯಣವನ್ನು ರಚಿಸಿದ್ದಾರೆ.

ರಾಮ್ ಪುಣಿಯಾನಿ ಎಂಬುವವರು ತಮ್ಮ ಇತ್ತೀಚಿನ ಲೇಖನವೊಂದರಲ್ಲಿ ಉಲ್ಲೇಖಿಸಿರುವಂತೆ ಬೌದ್ಧರ ಜಾತಕ ರೂಪಕದ 'ರಾಮಕಥ'ದಲ್ಲಿ ಸೀತೆ ರಾಮನ ಸಹೋದರಿಯೂ ಹೌದು ಹೆಂಡತಿಯೂ ಹೌದು. ಯಾಕೆ ಹೀಗೆಂದರೆ ಜಾತಕದ ರೂಪಕದ ಪ್ರಕಾರ ದಶರಥ ಅಯೋಧ್ಯೆಯ ರಾಜನಾಗಿರಲಿಲ್ಲ, ಬದಲಾಗಿ ವಾರಣಾಶಿಯ ರಾಜನಾಗಿದ್ದ ಮತ್ತು ಅಂದಿನ ಕಾಲದಲ್ಲಿ ವಾರಣಾಶಿ ಪ್ರಾಂತ್ಯದ ಕ್ಷತ್ರಿಯರು ತಮ್ಮ ಜಾತಿ ಮತ್ತು ಕುಲದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಲು ಒಡಹುಟ್ಟಿದವರ ನಡುವೆಯೇ ಮದುವೆಗಳನ್ನು ಮಾಡಿಸುತ್ತಿದ್ದರು. ಹಾಗಾದರೆ ರಾಮನಿಗೂ, ಸೀತೆಗೂ ಏನು ಸಂಬಂಧ ಎಂಬ ಪ್ರಶ್ನೆಗೆ ಚೆಡ್ಡಿಗಳು ಉತ್ತರಿಸುವರೇ?

ಅಂದಹಾಗೆ ಇದೇ ರೂಪಕದಲ್ಲಿ ರಾಮನು ಬುದ್ಧನ ಅನುಯಾಯಿ ಆಗಿದ್ದ. ಹಾಗೆಯೇ ಜೈನರ ಸಾಹಿತ್ಯದಲ್ಲಿ ರಾಮ ಬ್ರಾಹ್ಮಣ್ಯದ ವಿರೋಧಿ ಮಾತ್ರವಲ್ಲ, ಅಹಿಂಸಾವಾದಿಯೂ ಹೌದು. ಅಷ್ಟೇ ಅಲ್ಲದೆ ಬೌದ್ಧರ ಮತ್ತು ಜೈನರ ಸಾಹಿತ್ಯದಲ್ಲಿ ರಾವಣ ಓರ್ವ ವಿಲನ್ ಆಗಿರದೆ ಆತ ಜ್ಞಾನವನ್ನು ಆರಾಧಿಸುತ್ತಿದ್ದ, ಸಂತನಾಗಿದ್ದ, ಆಧ್ಯಾತ್ಮಿಕ ವ್ಯಕ್ತಿಯಾಗಿದ್ದ ಮತ್ತು ಜವಾಬ್ದಾರಿಯುತ ಯುವರಾಜನಾಗಿದ್ದ. ಇವೆಲ್ಲದರೊಂದಿಗೆ, ರಂಗನಾಯ್ಕಮ್ಮ ಎಂಬುವವರು ತೆಲುಗು ಬ್ರಾಹ್ಮಣ ಮಹಿಳೆಯರು ಹಾಡುತ್ತಿದ್ದ ರಾಮಗೀತೆಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಹೇಗೆ ಸೀತೆಗೆ ಪ್ರಾಮುಖ್ಯತೆ ಇದೆ ಎಂದೂ, ಕೊನೆಗೆ ರಾಮನ ವಿರುದ್ಧ ಸೀತೆಯೇ ಗೆಲ್ಲುತ್ತಾಳೆಂದೂ, ತನ್ನನ್ನ ವಿಕೃತಗೊಳಿಸಿದ್ದ ಶೂರ್ಪನಖಿ ಹೇಗೆ ರಾಮನ ಮೇಲೆ ತನ್ನ ಸೇಡು ತೀರಿಸಿಕೊಳ್ಳುತ್ತಾಳೆಂದೂ ಸಾಬೀತುಪಡಿಸಿದ್ದಾರೆ. ಇನ್ನು ಭಾರತದ ಹೊರಗೆ ಥೈಲ್ಯಾಂಡ್ ಮತ್ತು ದೇಶಗಳಲ್ಲಿನ ರಾಮಾಯಣದ ರೂಪಕಗಳಲ್ಲಿ ರಾಮ ಬೆನ್ನಲುಬಿಲ್ಲದವನಂತಿದ್ದು, ಆತನಿಗಿಂತ ಸಹೋದರ ಲಕ್ಷ್ಮಣವೇ ಮುಖ್ಯವಾಗಿದ್ದಾನೆ.

* * * * * *

ಹೀಗಿರುವಾಗ ಈ ಯಾವ ರಾಮಾಯಣಗಳನ್ನು ಆಧರಿಸಿ ಸಂಘ ಪರಿವಾರದವರು ಇಷ್ಟೊಂದು ರಾಮಾಯಣ ಮಾಡುತ್ತಿದ್ದಾರೆ? ಈ ಪ್ರಶ್ನೆ ಯಾಕೆ ಮುಖ್ಯವೆಂದರೆ ಅವರು ಯಾವುದೇ ರಾಮಾಯಣವನ್ನಾಧರಿಸಿದ್ದರೂ ಅದರ ಹಿಂದಿರುವ ಚೆಡ್ಡಿಗಳ ಕುತಂತ್ರ ರಾಜಕೀಯಕ್ಕೆ ಇವತ್ತು ಹಲವಾರು ಸವಾಲುಗಳು ಎದುರಾಗುತ್ತವೆ; ಶೂದ್ರರಿಂದ, ಹಿಂದುಳಿದವರಿಂದ, ದಲಿತರಿಂದ, ಮಹಿಳೆಯರಿಂದ.... ಯಾರನ್ನು 'ಹಿಂದೂ'ಗಳು ಎಂದು ಕರೆದು ಮೋಸ ಮಾಡುತ್ತಿದ್ದಾರೋ ಅವರೇ ಚೆಡ್ಡಿಗಳ ವಿರುದ್ಧ ತಿರುಗಿ ಬೀಳುತ್ತಾರೆ...

* * * * * *

ಯಾವುದನ್ನು ಇವತ್ತು ರಾಮಸೇತು ಎಂದು ಕರೆಯುತ್ತಿದ್ದಾರೋ ಅದರ ವಿಷಯಕ್ಕೆ ಬರುವುದಾದರೆ ಪ್ರಕೃತಿಯೇ ಸಹಜವಾಗಿ ನಿರ್ಮಿಸಿರುವ ಅಂತಹ ಹಲವಾರು 'ಸೇತು'ವೆಗಳು ಜಗತ್ತಿನಾದ್ಯಂತ ಇವೆ. ಮುಖ್ಯವಾಗಿ ಎರಡು ದ್ವೀಪಗಳ ನಡುವೆ ಅಥವಾ ಒಂದು ದ್ವೀಪ ಮತ್ತು ಅದರ ಹತ್ತಿರದಲ್ಲೇ ಇರುವ ಮತ್ತೊಂದು ಭೂಭಾಗದ ನಡುವೆ ಇಂತಹ 'ಸೇತುವೆ'ಗಳನ್ನು ಕಾಣಬಹುದು. ಯಾಕೆಂದರೆ, ದ್ವೀಪದ ಸುತ್ತಲಿನ ಸಮುದ್ರದ ಅಲೆಗಳು- ಅದರಲ್ಲೂ ಭಾರತದ ದಕ್ಷಿಣ ಭಾಗದ ಪೆನಿನ್‌ಸ್ಯುಲ ಆಕಾರದ ಸುತ್ತ ಸಾಗುವ ಸಮುದ್ರದ ಅಲೆಗಳು-ವಿವಿಧ ದಿಕ್ಕುಗಳಿಂದ ಅಪ್ಪಳಿಸುತ್ತಾ ತಮ್ಮ ಆಳದಲ್ಲಿರುವ ಮಣ್ಣು, ಕಲ್ಲು, ಹೂಳು, ಜಲ್ಲಿ ಇತ್ಯಾದಿಗಳನ್ನು ಹೀಗೆ ಒಂದೆಡೆ ಸಂಗ್ರಹಿಸುತ್ತದೆ. ಹೀಗೆ ಸಾವಿರಾರು ವರ್ಷಗಳ ಕಾಲ ಸಂಗ್ರಹವಾಗಿ ಕ್ರಮೇಣವಾಗಿ ಅವು 'ಸೇತುವೆ'ಗಳಾಗುತ್ತವೆ. ನಿಸರ್ಗದಲ್ಲಿ ಆಗಾಗ್ಗೆ ಆಗುವ ವ್ಯತ್ಯಾಸಗಳಿಂದ ಹಲವೊಮ್ಮೆ ಸಮುದ್ರದ ನೀರಿನ ಪ್ರಮಾಣದಲ್ಲಿ ಕಡಿಮೆಯಾಗಿ ಇಂತಹ ಸೇತುವೆಗಳು ಕಣ್ಣಿಗೆ ಕಾಣಿಸುತ್ತವೆ, ಆದರೆ ಬಹಳಷ್ಟು ಕಾಲ ಅವು ನೀರಿನಡಿಯೇ ಇರುತ್ತವೆ. ಇಂತಹ 'ಸೇತುವೆ'ಗಳು ದ್ವೀಪ ದೇಶವಾದ ಇಂಗ್ಲೆಂಡ್ ಮತ್ತದರ ಸುತ್ತ ಇರುವ ಸಣ್ಣದ್ವೀಪಗಳ ನಡುವೆಯೂ ಇವೆ. ಹಾಗೆಯೇ ಅಮೆರಿಕಾ, ಹಾಂಗ್‌ಕಾಂಗ್, ಆಫ್ರಿಕಾದ ಹಲವು ದೇಶಗಳ ಮತ್ತು ಅವುಗಳ ಹತ್ತಿರದಲ್ಲಿರುವ ದ್ವೀಪಗಳ ನಡುವೆಯೂ ಇವೆ. ಹಾಗೆ ನೋಡಿದರೆ ಇವತ್ತು ನಮ್ಮ ದೇಶದ ಬಾಹ್ಯಾಕಾಶ ಸಂಶೋಧನೆಗೆ ಪ್ರಮುಖ ಕೇಂದ್ರವಾಗಿರುವ ಶ್ರೀಹರಿಕೋಟ ಹತ್ತಿರವೂ ಇಂತಹದ್ದೇ ನೈಸರ್ಗಿಕ ನಿರ್ಮಿತ 'ಸೇತುವೆ'ಯೂ ಸಿಗಬಹುದು.

ಅದನ್ನೂ ರಾಮನ ಇನ್ನೊಂದು ಅವತಾರವಾದ ವಿಷ್ಣು ನಿರ್ಮಿಸಿದ್ದು ಎಂದು ವಾದಿಸುತ್ತಾ ಚೆಡ್ಡಿಗಳು ಬೀದಿಗೆ ಬಿದ್ದರೆ ಏನನ್ನಬೇಕು?

* * * * * *

ಇವತ್ತು ಕಾಂಗ್ರೆಸ್ ಪಕ್ಷ ನ್ಯಾಯಾಲಯದ ಮುಂದೆ ರಾಮ ಓರ್ವ ಐತಿಹಾಸಿಕ ಪುರುಷನೆಂದಾಗಲಿ; ರಾಮಾಯಣ ಒಂದು ಸಾಹಿತ್ಯ ಕೃತಿ ಅಷ್ಟೇ, ಅದನ್ನು ಐತಿಹಾಸಿಕ ದಾಖಲೆಯೆಂದಾಗಲಿ ಪರಿಗಣಿಸಲಾಗುವುದಿಲ್ಲ ಎಂದು ಹೇಳಿದ್ದಕ್ಕೆ ಸಂಘ ಪರಿವಾರ "ಹಿಂದೂ ಭಾವನೆಗೆ ಅವಮಾನ ಮಾಡಲಾಗಿದೆ" ಎಂದು ಅಸಂಬದ್ಧವಾಗಿ ವಾದಿಸಿ 'ಹೋರಾಟ' ಮಾಡುತ್ತಿದೆ.

ಈ ಸಂಘ ಪರಿವಾರ ಮತ್ತದರ ಬೆಂಬಲಿಗರು ಎಂತಹವರೆಂದರೆ ಈ ದೇಶದಲ್ಲಿ ಕಬ್ಬು ಬೆಳೆದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ಅದು ಅವರಿಗೆ ಒಂದು ಮುಖ್ಯವಾದ ಇಷ್ಯೂ ಆಗುವುದಿಲ್ಲ. ಹೀಗೆ ಕಬ್ಬು ರೈತರನ್ನು ಆತ್ಮಹತ್ಯೆಗೆ ದೂಡುತ್ತ ವಿದೇಶಗಳಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಿದ್ದರೆ ಅದೂ ಇಷ್ಯೂ ಆಗುವುದಿಲ್ಲ.

ಗೋದಿ ಬೆಳೆದ ರೈತರು ಕೂಡ ತಕ್ಕ ಬೆಳೆ ಸಿಗದೆ ತಲೆ ಮೇಲೆ ಕೈ ಹೊತ್ತು ಕೂತಿರುವಾಗಲೇ ನಮ್ಮ ಘನ ಸರ್ಕಾರ ಹೆಚ್ಚು ಬೆಲೆ ತೆತ್ತು ವಿದೇಶಗಳಿಂದ ಗೋಧಿಯನ್ನು ಖರೀದಿಸಿದ್ದರೂ ಅದೂ ಈ ಚೆಡ್ಡಿಗಳಿಗೆ ಇಷ್ಯೂ ಆಗುವುದಿಲ್ಲ. ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ, ಮಹಿಳೆಯರ, ಮಕ್ಕಳ ಮೇಲೆ ಪ್ರತಿನಿತ್ಯ ದೌರ್ಜನ್ಯ ಅತ್ಯಾಚಾರ ನಡೆಯುತ್ತಿದ್ದರೂ ಇವ್ಯಾವುದೂ ಚೆಡ್ಡಿಗಳಿಗೆ ಬೀದಿಗೆ ಬಂದು ಹೋರಾಟ ಮಾಡುವ ಇಷ್ಯೂಗಳಾಗುವುದಿಲ್ಲ.

ರಾಮಾಯಣ ಒಂದು ಪೌರಾಣಿಕ ಕತೆ. ಅದರಲ್ಲಿ ಇಷ್ಟವಾಗದಿರುವಂತಹದ್ದು, ವಿಮರ್ಶಿಸಬೇಕಾದದ್ದು, ವಿಶ್ಲೇಷಿಸಬೇಕಾದದ್ದು ಬಹಳಷ್ಟು ಇದೆ. ಆದರೆ ಆ ಕತೆಯನ್ನೇ ಇತಿಹಾಸವೆಂದು ವಾದಿಸುತ್ತಾ, ಅವಮಾನವಾಗಿದೆ ಎಂದು ಚೀರಾಡುತ್ತಾ ಹೋರಾಟ ಮಾಡುವುದು ಮಾತ್ರ ಅಸಹ್ಯ ತರುತ್ತದೆ.

ಜಾತೀಯತೆಯನ್ನು ಬೆಂಬಲಿಸುವ, ಇತರೆ ಧರ್ಮಗಳ ವಿರುದ್ಧ ಕಿಡಿಕಾರುವ, ಮಹಿಳೆಯರನ್ನು ಬೆಂಕಿಗೆ ದೂಡಿ ಸತಿಸ್ಥಾನ ನೀಡುವ, ಹಿಂದುಳಿದವರನ್ನು ಕಡೆಗಣಿಸುವ, ದಲಿತರನ್ನು ಅಸ್ಪೃಶ್ಯರೆಂದು ಕರೆಯುವ ಮನುವಾದಿ ಹಿಂದೂತ್ವವಾದಿಗಳು ಇವತ್ತು ತಮ್ಮ ಇಂತಹ ನಿಲುವುಗಳಿಂದ ಇಡೀ ದೇಶವನ್ನೇ ಅಸಹ್ಯವಾಗಿಸಿದ್ದಾರೆ.

ಭಾರತವನ್ನು, ಭಾರತೀಯರನ್ನು, ಭಾರತದ ಮಾನ ಮರ್ಯಾದೆಗಳನ್ನು ಉಳಿಸಬೇಕಿದ್ದರೆ ಹಿಂದೂತ್ವವಾದಿಗಳಲ್ಲಿ ಮನೆ ಮಾಡಿರುವ ಮನುವಾದವನ್ನು ತೊಲಗಿಸಬೇಕಿದೆ. ಆಗ ಮಾತ್ರ ಇಲ್ಲೊಂದಿಷ್ಟು ಪ್ರಗತಿ, ಜ್ಞಾನ, ಅಭಿವೃದ್ಧಿ, ವಿವೇಚನೆಗಳನ್ನು ಕಾಣಲು ಸಾಧ್ಯ...

-ಗೌರಿ ಲಂಕೇಶ್

ತುಮಕೂರು ಜಿಲ್ಲೆ ಪೂರ್ತಿ ಈಗ ಲೀಲಾವತಿಯದ್ದೆ ಮಾತು, ಆರ್ಭಟ...!

ಚನ್ನಿಗಪ್ಪ ಜಿಲ್ಲಾ ಉಸ್ತುವಾರಿ ಸಚಿವನೇನೊ ಹೌದು. ಆದರೆ ಅವನ ಉಸ್ತುವಾರಿಯನ್ನೇ ಲೀಲಾ ಎಂಬ ನಲವತ್ತರ ಸುಂದರಿ ನೋಡಿಕೊಳ್ಳುತ್ತಿದ್ದಾಳೆ. ಹೆಸರಿಗೆ ಕೋ-ಚಾ ಸರ್ಕಾರ ಅಂತಿದ್ದರೂ, ಹೇಳಿಕೊಳ್ಳಲಿಕ್ಕೆ ಬೇರ್‍ಯಾವ ಸಾಧನೆ ಇರದಿದ್ದರೂ ಹಾಲಿ ಸಮ್ಮಿಶ್ರ ಸರ್ಕಾರದ ಕೆಲವು ಮಂತ್ರಿ, ಶಾಸಕರುಗಳ ಸ್ತ್ರೀವಿನೋದ, ಭುಜಬಲ ಪರಾಕ್ರಮ ಸಾಹಸಗಳಿಗಂತೂ ಕೊರತೆಯಿಲ್ಲ.



ಲೀಲಾವತಿ

ಆರಣ್ಯ ಮಂತ್ರಿ ಚನ್ನಿಗಪ್ಪನೂ ಈಗ ಅದೇ ಲಿಸ್ಟಿಗೆ ಸೇರುತ್ತಿದ್ದಾನೆ. ಬಾಯಿ ಬಿಟ್ಟರೆ ಹೊಲಸು ಮಾತು, ಕೈ ಎತ್ತಿದರೆ ಹಲ್ಲಾ ಚಲನೆಗಳ ಸಂಸ್ಕೃತಿಯಿರುವ ಚನ್ನಿಗಪ್ಪ ತುಮಕೂರಿನ ಜಿಲ್ಲಾ ಉಸ್ತುವಾರಿ ಸಚಿವ ಹೌದು. ಆದರೆ ಈ ಅವಿವೇಕಿಗೆ ಜಿಲ್ಲಾ ಉಸ್ತುವಾರಿ ಅಂದರೆ ಜಿಲ್ಲಾ ಜೆಡಿಎಸ್ ನಾಯಕಿಯರ ಉಸ್ತುವಾರಿ, ಲಾಲನೆ ಪೋಷಣೆ ಅಂತ ಯಾರೋ ಹೇಳಿ ಕೊಟ್ಟಿರಬೇಕು. ಹಾಗಾಗಿ ಈಗ ಲೀಲಾ ವಿನೋದಗಳಲ್ಲೇ ತನ್ನ ಮಂತ್ರಿಗಿರಿಯ ಕೊನೆ ದಿನಗಳನ್ನು ಸವೆಸುತ್ತಿದ್ದಾನೆ.


ಕೊಡೈಕೆನಾಲ್, ಬೆಂಗಳೂರು ಎಂದು ಕಾರ್ ಹತ್ತುವ ಲೀಲಾ ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಹೊನ್ನಮಾರನ ಹಳ್ಳಿಯವಳು. ಅಶೋಕ್ ಎಂಬಾತನೊಂದಿಗೆ ಮದುವೆಯಾಗಿ ಈಗ್ಗೆ 15 ವರ್ಷಗಳ ಹಿಂದೆ ತುಮಕೂರಿಗೆ ಕಾಲಿಟ್ಟ ಲೀಲಾ ನಾನಾ ಕೆರೆ ನೀರು ಕುಡಿದು ಈಗ ವಾರ್ಡ್ ನಂಬರ್ 26 ರಿಂದ ಕೌನ್ಸಿಲ್ ಎಲೆಕ್ಷನ್‌ಗೆ ನಿಲ್ಲುವ ಹಂತಕ್ಕೆ ಬಂದಿದ್ದಾಳೆ. ಜೆ.ಪಿ. ನಾರಾಯಣಸ್ವಾಮಿಯ ಲಿಕ್ಕರ್ ಕಂಪನಿಯಲ್ಲಿ ಉದ್ಯೋಗಕ್ಕಿದ್ದ ಗಂಡ ಅಶೋಕ್ ಈಗ ಬದುಕಿಲ್ಲ, ಅವನ ಕೊಲೆಯಾಯಿತು ಅಂತ ಕೆಲವರು ಹೇಳಿದರೆ, ಅದು ಆತ್ಮಹತ್ಯೆ ಎಂತಲೂ ರೂಮರುಗಳಿವೆ.

ಅಶೋಕ್ ಬದುಕಿದ್ದಾಗ ಜೆಪಿ ಕಂಪೆನಿಯ ಲಿಕ್ಕರ್ ವ್ಯವಹಾರ ತುಮಕೂರಿನಿಂದ ಚಿಕ್ಕನಾಯಕನ ಹಳ್ಳಿಗೆ ಶಿಫ್ಟ್ ಆಗಿತ್ತು, ಕೆಲಸಕ್ಕೆಂದು ಅಶೋಕ್ ಚಿ.ನಾ.ಹಳ್ಳಿಗೆ ಹೋದರೆ ಲೀಲಾ ತುಮಕೂರಿನಲ್ಲೇ ತಾವು ಬಾಡಿಗೆಗಿದ್ದ ತರಕಾರಿ ಜಯಮ್ಮಳ ಮನೆಯಲ್ಲೇ ಉಳಿದರು. ಮುಂದೆ ಕೆಲವೇ ದಿನಗಳಲ್ಲಿ ಜಯಮ್ಮ 'ಮನೆ ಖಾಲಿ ಮಾಡು' ಅಂತ ಗಲಾಟೆ ಶುರು ಮಾಡಿದಾಗಲೇ ಜನರಿಗೆ ಲೀಲಾಳ ವಿನೋದ ಚಟುವಟಿಕೆಗಳ

ಪೊಲೀಸರ ಲೀಲೆ


ಎಸ್ಪಿ ಹರಿಶೇಖರನ್

ತುಮಕೂರು ಟೌನಿನ ಕೆಲ ಪೊಲೀಸ್ ಆಫೀಸರ್‌ಗಳಿಗೆ ಲೀಲಾ ಆಂಟಿ ಅಂದ್ರೇನೆ 'ಒಂದೇ ಒಂದು ಸಾರಿ ಕಣ್ಮುಂದೆ ಬಾರೆ' ಎಂಬಂಥ ಕನವರಿಕೆ. ಡಿವೈಎಸ್‌ಪಿ ಅರಿಫುಲ್ಲಾ, ಪ್ರಭಾಕರ್‌ಗೆ ರೂರಲ್ ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ, ತಿಲಕ್ ಪಾರ್ಕಿನ ಶ್ರೀನಿವಾಸ, ಕ್ಯಾತ್ಸಂದ್ರದ ಸಿಐಪಿ ಧರ್ಮೇಂದ್ರ ಇವರೆಲ್ಲರಿಗೂ ಲೀಲಾಳ ವಿನೋದಾವಳಿಗಳ ಬಗ್ಗೆ, ಅವಳ Fun World ಬಗ್ಗೆ ಚೆನ್ನಾಗೇ ಪರಿಚಯವಿದೆ. ಆದರೆ ಯಾವನೂ ಈ ದಂಧೆ ನಿಲ್ಲಿಸಬೇಕೆಂದು ಒಂದೇ ಒಂದು ದಿನ ಲಾಠಿ ಎತ್ತಿ ಯಾರ ಕುಂಡೆ ಮೇಲೂ ಒಂದೇಟು ಹೊಡೆದವರಲ್ಲ.


ಡಿವೈಎಸ್ಪಿ ಪ್ರಭಾಕರ್

ಈ ಹಿಂದೆ ಲೀಲಾಳ ಮನೆ ರೈಡಿಗೆಂದು ಹೋದ ಪೊಲೀಸ್ ವೀರರೆಲ್ಲಾ ಹೊರಬರುವಾಗ ಕಾನೂನು ಪಾಲನೆ ಮಾಡಿಬಂದವರಂತೆ ಕಾಣುವ ಬದಲಾಗಿ ಕಾಮಸೂತ್ರ ಪಠಣೆ ಮಾಡಿ ಹೊರಬಂದವರಂತೆ ಜನರಿಗೆ ಗೋಚರಿಸಿದ್ದಾರೆ. ಇದ್ದುದರಲ್ಲಿ ಈಗ ತುರುವೆಕೆರೆ ಸಿಐಪಿ ಆಗಿರುವ ಖಾದರ್ ತುಮಕೂರಿನ ಎಕ್ಸ್‌ಟೆನ್ಷನ್ ಠಾಣೆಯಲ್ಲಿದ್ದಾಗ ಒಂದು ಸಾರಿ ರೇಡು ನಡೆಸಿ ಲೀಲಾಳ ಮಾನ ಲೀಲಾವು ಮಾಡಿದ್ದರು. ಆದರೆ ಈಗ ಲೀಲಾಳ ಸೆರಗಿನ ಹಿಂದೆ ಖುದ್ದು ಚೆನ್ನಿಗಪ್ಪ ಅಂಡ್ ಸನ್ಸ್‌ಗಳ ಜೋಭದ್ರಗೇಡಿ ಮುಖಗಳೇ ಪೊಲೀಸರಿಗೆ ಕಾಣಿಸುತ್ತಿರುವುದರಿಂದ ಅವರ ಮೀಟರೂ ಆಫ್ ಆಗಿಹೋಗಿದೆ.

ಇನ್ನು ಎಸ್‌ಪಿ ಹರಿಶೇಖರನ್ ತಾನೊಬ್ಬ ಟೈಗರ್ ಎಂದು ಮೀಸೆ ತಿರುವಿಕೊಂಡರೂ ಅದೊಂದು ಪೇಪರ್ ಟೈಗರ್ ಬಿಡ್ರಿ ಅಂತ ಲೀಲಾಳೇ ಕೇರ್ ಮಾಡುತ್ತಿಲ್ಲ.


ಲಲಿತಾ-ಸವಿತಾ ಎಂಬ ಸ್ತ್ರೀರತ್ನಗಳೂ ಅಲ್ಲೊಂದು ಮನೋರಂಜನಾ ತಾಣ ನಡೆಸುತ್ತಿದ್ದರಾದ್ದರಿಂದ ಇಬ್ಬರಲ್ಲೂ ಪೈಪೋಟಿ ಶುರುವಾಗಿ ಗಲಾಟೆಯಾಗಿತ್ತು. ನಂತರ ಏನಾಯಿತೋ, ಹೇಗಾಯಿತೋ ಇವತ್ತಿಗೂ ಪತ್ತೆಯಾಗಿಲ್ಲ, ಗಲಾಟೆಯಾದ ಒಂದೇ ತಿಂಗಳಲ್ಲಿ ಲಲಿತಾ

ಹಾಗೆ ಹೊರಟವಳು ನೇರ ಬೀದರಿಗೆ ಹೋಗಿ ಅಶೋಕನೊಂದಿಗಿದ್ದಳು. ಅಲ್ಲಿಗೆ ಹೋದ ಕೆಲವೇ ದಿನಗಳಲ್ಲಿ ಆಗರ್ಭ ಶ್ರೀಮಂತ ಲಿಂಗಾಯತ ಹುಡುಗನೊಬ್ಬನನ್ನು ಕರೆದುಕೊಂಡು ಮತ್ತೆ ತುಮಕೂರಿಗೆ ವಾಪಸ್ ಬಂದಳು. ಆ ಹುಂಬ ಯುವಕ ಮನೆಯಿಂದ ಒಂದಿಷ್ಟು ಹಣ ಕದ್ದುಕೊಂಡು ಬಂದಿದ್ದ. ಕೆಲಕಾಲ ಈ ಜೋಡಿ ತುಮಕೂರಿನಲ್ಲಿದ್ದು ಆಮೇಲೆ ಚಿಕ್ಕಮಗಳೂರಿಗೆ ಹೋಯಿತು. ಅಲ್ಲಿ ಸೋಪು, ಪೌಡರ್ ಮಾರಲು ಶುರು ಮಾಡಿದ ಲೀಲಾ ತನ್ನತ್ತ ಆಕರ್ಷಿತರಾದ ಗಂಡಸರ ಪ್ಯಾಂಟು ಒಗೆಸಿ ಜೇಬು ಖಾಲಿ ಮಾಡತೊಡಗಿದಳು.

ಅಷ್ಟರಲ್ಲಿ ತಲೆರೋಸಿ ಖಾಲಿ ಕೈಯಾಗಿದ್ದ ಹುಡುಗನನ್ನು ಬೀದರಿನಿಂದ ಬಂದ ಅವನ ಬ್ಯಾಂಕ್ ಅಧಿಕಾರಿ ತಂದೆ ವಾಪಸ್ ಕರೆದೊಯ್ದರು. ಆದರೆ ಲೀಲಾ ಯಾಕೆ ಸುಮ್ಮನಿದ್ದಾಳು. ಅವರನ್ನು ಬೀದರ್‌ವರೆಗೂ ಹಿಂಬಾಲಿಸಿಕೊಂಡು ಹೋಗಿ ಪರಿಹಾರವೆಂದು ಒಂದಷ್ಟು ಹಣ ಕಿತ್ತಳು. ಅವಳ ಗಂಡ ಅಶೋಕ್ ಆಗಲೇ ಬೀದರ್‌ನಲ್ಲಿ ಸತ್ತ. ಇದು ಹೇಗಾಯಿತೆಂಬುದು ಈಗಲೂ ಪತ್ತೆಯಾಗಿಲ್ಲ, ಅಲ್ಲಿಂದ ನೇರ ತುಮಕೂರಿಗೆ ಬಂದ ಲೀಲಾ ಹಾಲಿ ಕುಣಿಗಲ್ ಶಾಸಕ ನಿಂಗಪ್ಪನವರ ಮನೆ ಪಕ್ಕ ಮನೆ ಮಾಡಿಕೊಂಡು ತನ್ನ ಮಾಮೂಲಿ ಫನ್‌ವರ್ಲ್ಡ್ ಚಾಲೂ ಮಾಡಿ ವೇಗವಾಗಿ ಬೆಳೆದಳು. ಅಲ್ಲಿ ಇಲ್ಲಿ ಓಡಾಡುತ್ತಾ ಕೊನೆಗೆ ಜೆಡಿಎಸ್ ಸೇರಿ ಈಗ ಚನ್ನಿಗಪ್ಪನ ಖಾಸಗಿ ಮನೆ ಹಾಗೂ ಮನಸ್ಸನ್ನೆಲ್ಲಾ ಆವರಿಸಿಕೊಂಡು ಬಿಟ್ಟಿದ್ದಾಳೆ.

ಮುಂಗೋಪಿ ಚನ್ನಿಗಪ್ಪ ಎಂಥ ಖರಾಬ್ ಮೂಡಿನಲ್ಲೇ ಇರಲಿ, ಕೋಪಾವಿಷ್ಟನಾಗಿರಲಿ ಲೀಲಾ ಮುಖ ಕಂಡೇಟಗೇ ಈ ಪ್ಯಾದೆ ಮುಖ ಅರಳುವುದನ್ನು ಅವನ ಚೇಲಾಗಳೆಲ್ಲಾ ನೋಡಿ ಬೆರಗಾಗುತ್ತಿದ್ದಾರೆ. ಅಷ್ಟೇ ಅಲ್ಲ ಲೀಲಾ ಹಿಡಿದು ತರುವ ಟ್ರಾನ್ಸ್‌ಫರ್ ಕೇಸುಗಳೆಲ್ಲಾ ಕ್ಲಿಕ್ ಆಗುವುದನ್ನು ನೋಡಿ ವರ್ಗಾ ದಂಧೆಕೋರರೆಲ್ಲಾ ದಂಗಾಗುತ್ತಿದ್ದಾರೆ. ಲಕ್ಷಣವಾಗಿರುವ ಜೆಡಿಎಸ್ ಮಹಿಳಾ ವರ್ಕರುಗಳನ್ನು ಗುರುತಿಸಿ 'ನನ್ ಜೊತೆ ಬನ್ನಿ, ದುಡ್ಡು ಮಾಡೋ ದಾರಿ ತೋರುಸ್ತೀನಿ' ಅನ್ನುವುದು ಲೀಲಾಳ ನಿತ್ಯದ ಸುಪ್ರಭಾತ. ಲಕ್ಷ್ಮಿ, ಪುಟ್ಟಮ್ಮರಂಥವರು ಇದಕ್ಕೆ ತಲೆದೂಗಿ ಈಗಾಗಲೇ ಲೀಲಾ ತೋರಿಸಿದ ಮೋಕ್ಷದ ದಾರಿ ಹಿಡಿಯುತ್ತಿದ್ದಾರೆ. ತುಮಕೂರು ಪೊಲೀಸರು ಡ್ಯೂಟಿ ಮಾಡಿ

ಚನ್ನಿಗಪ್ಪನ 'ಲೀಲಾ' ವಿನೋದ!



ಹೀಗೆ ಚನ್ನಿಗಪ್ಪನ ದಾರಿ ತಪ್ಪಿಸಿ ಅದನ್ನೇ ತನ್ನ ಲಾಭ, ಲೋಭ, ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವುದು ಲೀಲಾವತಿ ಎಂಬ ಮಹಿಳಾಮಣಿ.


ಗೌರಿಶಂಕರ


ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿರುವ ಲೀಲಾವತಿ ರಾಜ್ಯ ರಾಜಕೀಯದಲ್ಲಿ ನಡೆಸುತ್ತಿರುವ ವಿನೋದ ಚಟುವಟಿಕೆಗಳನ್ನು ನೋಡುತ್ತಿದ್ದರೆ, ಇನ್ನೇನು ಕೆಲವೇ ದಿನಗಳಲ್ಲಿ ರಾಧಿಕಾ, ಶೋಭಾರಂತೆ ಕೀರ್ತಿ, ಪ್ರಸಿದ್ಧಿ ಪಡೆಯುವುದು ಗ್ಯಾರಂಟಿ ಎನ್ನುವಂತಿದೆ. ಈ ಲೀಲಾವತಿಯ ವಶೀಕರಣ ವಿದ್ಯೆಗೆ ಶರಣಾಗಿರುವುದು ಒಬ್ಬ ಚನ್ನಿಗಪ್ಪ ಮಾತ್ರ ಅಲ್ಲ, ಅವನ ಇಬ್ಬರು ಪುತ್ರರತ್ನರುಗಳಾದ ಗೌರಿಶಂಕರ ಮತ್ತು ಕುಮಾರ್ ನಿಗೂ ಈ ಲೀಲಾವತಿ ವಿನೋದ ಚೇಷ್ಟೆಗಳನ್ನು ಕಲಿಸಿಕೊಟ್ಟಿದ್ದಾಳೆಂಬ ಸುದ್ದಿ ಇಡೀ ತುಮಕೂರಿನಲ್ಲಿ ಹರಿದಾಡುತ್ತಿದೆ. ಆದರೆ ಒಬ್ಬ ಚನ್ನಿಗಪ್ಪ ಮಾತ್ರ ಲೀಲಾವತಿ ಮುಖದರ್ಶನವಾದರೆ ಸಾಕು 'ಏನೋ ಲೀಲಾ, ಬಾರೋ ಬಾ' ಎನ್ನುತ್ತಾ ಚಪಲ ಚೆನ್ನಿಗರಾಯನಂತಾಡುತ್ತಿದ್ದಾನೆ. ಇದರಿಂದಾಗಿ ಇವತ್ತು ತುಮಕೂರು ಜಿಲ್ಲೆಯಲ್ಲಿ ಜನತಾದಳದ ಮಹಿಳೆಯರೆಂದರೆ 'ಏನೋ ಒಂಥರಾ' ಎಂಬ ಅಭಿಪ್ರಾಯ ಬೆಳೆಯುತ್ತಿದೆ. ಈ ಲೀಲಾವತಿ, ಆಶಾ ಕಾಶೀನಾಥ್ ಥರದ ನಿರ್ಲಜ್ಜರಿಂದಾಗಿ ಮಾನವಂತರ ಮಹಿಳೆಯರು ರಾಜಕೀಯ ಬಿಟ್ಟೋಡುವಂಥ ಪರಿಸ್ಥಿತಿಯೂ ಉದ್ಭವಿಸಿದೆ.

ಲೀಲಾ ಎಂಬ ಲೈಲಾ

ಈಗ ಬಿಸಬೆಳಗಾದರೆ ಯಾರಾದರೊಬ್ಬ ಜೆಡಿಎಸ್ ಜಿಲ್ಲಾ ಲೀಡರ್‌ಗಳೊಂದಿಗೆ ಮೈಸೂರು, ಊಟ,

ಬಗ್ಗೆ ಗೊತ್ತಾಗಿದ್ದು, ಆ ಗಲಾಟೆ ಕೊನೆಗೆ ನ್ಯೂ ಎಕ್ಸ್‌ಟೆನ್ಷನ್ ಪೊಲೀಸ್ ಠಾಣೆವರೆಗೂ ಹೋಗಿತ್ತು, ಆಗಿನ ಇನ್ಸ್‌ಪೆಕ್ಟರ್ ಶ್ರೀನಿವಾಸಮೂರ್ತಿ ಸುಂದರಿ ಲೀಲಾಳನ್ನು ನೋಡಿದೇಟಿಗೆ 'ಲೀಲಾಳೇ ಸರಿ, ಜಯಮ್ಮನದೇ ತಪ್ಪು' ಎಂದು ನಿರ್ಧರಿಸಿಕೊಂಡು ತಾನೊಂದಿಷ್ಟು ವಿನೋದ ಪಡೆದುಕೊಂಡಿದ್ದ. ಪೊಲೀಸರ ಬೆಂಬಲ ಸಿಕ್ಕರೆ ಜೀವನದಲ್ಲಿ ಏನೇನೆಲ್ಲಾ ಸಾಧಿಸಬಹುದೆಂಬುದನ್ನು ಅವತ್ತೇ ಅರ್ಥ ಮಾಡಿಕೊಂಡ ಲೀಲಾವತಿ ಆಮೇಲೆಂದೂ ಹಿಂತಿರುಗಿ ನೋಡಲಿಲ್ಲ.

ನಂತರ ಕಾಂಗ್ರೆಸ್ನ ಕುಣಿಗಲ್ ಶಾಸಕ ಮುದ್ದುಹನುಮೇಗೌಡರ ಪರಿಚಯ ಬೆಳೆದು ಲೀಲಾ ಇನ್ನಷ್ಟು ಜೀವನಾನುಭವ, ವ್ಯವಹಾರ ಜ್ಞಾನ ಬೆಳೆಸಿಕೊಂಡಳು.


ಶಾಸಕ ನಿಂಗಪ್ಪ

ಇದೆಲ್ಲಾ ಬೆಳೆದೂ ಬೆಳೆದು ಈಗ ತುಮಕೂರಿನಲ್ಲಿ ಯಾವ ಹಂತ ಮುಟ್ಟಿದೆಯೆಂದರೆ ಜಿಲ್ಲೆಯ ಉನ್ನತ ಪೊಲೀಸ್ ಅಧಿಕಾರಿಗಳು, ಟೌನಿನ ಪೊಲೀಸರು, ಸರ್ಕಾರಿ ಅಧಿಕಾರಿಗಳು ಲೀಲಾಳ ಮಹಾನ್ ಪೋಷಕರಾಗಿ ಬಿಟ್ಟಿದ್ದಾರೆ. ಅವರೆಲ್ಲರ ನಾಯಕ ಸಾಕ್ಷಾತ್ ಚನ್ನಿಗಪ್ಪನೇ ಲೀಲಾಳ ತಾಳಕ್ಕೆ ಡ್ಯಾನ್ಸ್ ಮಾಡುತ್ತಿರುವಾಗ ಇನ್ನು ಅವರು ತಾನೆ ಹೇಗೆ ಸುಮ್ಮನಿದ್ದಾರು ಹೇಳಿ?

ಆಮೇಲೆ ವಿದ್ಯಾನಗರದ ಬ್ಯಾಂಕ್ ಮ್ಯಾನೇಜರ್‌ರೊಬ್ಬನ ಮನೆ ಬಾಡಿಗೆಗೆ ಹಿಡಿದವಳೇ ಅಲ್ಲೇ ತನ್ನ Fun World ಗೆ ಚಾಲನೆ ಕೊಟ್ಟಳು. ತಕ್ಷಣ ಅಲ್ಲೂ ಇನ್ನೊಂದು ಗಲಾಟೆ ನಡೆಯಿತು. ಲೀಲಾ ನೆರೆಮನೆಯಲ್ಲಿದ್ದ

ಕೊಲೆಯಾಗಿದ್ದಳು. ಅವಳ ಹೆಣ ಸಾಬರಪಾಳ್ಯದ ಎಸ್‌ಐಟಿ ಹಿಂದಿನ ರೈಲ್ವೆ ಪಟ್ಟೆ ಹತ್ತಿರ ಸಿಕ್ಕಿತು. ಆಗ ಲೀಲಾ ತನ್ನ ಗಂಡ ಜೆಪಿ ಕಂಪನಿ ಕೆಲಸದ ಮೇಲೆ ಬೀದರ್‌ನಲ್ಲಿದ್ದ ಎಂದು ಕಣ್ಣು ಸರಿಯಾಗಿ ಕಾಣಿಸದ ತಾಯಿಯನ್ನು ಜೊತೆಲಿರಿಸಿಕೊಂಡಿದ್ದಳು. ಆಗಾಗ ಅಮ್ಮನಿಗೇ ಹೊಡೆದೂ ಬಡಿದೂ ಮಾಡುತ್ತಿದ್ದಳು. ಇಂತದ್ದೇ ಒಂದು ದಿನ ಮಗಳಿಂದ ಏಟು ತಿಂದ ತಾಯಿ ನೊಂದುಕೊಂಡು ಎಸ್‌ಐಟಿ ಕಾಲೇಜಿನ ರಸ್ತೆ ದಾಟುತ್ತಿರುವಾಗ ಯಾವುದೋ ಟೆಂಪೋ ಡಿಕ್ಕಿ ಹೊಡೆದು ಸತ್ತು ಹೋದಳು. ಲೀಲಾ ತುಮಕೂರು ಬಿಟ್ಟಿದ್ದು ಆಗಲೇ.

ಎಲೆಕ್ಷನ್ ಲೀಲೆ


ಜೆಡಿಎಸ್ ಅಭ್ಯರ್ಥಿಯಾದ ಲೀಲಾವತಿ

ತುಮಕೂರು ನಗರಸಭೆಯ 26 ನೇ ವಾರ್ಡಿನಿಂದ ಲೀಲಾವತಿಯೂ ಜೆಡಿಎಸ್ ಅಭ್ಯರ್ಥಿ. ಪಾಪ ಆಕೆ ತಾನೆ ಎಷ್ಟು ದಿನಾಂತ ಮನೋರಂಜನಾ ಉದ್ಯಮ ನಡೆಸಿಕೊಂಡು ಮೈಮನಗಳ ಸುಳಿಯಲ್ಲೇ ಬಿದ್ದಿರಲು ಸಾಧ್ಯ? ಇನ್ನು ಮೇಲಾಗಿ ಪವರ್ ಕಾರಿಡಾರುಗಳಲ್ಲಿ ಓಡಾಡಿ ಅದರ ಗಮ್ಮತ್ತು ಅರ್ಥವಾದವರು ತಾವೂ ಹೇಗಾದರೂ ಮಾಡಿ ಅಧಿಕಾರ ಹಿಡಿಯಲು ಹೊರಟು ಬಿಡುತ್ತಾರೆ. ಶುರುವಿನಲ್ಲಿ ಅದು ಚಿಕ್ಕ ಸ್ಥಾನವಾದರೂ ಆಮೇಲೆ ಒಳದಾರಿಗಳ ಮೂಲಕ ದೊಡ್ಡ ಅಧಿಕಾರಕ್ಕೇರಲು ಹೊಸ ದಾರಿಗಳು ಸಿಗುತ್ತವೆಂಬುದು ಲೀಲಾಗಂತೂ ಗೊತ್ತಿದೆ. ಹಾಗಾಗಿ ಅವಳೀಗ ಜನರ ಸೇವೆಗೆ ಹೊರಟಿದ್ದಾಳೆ. ಎಸ್‌ಐಟಿ ಕಾಲೇಜಿನ ಏರಿಯಾ, ಗೋಕುಲ ರಸ್ತೆ ಮುನಿಸಿಪಲ್ ಲೇಔಟ್, ಫಕೀರಪ್ಪನ ಪಾಳ್ಯ ಸಿದ್ಧಗಂಗಾ ಬಡಾವಣೆ, ಸರ್ಕಾರಿ ಕಾಲೇಜು ಬಡಾವಣೆಯ ಪುಣ್ಯವಂತ ಮತದಾರರಿಗೆ ಈಗ ಸತಿ ಸಕ್ಕೂಬಾಯಿ ಗೆಟಪ್ಪಿನಲ್ಲಿ ಬರಲಿರುವ ಲೀಲಾವತಿಗೆ ಓಟು ಹಾಕುವ ಭಾಗ್ಯ ದೊರೆತಿದೆ.

ಕೈಲಿ ರವಷ್ಟೂ ಅಧಿಕಾರ ಇರದಿದ್ದಾಗಲೇ ಲೀಲಾ ಎರಡು ಸೈಟು ನುಂಗಿದ್ದಾಳೆ. ಒಂದು ಹಿಂದಿನ ತಹಶೀಲ್ದಾರ್ ಗೋಪಾಲಯ್ಯ ಕೊಡಿಸಿದ್ದು, ಇನ್ನೊಂದನ್ನು ಚನ್ನಿಗಪ್ಪನೇ ಕೊಡಿಸಿದ್ದಾನಂತೆ.

ನಾಳೆ ಈಕೆ ಎಲೆಕ್ಷನ್ ಗೆದ್ದೇ ಬಿಟ್ಟರೆ ಏನಾಗಬಹುದೋ ನೀವೇ ಯೋಚಿಸಿ.

ಬೇಜಾರಾದಾಗಲ್ಲಾ, ಅಥವಾ ಲಂಚದ ದುಡ್ಡು ಜಾಸ್ತಿಯಾದಾಗಲ್ಲಾ ಲೀಲಾ ಮನೆಗೇ ಹೋಗಿ ಮನರಂಜನೆ ಪಡೆದು ಬರುತ್ತಿದ್ದಾರಾದ್ದರಿಂದ ಸದ್ಯಕ್ಕೆ ಇದ್ಯಾವುದೂ ನಿಲ್ಲುವ ಲಕ್ಷಣಗಳಿಲ್ಲ.

ಈ ಬಗ್ಗೆ ಪ್ರಜಾಸಾಮ್ರಾಜ್ಯ ಎಂಬ ಸ್ಥಳೀಯ ಪತ್ರಿಕೆಯಲ್ಲಿ ವರದಿಗಳೂ ಪ್ರಕಟವಾಗಿವೆ. ಆದರೆ ಇದರಿಂದ ಪಾಠ ಕಲಿಯುವ ಬದಲು ಜೆಡಿಎಸ್ ಪುಂಡರು ಹಾಗೂ ಪೊಲೀಸರು ಸಂಪಾದಕ ಬ್ರಹ್ಮಾನಂದ ರೆಡ್ಡಿಗೇ ಧಮಕಿ ಹಾಕುತ್ತಿದ್ದಾರೆ.


'ಪ್ರಜಾಸಾಮ್ರಾಜ್ಯ' ಸಂಪಾದಕ ಬ್ರಹ್ಮಾನಂದ ರೆಡ್ಡಿ

ಅತೀ ಅಸಹ್ಯ ಹಾಗೂ ಪೈಶಾಚಿಕತೆ ಅನ್ನಿಸುವ ಸಂಗತಿ ಏನೆಂದರೆ ಈ ಮಾಯಾಂಗನೆ ಲೀಲಾ ಚನ್ನಿಗಪ್ಪ ಮಾತ್ರವಲ್ಲ ಮಕ್ಕಳಾದ ಕುಮಾರ, ಗೌರಿಶಂಕರನಿಗೂ ಮೋಕ್ಷ ತೋರಿಸುತ್ತಿದ್ದಾಳೆಂಬ ಸುದ್ದಿಯದು. ಚನ್ನಿಗಪ್ಪ ಕ್ಯಾಮೆರಾ ಎದಿರೇ ಎಣ್ಣೆ ಏರಿಸುತ್ತಾ ಲಂಚದ ಗಂಟನ್ನು ಎತ್ತಿ ಜೇಬಿಗಿಟ್ಟುಕೊಂಡ ಮೂರನೇ ದರ್ಜೆ ರಾಜಕಾರಣಿ. ಅವನಿಗೆ ಇನ್ಯಾವ ಮೌಲ್ಯ ಇರಲು ಸಾಧ್ಯ?

ಚನ್ನಿಗಪ್ಪನನ್ನು ಬೆಳೆಸಿ ಈಗ ರಕ್ಷಿಸುತ್ತಿರುವುದು ದೇವೇಗೌಡರು. ತನ್ನ ಭಂಟರ ಮೇಲೆ ಲಂಚ-ಮಂಚಗಳ ಏನೇ ಆರೋಪ ಬಂದರೂ ಗೌಡರು ಶಿಕ್ಷಿಸುವುದಿಲ್ಲವೆಂಬ ಸಂಗತಿ ರಾಜ್ಯದ ಜನತೆಗೆ ಈಗಾಗಲೇ ಗೊತ್ತಾಗಿದೆ.

ಅಂತ ದೇವೇಗೌಡರಿಗೆ ಸಾರ್ವಜನಿಕ ಜೀವನದ ಮೌಲ್ಯಗಳ ಬೆಲೆ ಗೊತ್ತಿಲ್ಲ ಎನ್ನುವಾಗ ಈ ಲಂಚಕೋರ ಮಾಜಿ ಪ್ಯಾದೆ ಚನ್ನಿಗಪ್ಪನ ಮಂಚ ಪುರಾಣ ನಿಲ್ಲುತ್ತದಾ?

ಲೀಲಾ ವಿನೋದಾವಳಿಗಳಿಗೆ ಈಗಲಾದರೂ ಫುಲ್‌ಸ್ಟಾಪ್ ಹಾಕಬೇಕೆಂದರೆ ಅದಕ್ಕೆ ತುಮಕೂರಿನ ಜನರೆ ಸರಿ.

ಸೆಪ್ಟೆಂಬರ್ 28 ರಂದು ನಡೆಯಲಿರುವ ಸ್ಥಳೀಯ ಸಂಸ್ಥೆ ಎಲೆಕ್ಷನ್‌ನಲ್ಲೀಗ ಲೀಲಾ ಅಭ್ಯರ್ಥಿ.

ತುಮಕೂರನ್ನು ಸ್ವಚ್ಛ ಮಾಡುವ ಒಂದು ಅವಕಾಶ ಮಾನವಂತರಿಗೆ ಸಿಕ್ಕಿದೆ. ಅವರೇ ಯೋಚಿಸಲಿ.

-ವರದಿಗಾರ


ಎಕ್ಸ್‌ಟ್ರಾ ನಟಿ ಲೀಲಾ ದೊಡ್ಡಣ್ಣನೊಂದಿಗೆ

ಎಕ್ಸ್‌ಟ್ರಾ ನಟಿಯೂ ಆಗಿದ್ದಳು


ಲೀಲಾವತಿ ಸೋಪ್ ಪೌಡರ್, ಊದುಬತ್ತಿ ಮಾರುವಾಗಲೇ ಸಿನಿಮಾದಲ್ಲೂ ಛಾನ್ಸ್ ಹುಡುಕಿಕೊಂಡು ಹೋಗಿದ್ದಳು. ಲೀಲಾಗೆ ತಾನು ಬಹಳ ಸುಂದರಿ ಎಂಬ ಜಂಭ ಈಗಲೂ ಇದೆ. ಇನ್ನು 10 ವರ್ಷದ ಹಿಂದೆ ಅದರ ಅಮಲು ಇರದಿದ್ದೀತಾ? ಹೇಗೋ ಅವರಿವರ ಕಾಲು ಹಿಡಿದು ಸಹ ದೊಡ್ಡಣ್ಣನ ಜೊತೆ ಒಂದು ಪಾತ್ರ ಗಿಟ್ಟಿಸಿಕೊಂಡಿದ್ದಳು. ಅದೇ ಕೊನೆ. ಆಮೇಲೆ ಲೀಲಾ ಸಿನಿಮಾ ಬಿಟ್ಟು ಫುಲ್ ಪರ್ಸ್ಟ್ ವ್ಯವಹಾರ ಶುರು ಮಾಡಿದಳು.

ಚೆಡ್ಡಿಗಳಿಗೆ ಶರಣಾದ ಗೌಡ

ಕಳೆದ ವಾರ ಸುರಿದ ಭಾರಿ ಮಳೆಗೆ ಜನಜೀವನವೆಲ್ಲಾ ಹೇಗೆ ಅಸ್ತವ್ಯಸ್ತವಾಗಿ ಹೋಯಿತೋ ಅದೇ ರೀತಿ ದೇವೇಗೌಡರ ರಾಜಕೀಯ ಪಿತೂರಿ, ತಂತ್ರಗಾರಿಕೆಗಳೆಲ್ಲವೂ ಕೊಚ್ಚಿಕೊಂಡು ಹೋಗಿ ಚರಂಡಿ ಪಾಲಾಗಿದೆ.


ಅತ್ತ ಅವರು ಅಪೇಕ್ಷಿಸಿದ್ದ ಕಾಂಗ್ರೆಸ್ ಸಖ್ಯ ಸಿಗುತ್ತಿಲ್ಲ, ಇತ್ತ ಗೌಡರಿಗೆ ಬೇಕಿರದ ಬಜೆಪಿಯನ್ನು ದೂರ ಮಾಡಲಾಗುತ್ತಿಲ್ಲ. ಗೌಡರೀಗ ಅಕ್ಷರಶಃ ತಬ್ಬಲಿ ನಾಯಕ. ಬಜೆಪಿಗೆ ಅಧಿಕಾರ ಹಸ್ತಾಂತರಿಸುವುದನ್ನು ಬಿಟ್ಟರೆ ಅವರಿಗೆ ಬಹುಶಃ ಬೇರೆ ಆಯ್ಕೆಗಳಿರದ ಸ್ಥಿತಿ ನಿರ್ಮಾಣವಾಗುತ್ತಿದೆ.

ಗೌಡರು ಒಡ್ಡಿದ ಆಮಿಷಕ್ಕೆ ಕಾಂಗ್ರೆಸ್ ಬಲಿಯಾಗಲಿಲ್ಲ ಎಂಬುದು ಒಂದು ವಿಚಾರವಾದರೆ ಬಜೆಪಿಯು ಗೌಡರು ತಪ್ಪಿಸಿಕೊಳ್ಳದಂತೆ ಮಾಡಿಬಿಟ್ಟಿದೆ ಎಂಬುದೂ ಇನ್ನೊಂದು ಪ್ರಮುಖ ವಿಚಾರವಾಗಿದೆ. ಈ ಪಕ್ಷಗಳ ನಿಲುವು ಮೀರಿದ ಇನ್ನೊಂದು ವಿಚಾರ ಏನೆಂದರೆ ಯಾವ ಶಾಸಕರಿಗೂ ಸದ್ಯಕ್ಕೆ ಎಲೆಕ್ಷನ್ ಬೇಡವಾಗಿದೆ. ಹಾಗಾಗಿ ಇನ್ನು ಕೆಲವು ತಿಂಗಳಾದರೂ ಕೋ-ಜಾ ಸರ್ಕಾರ ಉಳಿಯಲೇಬೇಕಾದ ಸ್ಥಿತಿ ಬಂದಿದೆ. ಈ ಹಂತದಲ್ಲಿ ದೇವೇಗೌಡ ಹಾಗೂ ಅವರ ಪಾರ್ಟಿ ಅಧ್ಯಕ್ಷ ಯಾನೆ ಕೊರಿಯರ್ ಬಾಯ್ ಮೆರಾಜುದ್ದೀನ್ ಪಟೇಲ್ ರಾಜಕೀಯದ ಮಧ್ಯೆ ಬಿಡುವೆಂಬಂತೆ ಸೆಕುಲರಿಸಂನ ಚೇಷ್ಟೆ ಮಾತಾಡಲು ಶುರು ಮಾಡಿದ್ದಾರೆ.



ಮುಸ್ಲಿಂ-ಕ್ರಿಶ್ಚಿಯನ್ನರಿಗೆ ಕುಮಾರಸ್ವಾಮಿ ರಕ್ಷಣೆ ನೀಡಿದ್ದರಾ?


ಈ ಮೆರಾಜುದ್ದೀನ್ ಜೆಡಿಎಸ್ ಅಧ್ಯಕ್ಷರಾದ ಮೇಲೆ ಅಲ್ಪಸಂಖ್ಯಾತರ ರಕ್ಷಣೆ ಬಗ್ಗೆ ದಿನಕ್ಕೊಂದು ಹೇಳಿಕೆ ನೀಡಲು ಶುರು ಮಾಡಿದ್ದಾರೆ. ಅಕ್ಟೋಬರ್ 3 ರ ನಂತರ ಬಜೆಪಿ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಒಂದೇ ಒಂದು ಕೋಮು ಗಲಭೆಯಾದರೂ, ಅಲ್ಪಸಂಖ್ಯಾತರಿಗೆ ಕಿಂಚಿತ್ ತೊಂದರೆಯಾದರೂ ಸಹ ಅದೇ ಕ್ಷಣ ಬಜೆಪಿಗೆ ನೀಡುವ ಬೆಂಬಲ ಹಿಂಪಡೆದು ಸರ್ಕಾರ ಉರುಳಿಸುವುದಾಗಿ ಬೆದರಿಕೆ ಹಾಕಿದ್ದಾರೆ.


ಗಪೂರ್ ಮದನಿ

ಇದು ಬಜೆಪಿಗೆ ಮುಖ್ಯಮಂತ್ರಿ ಸ್ಥಾನ ನೀಡಿದ ನಂತರದ ಮಾತು. ಆದರೆ ಕಳೆದ 20 ತಿಂಗಳಿಂದ ಜಾತ್ಯತೀತ ದಳದ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕದ ಅಲ್ಪಸಂಖ್ಯಾತರಿಗೆ ಎಷ್ಟು ರಕ್ಷಣೆ ಸಿಕ್ಕಿತ್ತು ಎಂಬುದನ್ನು ನಾವೊಮ್ಮೆ ಪರಿಶೀಲಿಸಬಹುದಲ್ಲ. ಈ ಅವಧಿಯಲ್ಲಿ ನಡೆದ ಘಟನೆಗಳು ಹೀಗಿವೆ.

1. 2005 ರಲ್ಲಿ ಆದಿ ಉಡುಪಿಯಲ್ಲಿ ಹಸನಬ್ಬ ಹಾಗೂ ಹಾಜಬ್ಬ ಎಂಬುವರ ಮೇಲೆ ಭಜರಂಗಿಗಳು ಬೆತ್ತಲುಗೊಳಿಸಿ ಹಲ್ಲೆ ನಡೆಸಿದ್ದರು. ಈ ದೌರ್ಜನ್ಯದ ಪ್ರಥಮ ಆರೋಪಿಯನ್ನು ಬಜೆಪಿಯು ಉಡುಪಿ ನಗರಾಭಿವೃದ್ಧಿ ಮಂಡಳಿಗೆ ನಾಮನಿರ್ದೇಶನ ಮಾಡಿತು. ಇದಕ್ಕೆ ಅನುಮೋದನೆ ನೀಡಿದ್ದು ಕುಮಾರಸ್ವಾಮಿಯ ಜಾತ್ಯತೀತ ದಳ ಸರ್ಕಾರ.

2. ಕುಮಾರಸ್ವಾಮಿ ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ 2006 ರ ಅಕ್ಟೋಬರ್‌ನಲ್ಲಿ ಹಿಂದೂತ್ವವಾದಿಗಳು ಮಂಗಳೂರಿನಲ್ಲಿ ಕೋಮುಗಲಭೆ ನಡೆಸಿದರು. ಅದರಲ್ಲಿ ಅಬ್ದುಲ್ ಗಪೂರ್ ಮದನಿ ಹಾಗೂ ಇಬ್ರಾಹಿಂ ಎಂಬುವರನ್ನು ಬಜೆಪಿ ಗುಂಪು ಹತ್ಯೆ ಮಾಡಿತು. ಮುಸ್ಲಿಮರಿಗೆ ಯಾವುದೇ ರಕ್ಷಣೆ ನೀಡುವ ಬದಲಾಗಿ ಪೊಲೀಸರು ತಾವೇ ಮನೆಗಳಿಗೆ ನುಗ್ಗಿ ನಗ-ನಾಣ್ಯ ದೋಚಿದರು. ನೂರಾರು ಅಮಾಯಕ ಮುಸ್ಲಿಮರ ಮೇಲೆ ಸುಳ್ಳು ಕೇಸು ಹಾಕಲಾಯಿತು.


ಇಬ್ರಾಹಿಂ

3. 2007 ರ ಜನವರಿಯಲ್ಲಿ ಬೆಂಗಳೂರಿನ ಶಿವಾಜಿನಗರದಲ್ಲಿ ಸ್ಫೋಟಿಸಿದ ಕೋಮು ಗಲಭೆಯಲ್ಲಿ ಸಹಸ್ರಾರು ಮುಸ್ಲಿಮರ ಮೇಲೆ ದೌರ್ಜನ್ಯ ನಡೆಸಿ ಆಸ್ತಿಪಾಸ್ತಿ ನಾಶ ಮಾಡಲಾಯಿತು. ಈ ದೊಂಬಿಯಲ್ಲಿ ಪೊಲೀಸರ ಗುಂಡಿಗೆ ಮುಸ್ಲಿಂ ಬಾಲಕನೊಬ್ಬ ಬಲಿಯಾದ.


ಆದಿ ಉಡುಪಿಯಲ್ಲಿ ಬೆತ್ತಲೆಗೊಳಗಾದ ಹಾಜಬ್ಬ ಮತ್ತು ಹಸನಬ್ಬ

4. 2006 ರ ಡಿಸೆಂಬರ್ ಹಾಗೂ 2007 ರ ಜನವರಿಯಿಂದ ರಾಜ್ಯ ಬಜೆಪಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ವಿರಾಟ್ ಹಿಂದೂ ಸಮಾಜೋತ್ಸವ ನಡೆಸಿತು. ಅಲ್ಲಲ್ಲಿ ಕೋಮು ದ್ವೇಷ ಕೆರಳಿಸುವ, ಗಲಭೆ ಹುಟ್ಟು ಹಾಕುವ ದುಷ್ಟ ಪ್ರಯತ್ನಗಳೂ ಆದವು. ಆದರೆ ಒಂದು ಸೆಕ್ಯುಲರ್ ಪಾರ್ಟಿ ಎಂದು ಹೇಳಿಕೊಳ್ಳುವ ಜೆಡಿಎಸ್ ಈ ಹಿಂದೂ ಸಮಾಜೋತ್ಸವವೆಂಬ ಕೋಮುವಾದಿ ಪ್ರೋಗ್ರಾಂ ವಿರುದ್ಧ ತಾತ್ವಿಕವಾಗಿ ಆಗಲಿ, ಸಂಘಟನಾತ್ಮಕವಾಗೇ ಆಗಲಿ ಪ್ರತ್ಯುತ್ತರ ನೀಡಲಿಲ್ಲ.

5. ಕುಮಾರಸ್ವಾಮಿ ಸಿಎಂ ಆಗಿದ್ದಾಗಲೇ ರಾಜ್ಯಾದ್ಯಂತ ಕ್ರಿಶ್ಚಿಯನ್ ಸಮುದಾಯದ ವಿರುದ್ಧ ಸಂಘ ಪರಿವಾರದ ಹಲ್ಲೆ ದೌರ್ಜನ್ಯಗಳು ಅಭಾದಿತವಾಗಿ ಮುಂದುವರೆದವು. ಕಳೆದ 20 ತಿಂಗಳಲ್ಲಿ ಒಟ್ಟಾರೆ ಇಂತಹ 50 ದೌರ್ಜನ್ಯಗಳು ನಡೆದಿವೆ. ಇದರಿಂದ ರೋಸಿಹೋಗಿರುವ ಕ್ರಿಶ್ಚಿಯನ್ ಸಮುದಾಯ ಮುಂದಿನ ತಿಂಗಳು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸುತ್ತಿದೆ.

6. ಭಜರಂಗ ದಳದವರ ವಿರುದ್ಧ ರಾಜ್ಯದ ನಾನಾ ಕಡೆ ದಾಖಲಾಗಿರುವ 56 ಕ್ರಿಮಿನಲ್ ಕೇಸುಗಳನ್ನು ವಾಪಸ್ ಪಡೆಯಲು ಕುಮಾರಸ್ವಾಮಿ ನೇತೃತ್ವದ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಕೊಲೆ, ಕೊಲೆಯತ್ನ, ದಕಾಯಿತಿ, ಹಲ್ಲೆ, ದೌರ್ಜನ್ಯ ಹಾಗೂ ಸಾಮಾಜಿಕ ಶಾಂತಿ ಕದಡಿದ ಆರೋಪಗಳಿದ್ದ ಪ್ರಕರಣಗಳಿವು ಮತ್ತು ಇವೆಲ್ಲವೂ ಮುಸ್ಲಿಂ-ಕ್ರಿಶ್ಚಿಯನ್ ಹಾಗೂ ದಲಿತರ ವಿರುದ್ಧ ಭಜರಂಗ ದಳದವರು ನಡೆಸಿದ್ದ ದುಷ್ಕೃತ್ಯವಾಗಿತ್ತು.

7. ಕರ್ನಾಟಕ ಕೋಮುಸೌಹಾರ್ದ ವೇದಿಕೆಯ ಹೋರಾಟವನ್ನು ಹತ್ತಿಕ್ಕಲು, ಆ ಮೂಲಕ ಬಜೆಪಿಯನ್ನು ಸಂತುಷ್ಟಗೊಳಿಸಲು ಕುಮಾರಸ್ವಾಮಿ ಸರ್ಕಾರವು 'ವೇದಿಕೆಯು ನಕ್ಸಲ್ ಬೆಂಬಲಿತ ಸಂಘಟನೆ' ಎಂದು ಆರೋಪಿಸಿ ನಿಷೇಧಿಸುವ ಬೆದರಿಕೆ ಹಾಕಿತ್ತು.

-ಇವತ್ತು ದೇವೇಗೌಡ ನೆನಪಿಸಿಕೊಳ್ಳುತ್ತಿರುವ ಸೆಕ್ಯುಲರಿಸಂ ಎಷ್ಟು ಪೊಳ್ಳು ಎಂದು ಸಾಬೀತುಮಾಡಲು ಇಂತಹ ಒಂದು ನೂರು ಸಾಕ್ಷಿಗಳಿವೆ. ಜೆಡಿಎಸ್‌ನ ಮುಖ್ಯಮಂತ್ರಿ ಹಾಗೂ ಜೆಡಿಎಸ್‌ನವರೇ ಗೃಹಮಂತ್ರಿಯಾಗಿದ್ದಾಗ ನಡೆದಿರುವ ಘಟನೆಗಳಿವು.


ಈ ದೇಶದ ಸಂವಿಧಾನದ ಜಾತ್ಯತೀತ ಆಶಯಗಳಿಗೆ ಬೆನ್ನು ತಿರುಗಿಸಿ ಅಧಿಕಾರದಾಹದಿಂದ ಬಜೆಪಿಗಳ ಜೊತೆ ಕೈಗೂಡಿಸಿ ಎಲ್ಲಾ ಅನಾಚಾರಗಳನ್ನು ಮಾಡಿ ಮುಗಿಸಿದ ಮೇಲೆ ಈಗ ಜೆಡಿಎಸ್‌ಗೆ ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ಹುಟ್ಟಿಕೊಂಡಿರುವುದು ನಂಬಲಸಾಧ್ಯ.

ಏನ್ ಸ್ವಾಮಿ ದೇವೇಗೌಡ್ರೆ,

ಈ ಮೇಲಿನ ಎಲ್ಲಾ ಪ್ರಶ್ನೆಗಳಿಗೆ ನಿಮ್ಮ ಹತ್ತಿರ ಉತ್ತರ ಇದೆಯಾ?

ಬಜೆಪಿ ಅಧಿಕಾರಕ್ಕೆ ಬಂದಮೇಲೂ ಅಲ್ಪಸಂಖ್ಯಾತರ ರಕ್ಷಣೆ ಮಾಡುತ್ತೇವೆಂದು ಇವತ್ತು ಹೇಳುತ್ತಿದ್ದೀರಲ್ಲ. ಆಗೆಲ್ಲಾ ನಿಮ್ಮ ಪುತ್ರರತ್ನನೇ ಸಿಎಂ ಆಗಿರುವಾಗಲೂ ಇಷ್ಟೊ ದೌರ್ಜನ್ಯಗಳಾದಾಗಲೂ ನೀವು ಕಣ್ಣುಮುಚ್ಚಿ ಕುಳಿತಿರಲಿಲ್ಲವೇ?

-ಈಶ



ವಿಜಯರಾಘವ ಮತ್ತು ಚೋರರು

ಸೆಂಘಪರಿವಾರದ ಕ್ಯಾಂಪ್‌ನಲ್ಲಿ ಕೂದ್ರುರೇನಿದ್ದರೂ ಆಟಕ್ಕೆ ಮಾತ್ರ, ಬ್ರಾಹ್ಮಣೋತ್ತಮರೆಲ್ಲ ಊಟಕ್ಕೆ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ. ಉಜಿರೆಯ ಜನಾರ್ದನ ದೇವಸ್ಥಾನಕ್ಕೆ ಸೇರಿದ 14 ಎಕರೆ ಅಮೂಲ್ಯ ಭೂಮಿಯನ್ನು ಆಡಳಿತ ಮೊಕ್ತೇಸರ ವಿಜಯರಾಘವ ಎಲ್ಲರ ಕಣ್ಣುತಪ್ಪಿಸಿ, ಸುಳ್ಳು ದಾಖಲೆ ಸೃಷ್ಟಿಸಿ ತನ್ನ ಕೆಲಸದಾಳು ಬಿ.ಕೆ. ಶಿವರಾಂ ಹೆಸರಿಗೆ ಮಾಡಿಸಿಕೊಂಡಿದ್ದಾನೆ. ಅಂದರೆ, ಬಿ.ಕೆ. ಶಿವರಾಂ ಆಟಕ್ಕೆ, ವಿಜಯರಾಘವ ಊಟಕ್ಕೆ.

ಇಂತಹದ್ದೊಂದು ಭೂಕಬಳಿಕೆಯ ಹಗರಣವನ್ನು ಬೆಳಕಿಗೆ ತರುವ ಮೂಲಕ ವಿಜಯರಾಘವ ಮತ್ತವನ ಬೆಂಬಲಿಗ ಪಡೆ ಚಡ್ಡಿವೀರರನ್ನೂ ಏಕಕಾಲಕ್ಕೆ ಖೆಡ್ಡಾಕ್ಕೆ ಕೆಡವಲು ಹೊರಟಿರುವವನು ಬೇರೆ ಯಾರೂ ಅಲ್ಲ. ಹಿಂದೂ ಜಾಗರಣಾ ವೇದಿಕೆಯ ಮಾಜಿ ಹೀರೋ ಕಂ ಪುಡಿ ಗೂಂಡಾ ಕಂ ಉಜಿರೆಯ ಧಣಿ ಎಂದೇ ಖ್ಯಾತರಾದ ಪದ್ವೆಟ್ನಾಯರ ಪಟ್ಟದ ಶಿಷ್ಯ ಮಹೇಶ್ ಶೆಟ್ಟಿ ತಿಮರೋಡಿ.

ಜನಾರ್ದನ ದೇವರ ಭೂಮಿ ಗುಳುಂ ಆದದ್ದು

ಸುಮಾರು 800 ವರ್ಷಗಳ ಇತಿಹಾಸವಿರುವ, ಬಂಗರಸರ ಕಾಲಾನಂತರ ದಿಕ್ಕಿಲ್ಲದಂತಾಗಿದ್ದ ಉಜಿರೆಯ ಜನಾರ್ದನ ದೇವಳವನ್ನು ನಾಲ್ವಿಕೆಯರೆಂದು ಕರೆಯಲ್ಪಡುತ್ತಿದ್ದ ಪದ್ವೆಟ್ನಾಯ, ಮೂಡನ್ನಾಯ, ಒಪ್ಪಂತ್ತಾಯ ಮತ್ತು ಅರಮನೆತ್ತಾಯ ಎಂಬ ನಾಲ್ಕು ಬ್ರಾಹ್ಮಣ ಕುಟುಂಬಗಳು ಉಸ್ತುವಾರಿಕೆ ನಡೆಸಿಕೊಂಡು ಬಂದಿದ್ದವು. ಆ ಕಾಲದಲ್ಲಿ ದೇವಸ್ಥಾನದ ಸ್ವಾಮ್ಯದಲ್ಲಿ ನೂರಾರು ಎಕರೆ ಉಂಬಳಿ ಜಮೀನಿತ್ತು. ಭೂ ಮಸೂದೆ ಕಾಲದಲ್ಲಿ ಅದೆಲ್ಲ ಅನುಭೋಗಿಗಳ ಪಾಲಾಗಿ ಕೊನೆಗೆ ಉಜಿರೆ ಪೇಟೆಯ ಸ್ವಲ್ಪ ಜಾಗ ಸೇರಿದಂತೆ 14 ಎಕರೆಯಷ್ಟು ಭೂಮಿ ಮಾತ್ರ ಉಳಿದುಕೊಂಡಿತು.


ವಿಜಯರಾಘವ

ಈ ದೇವಳದ ಆಡಳಿತ ಮೊಕ್ತೇಸರ ಎಂಬ ಹುದ್ದೆಗೆ 27.3.1961ರಲ್ಲಿ ಪ್ರಪ್ರಥಮವಾಗಿ ನೇಮಿತರಾದವರು ಕೃಷ್ಣ ಪದ್ವೆಟ್ನಾಯ. ನಂತರ ಅವರ ಮಗ ರಾಮಕೃಷ್ಣ ಪದ್ವೆಟ್ನಾಯರು 27.6.1989ರಂದು ತಾವು ತೀರಿಹೋಗುವ ತನಕವೂ ಮೊಕ್ತೇಸರರೆನಿಸಿದ್ದರೂ ಅದು ಅಧಿಕೃತವೆನ್ನುವುದಕ್ಕೆ ಯಾವುದೇ ದಾಖಲೆಗಳಿಲ್ಲ. ಈ ನಡುವೆ ದೇವಳವು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬಂದು 15.7.1997ರಲ್ಲಿ ಮೊಕ್ತೇಸರರಾಗಿ ಘೋಷಿತರಾದವರೇ ವಿಜಯರಾಘವ ಪದ್ವೆಟ್ನಾಯರು.

ವಿಜಯರಾಘವ ತನ್ನ ಚಾಣಾಕ್ಷ ಬುದ್ಧಿಯನ್ನು ಉಪಯೋಗಿಸಿ ದೇವಾಲಯದ ಭೂಮಿಯನ್ನು ಗುಳುಂ ಮಾಡುವ ಸಂಚು ರೂಪಿಸಿ ಯಶಸ್ವಿಯಾಗಿದ್ದಾನೆ. ಉಜಿರೆಯ ಅಂಗಡಿ ಮುಂಗಟ್ಟುಗಳು ಸೇರಿದಂತೆ 14 ಒಕ್ಕಲು ಕುಟುಂಬಗಳು ನೆಲೆಸಿರುವ ಈ 14 ಎಕರೆ ಭೂಮಿಯ ಪಹಣಿ ಪತ್ರಿಕೆ ಜನಾರ್ದನ ದೇವರ ಹೆಸರಲ್ಲಿಯೇ ಇತ್ತು. ಈ ಒಕ್ಕಲು ಮತ್ತು ಬಾಡಿಗೆದಾರರು ಕಾಲಕಾಲಕ್ಕೆ ನೀಡುವ ಬಾಡಿಗೆ ದೇವಳಕ್ಕೆ ಆದಾಯವಾಗಿತ್ತು. ಲಾಭವೋ ನಷ್ಟವೋ ಅಂತೂ ಪದ್ವೆಟ್ನಾಯರು ದೇವಸ್ಥಾನದ ಉಸ್ತುವಾರಿಯನ್ನು ನೋಡಿಕೊಂಡು ಬಂದಿದ್ದರು.

ಒಂದು ದಿನ ದಿಢೀರ್ ಎಂದು ಪದ್ವೆಟ್ನಾಯರ ಅಂಗಡಿಯಲ್ಲಿ ಕೆಲಸಕ್ಕಿದ್ದ ಬಿ.ಕೆ. ಶಿವರಾಂ ಎನ್ನುವ ವ್ಯಕ್ತಿ ಈ ದೇವಳದ ಸರ್ವೆ ನಂಬರ್‌ಗಳನ್ನು ನಮೂದಿಸಿ, ಈ ಜಮೀನು ಕಳೆದ 12 ವರ್ಷಗಳಿಂದಲೂ ತನ್ನ ವಶದಲ್ಲಿದೆಯೆಂದೂ, ಅದರಲ್ಲಿ ಔಷಧಿ ಸಸಿ ಮತ್ತು ಗೇರು ಕೃಷಿ ಮಾಡಿಕೊಂಡು ಬಂದಿರುವುದಾಗಿಯೂ ಬೆಳ್ತಂಗಡಿ ನ್ಯಾಯಾಲಯದಲ್ಲಿ ದಿನಾಂಕ 10.8.2005ರಂದು ದಾವೆ ಹೂಡಿದ (ಓ.ಎಸ್ ನಂ. 195/2005). ಕೇಸಿನ ವಿಚಾರಣೆಯನ್ನು 5.9.2005ರಂದು ಮುಗಿಸಿ, 15.9.2005ರಂದು ದೇವಳದ ಪರವಾಗಿ ಮೊಕ್ತೇಸರ ವಿಜಯರಾಘವನ ಹೇಳಿಕೆಯನ್ನೂ ಪಡೆಯಲಾಯಿತು. ಹೇಳಿಕೆಯಲ್ಲಿ ಆತ "ಹೌದು, 1987ರಿಂದಲೂ ಅದು ಬಿ.ಕೆ. ಶಿವರಾಂ ವಶದಲ್ಲಿದೆ. ನಾನಾಗಲೀ ನಮ್ಮ ತಂದೆಯಾಗಲೀ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ" ಎಂದು ಹೇಳಿದರು. 16.11.2005ರಂದು ಬಿ.ಕೆ. ಶಿವರಾಂ ಪರವಾಗಿ ತೀರ್ಪು ಹೊರಬಿತ್ತು. ಅಂದರೆ ಅರ್ಜಿ ದಾಖಲಿಸಿದ ಕೇವಲ 75 ದಿನಗಳೊಳಗೆ ಸಿವಿಲ್ ವ್ಯಾಜ್ಯವೊಂದು ಬಗೆಹರಿದಿದ್ದು ಬೆಳ್ತಂಗಡಿ ಚರಿತ್ರೆಯಲ್ಲಿಯೇ ಒಂದು ದಾಖಲೆ. ಇಷ್ಟೊಂದು ತರಾತುರಿಯಲ್ಲಿ ವ್ಯಾಜ್ಯವನ್ನು ಇತ್ಯರ್ಥಗೊಳಿಸುವುದರ ಹಿಂದೆ ವಿಜಯರಾಘವನ ಕೈವಾಡವಿತ್ತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕೊನೆಗೆ ಈ ವಿವಾದಾತ್ಮಕ ತೀರ್ಪನ್ನು ನೀಡಿದ ನ್ಯಾಯಾಧೀಶ ಸಸ್ಪೆಂಡಾದರು ಎಂಬುದು ಬೇರೆ ಮಾತು.

ಮಂಗಳೂರು

ಮಹೇಶ್ ಶೆಟ್ಟಿಯ ಹಲ್ಲು ಕಿತ್ತ ಚಡ್ಡಿಗಳು

ಅಸಲಿಗೆ ಎರಡು ವರ್ಷ ಹಳೆಯದಾದ ಈ ವಿಚಾರವನ್ನೆಲ್ಲ ಬಯಲಿಗೆಳೆದವನು ಒಂದು ಸಮಯದಲ್ಲಿ ಇದೇ ವಿಜಯರಾಘವನ ಪಟ್ಟ ಶಿಷ್ಯನಾಗಿದ್ದ ಮಹೇಶ್ ಶೆಟ್ಟಿ. ಈಗ ಅವರಿಬ್ಬರ ಮಧ್ಯೆ ಕಚ್ಚಾಟ ಪ್ರಾರಂಭವಾಗಿರುವುದೇ ಇದಕ್ಕೆ ಪ್ರಧಾನ ಕಾರಣ.

ಈ ಮಹೇಶ್ ಶೆಟ್ಟಿಯೇನೂ ಬಹಳ ಸಾಚಾ ಅಲ್ಲ. ಬೆಳ್ತಂಗಡಿಯಲ್ಲಿ ವಸಂತ ಬಂಗೇರಾ ಶಾಸಕನಾಗಿ, ಮುಖ್ಯ ಸಚೇತಕನಾಗಿ ಮಿಂಚುತ್ತಿದ್ದ ಕಾಲವದು. ಅಲ್ಲಿಯತನಕ ಮುಂಬಯಿಯಲ್ಲಿದ್ದು ಗಡ್ಡ ಬೆಳೆಸಿ ಒಂಥರಾ ರೌಡಿ ಇಮೇಜಿನೊಂದಿಗೆ ಉಜಿರೆಗೆ ಬಂದಿದ್ದ ಮಹೇಶ್ ಶೆಟ್ಟಿ ತನ್ನ ತಂಗಿಗೆ ಕೀಟಲೆ ಮಾಡಿದ ಎಂದು ಆರೋಪಿಸಿ ಒಬ್ಬ ಮುಸ್ಲಿಮ್ ಯುವಕನಿಗೆ ನಡುಬೀದಿಯಲ್ಲಿಯೇ ಬಟ್ಟೆ ಬಿಚ್ಚಿ ಯದ್ವಾತದ್ವಾ ಹೊಡೆದು ಮೆರವಣಿಗೆ ಮಾಡಿದ್ದ. ಇದನ್ನೆಲ್ಲ ನೋಡಿ ಅಲ್ಲಿಯ ತನಕ ಬಂಗೇರಾ ಖದರಿಗೆ ಬಾಲಮುದುರಿಕೊಂಡಿದ್ದ ಚಡ್ಡಿಗಳು ಮಹೇಶ್ ಶೆಟ್ಟಿಯನ್ನು ದಾಳವನ್ನಾಗಿ ಬಳಸಿಕೊಳ್ಳಲು ಸ್ಕೆಚ್ ಹಾಕಿದರು. ಇನ್ನೊಂದೆಡೆ ಉಜಿರೆಯಲ್ಲಿ ನಾಮಕಾವಸ್ತೆಗಷ್ಟೆ ಮೊಕ್ತೇಸರನಾಗಿದ್ದ ವಿಜಯರಾಘವನಿಗೂ ಮಹೇಶ್ ಶೆಟ್ಟಿಯ ಬೆಂಬಲ ಬೇಕಾಗಿತ್ತು. ಮಹೇಶ್ ಶೆಟ್ಟಿಗೂ ತಾನು ಬೆಳೆಯುವುದಕ್ಕೆ ಒಂದು ಧಾರ್ಮಿಕ ಬ್ಯಾನರ್‌ನ ಅವಶ್ಯಕತೆ ಇತ್ತು. ಇವೆಲ್ಲದರ ಪರಿಣಾಮವಾಗಿ ಚಡ್ಡಿ ವಿಜಯರಾಘವ ಮತ್ತು ಮಹೇಶ್ ಶೆಟ್ಟಿಯ ಅನೈತಿಕ ಕೂಟವೊಂದು ಉಜಿರೆಯಲ್ಲಿ ಬೆಳೆಯಲಾರಂಭಿಸಿತು.

ನಂತರದ ದಿನಗಳಲ್ಲಿ ಗಣೇಶೋತ್ಸವ, ಉಜಿರೆ ರಥೋತ್ಸವ ಸೇರಿದಂತೆ ಹಲವಾರು ಆಚರಣೆಗಳಲ್ಲಿ ಮಹೇಶ್ ಶೆಟ್ಟಿ ಸಕ್ರಿಯವಾಗಿ ಭಾಗವಹಿಸಲಾರಂಭಿಸಿದ. ಇದರಿಂದ ವಿಜಯರಾಘವನಿಗೂ ಒಂದಿಷ್ಟು ಉಸಿರು ಬಂದಂತಾಯಿತು. ಎಲ್ಲದಕ್ಕೂ ಹುಂಬನಂತೆ ನುಗ್ಗುವ ಮಹೇಶ್ ಶೆಟ್ಟಿಯನ್ನು ವಸಂತ ಬಂಗೇರಾ ವಿರುದ್ಧ ವ್ಯವಸ್ಥಿತವಾಗಿ ಬೆಳೆಸಿದ್ದರಿಂದ, ದಾಳವಾಗಿ ಬಳಸಿದ್ದರಿಂದ ಮಹೇಶ್ ಶೆಟ್ಟಿಯ ಇಮೇಜೂ ಹೆಚ್ಚಾಯಿತು.


ಬಿ.ಕೆ. ಶಿವರಾಮ್

ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಚಡ್ಡಿಗಳು ಮಹೇಶ್ ಶೆಟ್ಟಿಯನ್ನು ಹಿಂದೂ ಜಾಗರಣಾ ವೇದಿಕೆಯ ಅಧ್ಯಕ್ಷನನ್ನಾಗಿ ಮಾಡಿದರು. ಅಧ್ಯಕ್ಷ ಪಟ್ಟ ಸಿಕ್ಕಿದ್ದೇ ತಡ ಇಂಗು ತಿಂದ ಮಂಗನಂತಾದ ಶೆಟ್ಟಿ ಬೆಳ್ತಂಗಡಿಯಲ್ಲಿ ಮುಸ್ಲಿಮರನ್ನು ಸರ್ವನಾಶ ಮಾಡುತ್ತೇನೆನ್ನುತ್ತಾ ಕಂಡಕಂಡಲ್ಲಿ ಗೂಂಡಾಗಿರಿಗಿಳಿದು ಮೈತುಂಬಾ ಕೇಸುಗಳನ್ನು ಹಾಕಿಸಿಕೊಂಡ. ಹೀರೋನಂತೆ ಮಿಂಚಿದ ಶೆಟ್ಟಿಯ ಸುತ್ತ ಪುಂಡ ಮತಾಂಧ ಹುಡುಗರ ಗುಂಪೊಂದು ಬೆಳೆದು ನಿಂತಿತ್ತು. ವಾಸ್ತವದಲ್ಲಿ ಇದು ನಂತರದ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿತ್ತು. ಇದನ್ನೆಲ್ಲಾ ಲೆಕ್ಕ ಹಾಕಿದ ಶೆಟ್ಟಿಯ ತಲೆಯೊಳಗೆ ತಾನೂ ರಾಜಕೀಯ ಲೀಡರ್ ಆಗಿ ಬೆಳೆಯುವ ಹುಚ್ಚನ್ನು ಹುಟ್ಟುಹಾಕಿತ್ತು. ಇದಕ್ಕೆ ಪೂರಕವಾಗಿ ಸ್ಥಳೀಯ ಪತ್ರಿಕೆಗಳೂ ಇವನನ್ನೇ ಮುಂದಿನ ಶಾಸಕ ಎಂಬಂತೆ ಬಿಂಬಿಸಿದವು.


ಮಹೇಶ್ ಶೆಟ್ಟಿ

ಬೆಳೆಯುತ್ತಿದ್ದ ಮಹೇಶ್ ಶೆಟ್ಟಿಯ ವರ್ಚಸ್ಸಿನಿಂದ ಮೊದಲು ತಳಮಳಗೊಂಡವನು ಚಡ್ಡಿಗಳ ಕಮ್ಯಾಂಡರ್ ಕಲ್ಲಡ್ಕ ಪ್ರಭಾಕರ ಭಟ್ಟ. ಮುಂದೊಂದು ದಿನ ಶೆಟ್ಟಿ ತನಗೇ ಮುಳುವಾಗಬಹುದೆಂದು ಆಲೋಚಿಸಿದ ಭಟ್ಟ ಅವನನ್ನು ತುಳಿಯಲು ಒಳಗೊಳಗೇ ಸಂಚು ರೂಪಿಸಲಾರಂಭಿಸಿದ. ಬೆಳ್ತಂಗಡಿ ತಾಲ್ಲೂಕು ಬಿಜೆಪಿ ಅಧ್ಯಕ್ಷನನ್ನಾಗಿ ಮಾಡುತ್ತೇವೆಂದು ಶೆಟ್ಟಿಯನ್ನು ನಂಬಿಸಿ ಅವನು ಶಾಸಕ ಸ್ಥಾನಕ್ಕೆ ಸ್ಪರ್ಧಿಸದಂತೆ ನೋಡಿಕೊಳ್ಳಲಾಯಿತು. ಮಹೇಶ್ ಶೆಟ್ಟಿಯ ವರ್ಚಸ್ಸಿನಲ್ಲಿಯೇ ಪ್ರಭಾಕರ್ ಬಂಗೆರಾನನ್ನು ಕಣಕ್ಕೆ ಇಳಿಸಿ ಗೆಲ್ಲಿಸಲಾಯಿತು. ಯಾವಾಗ ಮಹೇಶ್ ಶೆಟ್ಟಿ ತಾಲ್ಲೂಕು ಅಧ್ಯಕ್ಷನ ಪಟ್ಟ ಕೇಳಿದನೋ ಆಗ ಆತ ಪಕ್ಷದ ಪ್ರಾಥಮಿಕ ಸದಸ್ಯ ಕೂಡ ಆಗಿಲ್ಲ ಎಂಬ ರಾಗ ಎಳೆದು ಟೋಪಿ ಹಾಕಿಬಿಟ್ಟರು ಚಡ್ಡಿಗಳು. ಅಷ್ಟು ಸಾಲದು ಎಂಬಂತೆ ಉಜಿರೆ ಜಿಲ್ಲಾ ಪಂಚಾಯತ್‌ಗೆ ಕೂಡ ಟಿಕೆಟ್ ಕೊಡದೇ ಕೃಷ್ಣ ಗುಡಿಗಾರ್ ಎಂಬುವನನ್ನು ನಿಲ್ಲಿಸಿ ಶೆಟ್ಟಿಗೆ ಅವಮಾನ ಮಾಡಿದರು. ಕೊನೆಗೆ ಶೆಟ್ಟಿಯ ಪಾಲಿಗೆ ಉಳಿದದ್ದು ಮೈತುಂಬಾ ಪೊಲೀಸ್ ಕೇಸುಗಳು ಮಾತ್ರ. ಪ್ರಾಯಶಃ ಆಗ ಶೂದ್ರ ಶೆಟ್ಟಿಗೆ ಚಡ್ಡಿ ಬ್ರಾಹ್ಮಣರ ಕುತಂತ್ರ ಅರ್ಥವಾಗಿರಬೇಕು.

ಚಡ್ಡಿಗಳ ಕುತಂತ್ರ ಅಲ್ಲಿಗೇ ನಿಲ್ಲಲಿಲ್ಲ. ಮಹೇಶ್ ಶೆಟ್ಟಿಯನ್ನು ಹತ್ತಿರ ಸೇರಿಸಬಾರದೆಂದು ವಿಜಯರಾಘವನಲ್ಲಿಯೂ ಅವರು ಫಿಟಿಂಗ್ ಇಟ್ಟಿದ್ದರು. ಅಷ್ಟು ಹೊತ್ತಿಗಾಗಲೇ ಶೆಟ್ಟಿಯ ದೆಸೆಯಿಂದ ಉಜಿರೆ ಜನಾರ್ದನ ದೇವಳದ ವಿಜಯರಾಘವನೂ ಪೊಗರದಸ್ತಾಗಿ ಬೆಳೆದುಬಿಟ್ಟಿದ್ದ. ದೇವಾಲಯದ ಬ್ರಹ್ಮ ಕಲಶ ಅದ್ದೂರಿಯಾಗಿ ನಡೆದು ಅಪಾರ ಧನ-ಕನಕ ಸಂಗ್ರಹವಾಗಿತ್ತು. ಅದಕ್ಕೆ ಸಾರ್ವಜನಿಕರಿಗೆ ಲೆಕ್ಕವನ್ನೂ ತೋರಿಸಿರಲಿಲ್ಲ. ಪರಿಣಾಮವಾಗಿ ಉಜಿರೆಯ ಧಣಿ ಸದ್ದಿಲ್ಲದೇ ರಾತ್ರೋರಾತ್ರಿ ಕುಬೇರರಾಗಿ ಹೋಗಿದ್ದರು. ನೋಡು ನೋಡುತ್ತಿದ್ದಂತೆ ಲಡಕಾಸು ಸ್ಕೂಟರ್ ಮೂಲೆ ಸೇರಿ ಕಾರು ಬಂದಿತ್ತು; ಮೂರು ಭರ್ಜರಿ ವಾಣಿಜ್ಯ ಸಂಕೀರ್ಣಗಳು ಉಜಿರೆಯಲ್ಲಿ ತಲೆ ಎತ್ತಿದವು. ವಿಜಯರಾಘವನಿಗೂ ಆಗಲೇ ಮಹೇಶ್ ಶೆಟ್ಟಿ ಅಲರ್ಜಿಯಾಗತೊಡಗಿದ್ದ. ಚಡ್ಡಿಗಳು ಫಿಟಿಂಗ್ ಇಟ್ಟದ್ದು ಅದಕ್ಕೊಂದು ಇಟ್ಟಿಗೆ ಸೇರಿಸಿದಂತಾಗಿತ್ತು.

ತಿರುಗಿಬಿದ್ದ ಮಹೇಶ್ ಶೆಟ್ಟಿ

ಕಳೆದ ವರ್ಷ ಮಿಲಾದುನ್ನಭಿ ಆಚರಣೆಗೆ ಉಜಿರೆಯ ಮುಸ್ಲಿಮರಿಗೆ ದೇವಸ್ಥಾನದ ರಥಬೀದಿಯನ್ನು ಪುಕ್ಕಟೆಯಾಗಿ ಬಿಟ್ಟುಕೊಟ್ಟಿದ್ದರಿಂದ ಪಕ್ಕಾ ಮುಸ್ಲಿಮ್ ವಿರೋಧಿ ಮಹೇಶ್ ಶೆಟ್ಟಿ ಉರಿದು ಹೋಗಿದ್ದಾನೆ. ಇದನ್ನು ಪ್ರಶ್ನಿಸಿದಾಗ "ಇದು ನನ್ನ ದೇವಸ್ಥಾನ, ನಾನು ಆನುವಂಶಿಕವಾಗಿ ಇದರ ಒಡೆಯ, ನೀನು ಯಾವನು ಕೇಳೋಕೆ?" ಎಂದು ಪದ್ವೆಟ್ನಾಯರು ಖಾರವಾಗಿ ಮರು ಪ್ರಶ್ನೆ ಹಾಕಿದ್ದು ಶೆಟ್ಟಿಗೆ ಮತ್ತಷ್ಟು ಉರಿ ತಂದಿದೆ. ಪದ್ವೆಟ್ನಾಯರ ಹತ್ತಿರವೇ ಬೆಳೆದು ಅವರ ಎಲ್ಲಾ ವೀಕ್ನೆಸ್‌ಗಳನ್ನು ಚೆನ್ನಾಗಿ ಬಲ್ಲ ಶೆಟ್ಟಿ ಪ್ರತೀಕಾರಕ್ಕೆ ಮುಂದಾಗಿದ್ದಾನೆ. ಇದೆಲ್ಲದರ ಪರಿಣಾಮವಾಗಿ ವಿಜಯರಾಘವ ತನ್ನ ಕೆಲಸದಾಳು ಬಿ.ಕೆ. ಶಿವರಾಂನ ಹೆಸರಿನಲ್ಲಿ ಜನಾರ್ದನ ದೇವಳದ 14 ಎಕರೆ ಆಸ್ತಿಯನ್ನು ನುಂಗಿದ ಹಗರಣವನ್ನು ಬಯಲಿಗೆಳೆದಿದ್ದಾನೆ. ಮಾತ್ರವಲ್ಲ ಅದನ್ನು ಆತ ಪುತ್ತೂರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ನ್ಯಾಯಾಲಯ ಈಗ ತಡೆಯಾಜ್ಞೆ ನೀಡಿದೆ. ಇದು ಸ್ಯಾಂಪಲ್ ಮಾತ್ರ.

ಇನ್ನು ಮಹೇಶ್ ಶೆಟ್ಟಿ ಮಾಡಿರಬಹುದಾದ ಘನಂಧಾರಿ ಕೆಲಸಗಳನ್ನು ಚಡ್ಡಿಗಳು ಮತ್ತು ವಿಜಯರಾಘವ ಸೇರಿಕೊಂಡು ಬಯಲಿಗೆಳೆಯದಿರುತ್ತಾರೆಯೆ?


ಒಟ್ಟಿನಲ್ಲಿ ಇವರಿಬ್ಬರ ಜಗಳದಲ್ಲಿ ಅದೆಷ್ಟು ಹಗರಣಗಳು ಬಯಲಿಗೆ ಬರುತ್ತವೆಯೋ ನೋಡಬೇಕು.

-ವರದಿಗಾರ

ಚೋರ ಗುರುವಿನ ಸುತ್ತ ಚಾಂಡಾಲ ಶಿಷ್ಯರು

ಸರಿಯಾಗಿ ಕಿವಿ ಕೇಳಿಸದ ವಿಜಯರಾಘವ ಪದ್ವೆಟ್ನಾಯ ಎಂಬ ಚೋರ ಗುರುವಿನ ಸುತ್ತ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವ ಚಾಂಡಾಲ ಶಿಷ್ಯರ ದೊಡ್ಡ ಹಿಂಡೇ ಇದೆ. ಅವರ ಬಗ್ಗೆ ಬರೆಯುತ್ತಾ ಹೋದರೆ ಅದೇ ಒಂದು ಹೀನ ಪುರಾಣವಾದೀತು. ಹಾಗಾಗಿ ಇಲ್ಲಿ ಸಂಕ್ಷಿಪ್ತವಾಗಿ ಮಾತ್ರ ಬರೆಯಲಾಗಿದೆ.

ಪ್ರತಾಪಸಿಂಹ ನಾಯಕ್: ಈತ ಬಿಜೆಪಿಯ ಮಾಜಿ ಜಿಲ್ಲಾಧ್ಯಕ್ಷ. ಬೆಳ್ತಂಗಡಿಯ ಬಿಜೆಪಿ ಕಂಟ್ರೋಲರ್. ಈತನ ತಂದೆ ವೀರಸಿಂಹ ನಾಯಕ್ ಕೂಡ ಜನಸಂಘದ ಕಾಲದಲ್ಲಿ ಸಂಘಪರಿವಾರದ ದೊಡ್ಡ ಶಕ್ತಿಯಾಗಿದ್ದ. ಆಗ ವಸಂತ ಬಂಗೇರಾ ಹೇಗೆ ವೀರಸಿಂಹರ ಸುತ್ತ ಹೇದೆಯಂತೆ ತಿರುಗುತ್ತಿದ್ದರೋ, ಅದೇ ರೀತಿ ಮಗ ಪ್ರತಾಪ ಕೂಡ ಮಹೇಶ್ ಶೆಟ್ಟಿಯನ್ನು ತನ್ನ ಬಾಡಿಗಾರ್ಡ್ ಆಗಿ ಮಾತ್ರವೇ ಇರಬೇಕು ಎಂದು ಬಯಸಿದ್ದಾತ. ಹಿಂದುತ್ವದ ಬಗ್ಗೆ ಉಗ್ರ ಭಾಷಣ ಬಿಗಿಯುವ ಈತ ವೃತ್ತಿಯಲ್ಲಿ ವಕೀಲ. ಕಾಜೂರಿನ ಗಂಧಕಳ್ಳ, ಸಾಬಿಗಳ ಕೇಸುಗಳೆಲ್ಲಾ ಬರುವುದು ಇವನಿಗೆ. ಮಹೇಶ್ ತನ್ನ ತಾಳಕ್ಕೆ ತಕ್ಕಂತೆ ಕುಣಿಯಲು ಸಿದ್ಧನಿಲ್ಲ ಎಂದು ಈತನಿಗೆ ಯಾವಾಗ ಅನಿಸತೊಡಗಿತೋ ಅವನ ಹಲ್ಲು ಕೀಳಲು ಮುಂದಾಗಿಬಿಟ್ಟ.


ಪ್ರತಾಪಸಿಂಹ ನಾಯಕ್

ಪ್ರತಾಪನ ಪ್ರತಾಪಗಳನ್ನೂ ಮಹೇಶ್ ಶೆಟ್ಟಿ ಬಯಲು ಮಾಡಿದ್ದಾನೆ. ಪುತ್ತೂರಾಯ ಎಂಬುವವರು ರೋಹಿತಾಕ್ಷ ಆಚಾರಿ ಮೇಲೆ ಹೂಡಿದ ಚೆಕ್ ಬೌನ್ಸ್ ದಾವೆ (ಓ.ಎಸ್ ನಂ.251/96) ಪ್ರತಾಪನ ಮೇಲಿದೆ. ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳಿಬ್ಬರ ಪರವಾಗಿ ಪ್ರತಾಪಸಿಂಹ ನಾಯಕ್ ಒಬ್ಬನೇ ವಕೀಲತ್ತು ನಡೆಸಿ ರೋಹಿತಾಕ್ಷ ಆಚಾರಿಗೆ ದ್ರೋಹ ಎಸಗಿದ್ದಕ್ಕೆ, ಪ್ರಕರಣದ ಬಗ್ಗೆ ನ್ಯಾಯಾಲಯ ತನಿಖೆ ನಡೆಸುತ್ತಿದೆ.

ಅತ್ತಾಜೆ ಕೇಶವಭಟ್ಟ: ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯನಾಗಿರುವ ಈತನನ್ನು ಮಾನವಂತರು ಮನೆಯೊಳಗೆ ಬಿಟ್ಟುಕೊಳ್ಳುವುದಕ್ಕೆ ಹಿಂದುಮುಂದು ನೋಡುತ್ತಾರೆ. ಅಂಥಾ ಇತಿಹಾಸ ಈತನಿಗಿದೆ. ಪದ್ವೆಟ್ನಾಯರ ಭೂಹಗರಣದ ದಾಖಲೆಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದವನೇ ಈತ. ಸದ್ಯಕ್ಕೆ ಉಜಿರೆಯ ಧಣಿಯ ಆಸ್ಥಾನ ಪಾಲಕ.

ಅಶೋಕ ಭಟ್ಟ: ಪದ್ವೆಟ್ನಾಯರ ಆಸ್ಥಾನ ಪಂಡಿತನಂತೆ ವರ್ತಿಸುವ ಅಶೋಕ ಭಟ್ಟರ ಅಖಂಡ ಬ್ರಹ್ಮಚರ್ಯದಿಂದಾದ ಗಂಡಾಂತರದ್ದೇ ಉಪಕತೆಗಳಿವೆ. ಕುರಿಯ ಪ್ರತಿಷ್ಠಾನ ಹೆಸರಲ್ಲಿ ವರ್ಷಕ್ಕೊಮ್ಮೆ ಚಂದಾ ಎತ್ತುವುದು, ಭರತನಾಟ್ಯ ಯಕ್ಷಗಾನ ಕಲಿಸಲು ಹೋಗಿ ಯೋಗಾಸನ ತಿಳಿಸುವುದು-ಇಂಥ ಕಸುಬುಗಳನ್ನು ಮಾಡಿಕೊಂಡು ಉಜಿರೆಯಲ್ಲಿ ಅಂಡಲೆಯುತ್ತಿದ್ದ ಈತ ಸದ್ಯ ಹೊಸನಗರದ ಯಕ್ಷಗಾನ ಮೇಳದಲ್ಲಿ ಮ್ಯಾನೇಜರ್. ಮೈಕ್ ಸಿಕ್ಕರೆ ಕಾಗೆಯಂತೆ ಕಿರುಚುವ ಈತ ಕೂಡ ಇತ್ತೀಚೆಗೆ ಚೆಕ್‌ಬೌನ್ಸ್ ಕೇಸೊಂದರಲ್ಲಿ ವಾರೆಂಟೆಡ್ ಆಗಿದ್ದ.

ಪಾಂಡುರಂಗ ಬಾಳಿಗಾ: ಹಿಂದೊಮ್ಮೆ ಪದ್ವೆಟ್ನಾಯರ ವಿರುದ್ಧವೇ ತಿರುಗಿಬಿದ್ದಿದ್ದ ಈತ. ಆದರೆ ಅದೇನು ಒಳಗೊಳಗೇ ಒಪ್ಪಂದವಾಯಿತೋ ಗೊತ್ತಿಲ್ಲ ಈಗ ಅವರ ಕಟ್ಟಾ ಬೆಂಬಲಿಗನಾಗಿ ಬಿಟ್ಟಿದ್ದಾನೆ. ತನ್ನ ಸ್ವಜಾತಿಯ ವೆಂಕಟರಮಣ ದೇವಸ್ಥಾನದಿಂದ ಹೊರಗಿಡಲ್ಪಟ್ಟ ಈತ ಮೂರೂ ಬಿಟ್ಟವನಂತೆ ಈಗ ಇದ್ದಕ್ಕಿದ್ದಂತೆ ಪದ್ವೆಟ್ನಾಯರ ಬೆಂಬಲಕ್ಕೆ ನಿಂತಿರುವುದನ್ನು ನೋಡಿದರೆ ಅದ್ಯಾವುದೋ ಸ್ಕೆಚ್ ಹಾಕುತ್ತಿರುವಂತೆ ಕಾಣುತ್ತಿದೆ.

ಪಾಂಡುರಂಗ ಭಂಡಾರ್ಕರ್: ಮೂಲತಃ ಆರ್‌ಟಿಒ ಬ್ರೋಕರ್ ಕೆಲಸ ಮಾಡಿಕೊಂಡೇ ತಿರುಗುವ ಈತ ಸಫಾರಿ ತೊಟ್ಟು ಹೊರಟನೆಂದರೆ ನೋಡುಗರ ಕಣ್ಣಿಗೆ ಬಹಳ ಸಭ್ಯ. ಆರ್‌ಟಿಒಗಳಿಗೆ ಹೂ ಕೊಟ್ಟು ಕಮಾಯಿ ಮಾಡುವ ಬಂಡಾರ್ಕರ್ ಕೂಡ ಒಂದು ಕಾಲದಲ್ಲಿ ಪದ್ವೆಟ್ನಾಯರಿಗೆ 1.5 ಲಕ್ಷದಷ್ಟು ಸಾಲ ಕೊಟ್ಟಿದ್ದ. ಅದನ್ನು ಅವರು ಸಕಾಲದಲ್ಲಿ ವಾಪಾಸ್ಸು ಕೊಡದೇ ಹೋದಾಗ ದೇವಸ್ಥಾನದ ಜಾಗದಲ್ಲಿರುವ ಥಿಯೇಟರ್ ಒಂದನ್ನೇ ನುಂಗಲು ಹವಣಿಸಿದ್ದ. ಸದ್ಯಕ್ಕೆ ಪದ್ವೆಟ್ನಾಯರ ಬೆಂಬಲಕ್ಕೆ ನಿಂತ ಅನಾಥ ರಕ್ಷಕ.

ಇನ್ನುಳಿದಂತೆ ಮನೆಯಲ್ಲಿ ಬಿಜೆಪಿ, ಬೀದಿಯಲ್ಲಿ ಕಾಂಗ್ರೆಸ್ ಮಾಡಿ ಗೋಸುಂಬೆ ಥರಾ ಇರುವ ಮೋಹನ್ ಶೆಟ್ಟಿಗಾರ್, ಸಿಂಗಲ್ ನಂಬರ್ ಮಟ್ಕಾ ದಂಧೆಗಳಲ್ಲಿ ಕಮಾಯಿಸಿ ಸಂಭಾವಿತನಾದ ವಸಂತ ಕೂರ್ಮಾನಿ ಎಂಬ ಖದೀಮ ಇವರೆಲ್ಲರೂ ಪದ್ವೆಟ್ನಾಯರ ಭಟ್ಟಂಗಿಗಳೆ. ವಿಜಯರಾಘವನ ಪೂರ್ವಾಪರವನ್ನು ಕೆದಕಿದರೆ ಮಾನವಂತರಾರೂ ಸಿಗುವುದಿಲ್ಲ. ಸಿಗುವವರೆಲ್ಲ ಇಂಥ ಚಾಂಡಾಲರೇ.

ಅಟ್ರಾಸಿಟಿ, ಬೋಗಸ್‌ಬಿಲ್, ನೆಲಗಳ್ಳರು:
ಮನೆಗೆ ಹೋಗಿರುವ ಕೌನ್ಸಿಲರ್ಸ್ ಹೀಗಿದ್ದರು!

ಒಂದು ವರ್ಷದ ಹಿಂದೆ ಮನೆಗೆ ಹೋಗಿ ಕುಳಿತಿರುವ ಮಾಜಿ ಕೌನ್ಸಿಲರ್ಸ್ 5 ವರ್ಷಗಳ ಕಾಲ ಜಿಲ್ಲೆಯ ಸ್ಥಳೀಯ ಸಂಸ್ಥೆಗಳನ್ನು ಎಷ್ಟು ಉದ್ಧಾರ ಮಾಡಿದರು, ತಾವೆಷ್ಟು ಉದ್ಧಾರವಾದರು, ಅವರೆಲ್ಲ ಕಡಿದು ಹಾಕಿದ್ದೇನು ಎಂಬುದರ ಹಿನ್ನೋಟ ಈ ವರದಿ. ಸರಿಯಾಗಿ ಇನ್ನು ಹತ್ತು ದಿನಕ್ಕೆ ಆಯ್ಕೆಗೊಳ್ಳುವ ಪುಣ್ಯಾತ್ಮರು ಹೇಗಿರಬೇಕೆಂಬುದರ ಚಿತ್ರಣ ಈ ವರದಿ ಓದಿದ ಮೇಲಾದರು ಬರಲಿ ಎಂಬ ಸದ್ದುದ್ದೇಶ ಈ ವರದಿಯದು.

ಮಳೆಗಾಲದಲ್ಲೂ ಕುಡಿವ ನೀರಿನ ಕೊರತೆ, ವರ್ಷಪೂರ್ತಿ ಕತ್ತಲಾಗಿದ್ದ ಬೀದಿಗಳು, ಕಂದೋರ ಸೈಟನ್ನು ನುಂಗಿದ್ದು, ಏನು ಸಿಗದೇ ಹೋದಾಗ ನೀರಿನ ಪೈಪುಗಳನ್ನು ಮಾರಿದ್ದು, ಬೋಗಸ್‌ಬಿಲ್ ಜಡಿದಿದ್ದು ...ಒಂದೇ... ಎರಡೇ ಜಿಲ್ಲೆಯ ಜನರಲ್ಲಿ ಅಸಹ್ಯ ಉಂಟು ಮಾಡಿದ್ದು 3 ತಾಲೂಕಿನ ಕೌನ್ಸಿಲರ್‌ಗಳ ಹೆಗ್ಗಳಿಕೆ. ಅದರಲ್ಲಿ ಅಗ್ರಗಣ್ಯರೆಂದರೆ ಕೊಪ್ಪಳದವರು. ಪಕ್ಕದಲ್ಲೇ ದೆವ್ವದಂತಹ ಡ್ಯಾಂ ಇಟ್ಟುಕೊಂಡು ಕುಡಿಯುವ ನೀರಿಗೆ ಬಾಯಿ ಬಡಿದುಕೊಳ್ಳುವ ಗೋಳು ಯಾವತ್ತಿಗೂ ತೀರದು. ಅಂತಹದ್ದರಲ್ಲಿ ಕೊಪ್ಪಳದ 21 ನೇ ವಾರ್ಡ್‌ನ ಸದಸ್ಯನಾಗಿದ್ದ ವೀರಣ್ಣಗಾಣಿಗೇರ ಎಂಬ ಭ್ರಷ್ಟ ಕರ್ನಾಟಕ ವಾಟರ್ ಸಪ್ಲೈನವರು ಹಾಕಿದ ಪೈಪ್‌ಲೈನ್ ಕೆಲಸದ ಮೇಲೆ ನಗರಸಭೆಯಲ್ಲಿಯೂ ಪ್ರತ್ಯೇಕ ಬಿಲ್ ಎತ್ತಿದ್ದ. ದೊಡ್ಡಬಾಯಿಯ ದೊಡ್ಡದೇಹದ ಗಾಣಿಗೇರ ಡಬಲ್ ಬಿಲ್ ಎತ್ತಿದ್ದನ್ನು ಪತ್ತೆ ಹಚ್ಚಿದ್ದು ಕಮಿಷನರ್ ಕೃಷ್ಣ ಮೂರ್ತಿ. ಗಾಣಿಗೇರ್ ಮಾತು ಕೇಳಿ ಬಿಲ್ ಕೊಟ್ಟು ಪ್ರಸಾದ ತಿಂದಿದ್ದ ಗೋನಾಳ್ ಈಗ ಸಸ್ಪೆಂಡಾಗಿದ್ದಾನೆ. ಇದೇ ಸಿಟ್ಟಿನಲ್ಲಿದ್ದ ಗಾಣಿಗೇರ ದಿನಗೂಲಿ ನೌಕರರು ಮುಷ್ಕರಕ್ಕೆ ಕುಳಿತ ಸಂದರ್ಭದಲ್ಲಿ ಕೃಷ್ಣಮೂರ್ತಿಯೊಂದಿಗೆ ಜಗಳ ತೆಗೆದು, ಜಾತಿನಿಂದನೆ ಮಾಡಿ ಅಟ್ರಾಸಿಟಿ ಹಚ್ಚಿಸಿಕೊಂಡು ಈಗಲೂ ಕೋರ್ಟಿಗೆ ಅಲೆಯುತ್ತಿದ್ದಾನೆ.

ಲಲಿತಾರಗಡಿ ಅಧ್ಯಕ್ಷಗಿರಿಯಿಂದ ಇಳಿದ ಮೇಲೆ ಜೆಡಿಎಸ್‌ಗೆ ಜಂಪ್ ಹೊಡೆದು ಅಧ್ಯಕ್ಷನಾದ ವಿಜಯರೆಡ್ಡಿ ಜೊತೆ ಉಳಿದ ನಾಲ್ವರ ವಿರುದ್ಧ ಪಕ್ಷಾಂತರ ಕಾಯ್ದೆ ಉಲ್ಲಂಘನೆ ಕೇಸು ಜಡಿದದ್ದು ಅಶೋಕ ಬಜಾರಮಠ. 12 ನೇ ವಾರ್ಡಿನಿಂದ ಗೆದ್ದು ಒಂದಿನವೂ ಮುಖ ತೋರಿಸದ ಮಠ, ಗವಿಸಿದ್ದ ಮಟ್ಟಿಯೊಂದಿಗೆ ರಾಜಿಯಾಗಿ ಬಿಟ್ಟ. ಜೆಡಿಎಸ್ ಟಂನೊಂದಿಗೆ ಅಡ್ಜಸ್ಟ್ ಆದ ಬಜಾರಮಠನ ವಾರ್ಡಿನ ಕೆಲಸದ ಬಿಲ್‌ಗಳನ್ನು ಅಧ್ಯಕ್ಷ ರೆಡ್ಡಿ ಎತ್ತಿ ತಂದಿದ್ದನಂತೆ. ಜಗಳವಾಗಿ, ರೆಡ್ಡಿ ಚೆಕ್ ಕೊಟ್ಟು ಅದೂ ಬೌನ್ಸ್ ಆಗಿ ದೊಡ್ಡರಗಳೆಯೇ ಆಯಿತು. ಈಗ ನೋಡಿದರೆ ಶೇಖ್‌ಬಾವಿಯಿಂದ ಯೂಸುಫಿಯಾ ಮಸೀದಿಯವರಗಿನ ಸಿಸಿ ರೋಡ್ ಕೆಲಸವನ್ನು ಸುರೇಶ್ ಭೂಮರೆಡ್ಡಿಯಿಂದ ಪಡೆದು ಕಳಪೆ ಕೆಲಸ ಮಾಡಿಬಿಟ್ಟ. ನಂತರ ಬಂದ ಅಧ್ಯಕ್ಷ ಕದರಳ್ಳಿ ಸ್ವಂತ ಕಾರಲ್ಲಿ ಓಡಾಡಿ ಬೇರೆಯವರ ಹೆಸರಲ್ಲಿ ಬಿಲ್ ನುಂಗಿದ್ದಾನೆ. ದಾಖಲೆ ಸಮೇತ ಈಗ ಸಿಕ್ಕಿದ್ದಾನೆ. ಜಿಲ್ಲಾಧಿಕಾರಿಗೆ ದೂರು ಕೊಡುವುದೊಂದೇ ಬಾಕಿ, ಕಕ್ಕುವುದು ಗ್ಯಾರಂಟಿ. ಇನ್ನು ಅಧಿಕಾರದ 5 ವರ್ಷವೂ ಎಂದಿನಂತೆ ಚಪ್ಪಲಿಯಿಲ್ಲದೆ ಬರಿಗಾಲಲ್ಲಿ ಅಲೆದದ್ದು ಅನ್ನಸಾರು ಅಲಿಯಾಸ್ ಹನ್ಮಂತಪ್ಪ ಮುಧೋಳನ ಹೆಗ್ಗಳಿಕೆ.

ಅವಕಾಶ ಸಿಕ್ಕರೆ ಮುನ್ಸಿಪಲ್ ಜೊತೆಗೆ ಗಂಗಾವತಿಯನ್ನು ಮಾರಿಬಿಡುವಂತಹ ಕೆಲಖದೀಮರು ಗೆದ್ದಿದ್ದು ಕಳೆದ ಬಾರಿ. ಈ ಊರಲ್ಲಿ ತಿನ್ನುವ ನುಂಗುವ ವಿಷಯದಲ್ಲಿ ಯಾವ ಭೇದ ಇಲ್ಲ. ಅದಕ್ಕೆ ಗಂಗಾವತಿಯ ಸರ್ವೆ ನಂ 293/1 ರಿಂದ 11 ರ ವರೆಗಿನ 12.20 ಎಕರೆ ಪ್ರದೇಶ ಪಾರ್ಕ್, ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟ ಜಾಗವನ್ನು ನುಂಗಲು ಲೇಔಟನ್ನು ಉಲ್ಟಾಪಲ್ಟಾ ಮಾಡಿ ಒಟ್ಟು 55 ಸೈಟು ಸೃಷ್ಟಿಸಿ ನುಂಗಿದರು, ಊರಾಗಿನ ದೊಡ್ಡವರಿಗೂ ಹಂಚಿ ಬಿಟ್ಟರು.


ಕೊಪ್ಪಳದ ನಗರಸಭೆ ಕಾರ್ಯಾಲಯ

ಅದರಲ್ಲಿ ಮುಂಚೂಣಿಯಲ್ಲಿದ್ದರೆಂದರೆ ಮಾಜಿ ಅಧ್ಯಕ್ಷ ವಾಸು ಕೇಳಗಿದ, ರಾಘವೇಂದ್ರ, ಮಾಜಿ ಸಚಿವ ನಾಗಪ್ಪ ಸಾಲೋಣಿ, ಸಿರಿಗೆರೆ ಸುನೀಲ್, ಗಾಳಿ ರಮೇಶ, ಎಸ್.ಬಿ ರೆಡ್ಡಿ, ಈ ಜಾಡು ಹಿಡಿದ 'ಲಂಕೇಶ್' 2006 ರ ಏಪ್ರಿಲ್ 12 ರ ಸಂಚಿಕೆಯಲ್ಲಿ ಸೈಟು ಕದಿಯುವ ಕೌನ್ಸಿಲರ್ಸ್ ಎಂಬ ವರದಿ ಪ್ರಕಟಿಸಿದಾಗ ಸರಕಾರ 55 ಸೈಟು ವಾಪಸ್ಸು ಪಡೆಯಿತು. ಇಡೀ ಗಂಗಾವತಿಯನ್ನು ದೊಡ್ಡ ಸ್ಲಂ ತರಹ ಉಳಿಸಿಹೋದದ್ದೇ ಈ ಪುಣ್ಯಾತ್ಮರ ಸಾಧನೆ.

ಕೊಪ್ಪಳ

ಇನ್ನು ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಶಾಸಕ ದೊಡ್ಡನ ಪಾಟೀಲ್‌ನ ಕ್ಷೇತ್ರ ಕುಷ್ಟಗಿಯ ಜನರಂತಹ ದುರಾದೃಷ್ಟವಂತರು ಬೇರೆ ಯಾರೂ ಇರಲಿಕ್ಕಿಲ್ಲ. ಏಕೆಂದರೆ ಇಲ್ಲಿ ನೀರು ಮಾರಾಟವಾಗುತ್ತದೆ. ದಿನವೊಂದಕ್ಕೆ 10 ಸಾವಿರ ರೂಪಾಯಿಯಷ್ಟು ನೀರು ಮಾರಾಟವಾದರೂ ಖಾಸಗಿಯವರ ಜೊತೆ ಶಾಮೀಲಾದಂತಹ ಖದೀಮರನ್ನು ಗೆಲ್ಲಿಸಿದ್ದು ಕುಷ್ಟಗಿ ಕ್ಷೇತ್ರ. ಆದರೆ ಈ ಬಾರಿ ಮಾತ್ರ ಹಿಂದಿನ ತಪ್ಪು ಮಾಡಲಾರೆವು ಎನ್ನುತ್ತಾರೆ ಕುಷ್ಟಗಿ ಜನ.

ಕುಷ್ಟಗಿಯಲ್ಲಿ ಬಹಳ ಹೇಸಿಗೆ, ಸಿಟ್ಟು, ಆಕ್ರೋಶ ಹುಟ್ಟಿಸಿದ ಪ್ರಕರಣವೆಂದರೆ ಹಿರೇಮಠನೆಂಬ ಖದೀಮ ಅಧ್ಯಕ್ಷನಾಗಿದ್ದಾಗ ನಿಡಶೇಸ ಬಳಿಯ ನೆಲದಲ್ಲಿ ಜೋಡಿಸಿದ್ದ ನೀರು ಸರಬರಾಜು ಮಾಡುವ ಪೈಪ್‌ಗಳನ್ನೇ ಎಬ್ಬಿ ಮಾರಿಬಿಟ್ಟದ್ದು. ಅಂದ ಮೇಲೆ ತಿನ್ನುವ ವಿಷಯದಲ್ಲಿ ರೊಕ್ಕ ರುಪಾಯಿ ಜೊತೆಗೆ ಪೈಪು, ಸಿಮೆಂಟು, ಕಲ್ಲು ತಿನ್ನುವ ಮಟ್ಟಕ್ಕೆ ಇಳಿದುಬಿಟ್ಟರು ಕೆಲವರು. ಇಂದಿಗೂ ಕೇಸ್‌ನ ವಿಚಾರಣೆ ನಡೆಯುತ್ತಲೇ ಇದೆ. ಇಡೀ ಕುಷ್ಟಗಿ ತುಂಬ ಕಳಪೆ ಕೆಲಸ ಮಾಡಿದ್ದೇ ಪಂಚಾಯಿತಿಯ ಸಾಧನೆ. ಕುಡಿಯೋಕೆ ನೀರಿಲ್ಲ, ತಿರುಗಾಡಕ್ಕೆ ರೋಡಿಲ್ಲ, ಮಹಿಳೆಯರ ಶೌಚಾಲಯಗಳಿಲ್ಲ. ಈ ಸಮಸ್ಯೆಗಳು ಜಿಲ್ಲೆಯಾದ್ಯಾದಂತ ಇದ್ದರೂ ಜನಪ್ರತಿನಿಧಿಗಳು ಕಣ್ಣು ತೆರೆಯಲಿಲ್ಲ.

ಅಧಿಕಾರದ ಮದದಲ್ಲಿ ಅಟ್ರಾಸಿಟಿ ಹೆಟ್ಟಿಸಿಕೊಂಡವರು, ನೆಲಗಳ್ಳರು ಹಡಬ -ದುಡ್ಡಿನಿಂದ ಮೋಜಿಗೆ ಬಿದ್ದು ಏಡ್ಸ್‌ಗೆ ಬಲಿಯಾದವರು, ತಿನ್ನೋಕೆ ಪೈಪಾದರೇನು ಪ್ಲಾಸ್ಟಿಕ್ ಆದರೇನು ಎನ್ನುವವರು, ಜನಹಿತವನ್ನೇ ಮರೆತು ಸದಾ ಅಮಲಿನಲ್ಲೇ ಇದ್ದಂತಹ ಬಹುತೇಕರು ಆಯ್ಕೆಗೊಂಡಿದ್ದರು. ಇಂತಹವರ ನಡುವೆ ಒಂದಿಷ್ಟು ಕೆಲಸ ಮಾಡುವ ಸಭ್ಯರು ಕೂಡ ಅಸಹ್ಯದಿಂದ ಮನೆಯಲ್ಲಿ ಕುಳಿತುಬಿಟ್ಟರು.

ಇನ್ನಾದರೂ ಊರು ಉದ್ಧಾರವಾಗುವ ಉದ್ದೇಶವಿದ್ದರೆ ಈ ಬಾರಿ ಏನು ಮಾಡಬೇಕು ಗೊತ್ತೆ? ಕಳೆದ ಬಾರಿ ಗೆದ್ದಂತಹ ಕಿರಾತಕರನ್ನು ಈ ಬಾರಿ ಗೆಲ್ಲಿಸಬಾರದು ಅಷ್ಟೇ.

-ವರದಿಗಾರ

ದೊರೆಗಳಿಂದ ಮುಕ್ತಿ ಎಂದು?


ಗುಲ್ಬರ್ಗಾ


ಕಲಬುರ್ಗಿ ಜಿಲ್ಲೆಯ ಸುರಪುರ ಎಲ್ಲಾ ತಾಲೂಕುಗಳಿಗಿಂತಲೂ ವಿಭಿನ್ನವಾದ ತಾಲೂಕು ಕೇಂದ್ರ. ಇಲ್ಲಿಯ ಜನ ರಾಜಕೀಯ (ಮುಕ್ತ)ವಾಗಿ ಉಸಿರಾಡತೊಡಗಿ ಕೆಲವೇ ವರ್ಷಗಳು ಮಾತ್ರ ಆಗಿವೆ. ಅದುವರೆಗೂ ಇಲ್ಲಿ ಪ್ರಜಾಪ್ರಭುತ್ವವೇ ಇರಲಿಲ್ಲ ಎಂದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ದೊರೆಗಳ ವತನದಾರಿಕೆಯಿಂದ ಮುಕ್ತವಾದರೂ ಅವರ ವಂಶಸ್ಥರ ಕಪಿಮುಷ್ಠಿಯಿಂದ ಸುರಪುರ ಪಾರಾಗಿರಲಿಲ್ಲ. ದೊರೆತನ ಹೋದರೂ..... ಅದೇನೋ ಹೋಗಲಿಲ್ಲ ಅಂತಾರಲ್ಲ, ಹಾಗೆ ಇಲ್ಲಿಯ ವಂಶಸ್ಥರ ನಡಾವಳಿಕೆಗಳಿದ್ದವು. ಎಲ್ಲವೂ ತಮ್ಮ ಮನೆಯ ಅಂಗಳದಲ್ಲೇ ತೀರ್ಮಾನವಾಗಬೇಕು ಎಂಬುದು ಅವರ ಇಂಗಿತವಾಗಿತ್ತು, ಪೊಲೀಸ್ ಠಾಣೆ, ಠಾಣಾಧಿಕಾರಿ, ಇನ್ನುಳಿದ ಕಚೇರಿಗಳೇನೆ ಇದ್ದರೂ ಅವುಗಳೆಲ್ಲ ಇವರ ಪಾದಗಳ ಕೆಳಗೆ ತೆವಳಿಕೊಂಡು ಇರಬೇಕು ಎಂಬುದು ಇವರ ಹಂಬಲ. ಅಪ್ಪಿ ತಪ್ಪಿಯೂ ಈ ದೊರೆ(?)ಗಳ ವಿರುದ್ಧ ಯಾರೂ ತಲೆ ಎತ್ತಿ ಕೂಡ ನಡೆಯುವಂತಿಲ್ಲ, ತಲೆ ಎತ್ತಿದರಾದರೆ ಅದನ್ನು ಯಾವುದರಿಂದ ಬಗ್ಗಿಸಬೇಕು? ಎಂಬ ಗತ್ತು ಗೈರತ್ತುಗಳನ್ನೆಲ್ಲ ಮೈಗೂಡಿಸಿಕೊಂಡಿದ್ದರು.

ಸಂಸತ್ತಿನ, ವಿಧಾನಸಭೆಯ, ತಾಲೂಕು ಪಂಚಾಯತಿಯ, ಪುರಸಭೆಯ ಕೊನೆಗೆ ಗ್ರಾಮ ಪಂಚಾಯತಿಯ ಚುನಾವಣೆಗಳೇನೇ ನಡೆದರೂ ಅಲ್ಲೆಲ್ಲ ರಿಗ್ಗಿಂಗ್‌ಗಳ ಸದ್ದೇ ಸದ್ದು, ಬಹಳಷ್ಟು ಪೋಲಿಂಗ್ ಬೂತ್‌ಗಳಲ್ಲಿ ಪ್ರತಿಪಕ್ಷಗಳ ಪೋಲಿಂಗ್ ಏಜೆಂಟ್ ಕೂಡ ಇರುತ್ತಿರಲಿಲ್ಲ ಎಂಬುದು ಅಂದಿನ ಪರಿಸ್ಥಿತಿಯ ಭಯಾನಕತೆಯನ್ನು ಸೂಚಿಸುತ್ತದೆ. ಹಾಗಾಗಿ ಅಂದು ಹಳ್ಳಿಯಿಂದ ದಿಲ್ಲಿಯವರೆಗೆ ದೊರೆಗಳ ಮನೆತನದವರ ದರ್ಬಾರೇ ದರ್ಬಾರು.

ರಂಗಪ್ಪನಾಯಕ ರಾಯಚೂರು ಮತಕ್ಷೇತ್ರದ ಸಂಸದನಾಗಿ ಆಯ್ಕೆಯಾಗಿದ್ದರೆ, ವೆಂಕಟಪ್ಪನಾಯಕ ವಿಧಾನಸಭೆಯ ಸದಸ್ಯ, ಅವರ ತಮ್ಮ ಮೌನೇಶನಾಯಕ ತಾಲೂಕು ಪಂಚಾಯತಿಯ ಅಧ್ಯಕ್ಷ. ಹೀಗೆ ಅಧಿಕಾರ ಇವರ ಮನೆತನದಲ್ಲಿಯೇ ಕಾಲು ಮುರಿದುಕೊಂಡು ಬೀಳುವಂತೆ ನೋಡಿಕೊಂಡಿದ್ದರು. ಅಧಿಕಾರ ಹಾಗು ಎಲ್ಲಾ ಮೂಲಗಳಿಂದ ಹಣದ ಹೊಳೆ ಹರಿದುಬರುತ್ತಿದ್ದರೆ ಕೇಳಬೇಕೆ? ಅಧಿಕಾರ ಮತ್ತು ಹಣದ ಮದ ಸೇರಿದರೆ ಏನೇನು ಅನಾಹುತಗಳಾಗಬೇಕೋ ಅವೆಲ್ಲ ಅನಾಹುತಗಳು ಜರುಗಿದವು. ಜನ ತಮ್ಮಷ್ಟಕ್ಕೆ ತಾವು ಮುಕ್ತವಾಗಿ ಉಸಿರಾಡಿಕೊಂಡು ಇರುವುದು ಅಸಾಧ್ಯದ ಮಾತಾಗಿತ್ತು.

ಈ ಬಗ್ಗೆ ಪತ್ರಿಕೆಗಳು ಒಂದು ಚಕಾರ ಶಬ್ದ ಬರೆಯಕೂಡದು ಎಂಬುದು ಅಲಿಖಿತ ನಿಯಮವೇ ಆಗಿತ್ತು. ಅಂದಂತೆ ಯಾವ ಪತ್ರಿಕೆಯ ಪತ್ರಕರ್ತನೂ ಒಂಚೂರು ಬರೆದಿರಲಿಲ್ಲ, ಆದರೆ "ಅಗ್ನಿ ಅಂಕುರ" ಎಂಬ ಪಾಕ್ಷಿಕ ಪತ್ರಿಕೆ ಮಾತ್ರ ಆಗಾಗ ದೊರೆಗಳ ಕರ್ಮಕಾಂಡ ವಿವರಿಸುತ್ತ ಜನತೆ ಎಚ್ಚರ ಗೊಳ್ಳುವಂತೆ, ಸ್ವಾತಂತ್ರ್ಯ ಪಡೆಯುವಂತೆ ಎಚ್ಚರಿಸುತ್ತಿತ್ತು. ಪ್ರಜಾಪ್ರಭುತ್ವದ ಧ್ವನಿಯಾಗಿದ್ದ ಈ ಪತ್ರಿಕೆಯ ಕತ್ತು ಹಿಚುಕಲು ಆಗ ದೊರೆಗಳು ನಡೆಸಿದ ಯತ್ನಗಳನ್ನು ಇಲ್ಲಿಯ ಜನ ಇನ್ನೂ ಮರೆತಿಲ್ಲ.


ವೆಂಕಟಪ್ಪನಾಯಕ


ರಾಜು ಗೌಡ (ನರಸಿಂಹನಾಯ್ಕ)

ಯಾವಾಗ ಕೊಡೆಕಲ್ಲಿನ ನರಸಿಂಹನಾಯಕ (ರಾಜೂಗೌಡ) ಇವರುಗಳಿಗೆ ಸೆಡ್ಡು ಹೊಡೆದು ನಿಂತನೋ, ಆವಾಗಲೇ ದೊರೆಗಳ ಒಂದೊಂದೇ ಮಿಣಿಗಳು ಹರಿಯಲು ಆರಂಭಿಸಿದವು. ಅಧಿಕಾರ ತಮ್ಮ ಕೈ ತಪ್ಪಿ ಹೋಗುತ್ತದೆ ಎಂದು ಅರಿತುಕೊಂಡ ಈ ದೊರೆಗಳು ತಮ್ಮ ಎಂದಿನ ಶೀಲಿಯಲ್ಲೇ ಮತ್ತಷ್ಟು ದಾಂಧಲೆಗಳನ್ನು ನಡೆಸಿದರು. ಸ್ವತಃ ವಿಧಾನಸಭೆಯ ಕ್ಯಾಂಡಿಡೇಟ್ ಆಗಿದ್ದ ರಾಜೂಗೌಡನ ಮೇಲೆಯೇ ಹಲ್ಲೆ ನಡೆಸುವಷ್ಟರ ಮಟ್ಟಿಗೆ ಇವರು ಆಕ್ರೋಶಗೊಂಡಿದ್ದರು. ಇದನ್ನೆಲ್ಲ ನೋಡಿ- ಅನುಭವಿಸಿ ಹೈರಾಣಾಗಿದ್ದ ಜನತೆ ಈ ಒಂದು ಅವಕಾಶಕ್ಕೆ ಕಾದು ನಿಂತವರಂತೆ ರಾಜೂಗೌಡನನ್ನು ಗೆಲ್ಲಿಸುವ ಮೂಲಕ ತಮ್ಮ ಸ್ವಾತಂತ್ರ್ಯವನ್ನು ಪಡೆದುಕೊಂಡರು. ಕರ್ನಾಟಕದಲ್ಲಿ ಯಾರೂ ಆಯ್ಕೆ ಮಾಡಿ ಕಳಿಸದ ಕನ್ನಡನಾಡು ಪಕ್ಷಕ್ಕೆ ತಮ್ಮ ಮತ ನೀಡಿ ಗೆಲ್ಲಿಸಿದ್ದರು.

ಈಗಿನ ಪುರಸಭೆಯ ಚುನಾವಣೆಯ ಸಂದರ್ಭದಲ್ಲಿ ಇದನ್ನೆಲ್ಲ ಹೇಳುತ್ತಿರುವುದಕ್ಕೆ ಕಾರಣ ಇಷ್ಟು ದಿನಗಳವರೆಗೂ ಪುರಸಭೆ ಮತ್ತದೇ ರಾಜರುಗಳ ಕೈಯಲ್ಲಿಯೇ ಮುಲುಗುಡುತ್ತಿತ್ತು. ಕಿಶನ್‌ರಾವ್ ಕುಲ್ಕರ್ಣಿ, ಸತ್ಯಂಪೇಟೆಯ ಯಂಕಮ್ಮ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರೂ ದರಬಾರೆಲ್ಲ ಆ ರಾಜರುಗಳದ್ದೇ ಆಗಿತ್ತು. ಹೀಗಾಗಿ ಪುರಸಭೆಯ ಬಹುತೇಕ ಕಾಮಗಾರಿಗಳ ಹಣೆಬರಹ ಹೇಗಿರಬಹುದು ಎಂದು ವಿವರಿಸಿ ಹೇಳುವ ಅಗತ್ಯವಿಲ್ಲ.

27 ವಾರ್ಡುಗಳನ್ನು ಹೊಂದಿದ ಪುರಸಭೆಯನ್ನು ಈ ಸಲ ಹೇಗಾದರೂ ತಮ್ಮ ಹಿಡಿತದಲ್ಲಿಯೇ ಇಟ್ಟುಕೊಳ್ಳಬೇಕು ಎಂಬ ಹವಣಿಕೆಯಲ್ಲಿರುವ ರಾಜರುಗಳು ತಮ್ಮ ಗದ್ದುಗೆ ಬಿಟ್ಟು ಎದ್ದು ಖಲೀಲ ಅಹ್ಮದ ದಖನಿ, ನಿಂಗಣ್ಣ ಚಿಂಚೋಡಿ ಮುಂತಾದವರ ಮನೆಗೆ ಹೋಗಿ ಪಕ್ಷಕ್ಕೆ ಕರೆತಂದಿದ್ದಾರೆ. ಆದರೂ ಪುರಸಭೆಗೆ ಕಾಂಗ್ರೆಸ್ ಪರವಾಗಿ ನಿಲ್ಲಬಲ್ಲ ಕ್ಯಾಂಡಿಡೇಟು ಗಳು ಸಿಗುವುದು ಕಷ್ಟವಾಗುತ್ತಿದೆ.

ರಾಜೂಗೌಡ ಎಂ.ಎಲ್.ಎ. ಆಗಿ ಗೆದ್ದುಬಂದಿದ್ದರೂ ಇದುವರೆಗೂ ಒಂಚೂರು ಗರ್ವದಿಂದ ವರ್ತಿಸಿಲ್ಲ. ಮೇಲಾಗಿ ಶ್ರೀಸಾಮಾನ್ಯನ ಮನೆ-ಮನದ ಬಾಗಿಲಿಗೂ ಮುಟ್ಟಬೇಕೆಂಬ ಹಂಬಲ ಉಳ್ಳವನಾಗಿದ್ದಾನೆ. ಪ್ರಜಾಪ್ರಭುತ್ವದ ನಡವಳಿಕೆ ರೂಢಿಸಿಕೊಂಡಿರುವ ರಾಜೂಗೌಡ ಕೂಡ ನಿರೀಕ್ಷಿತ ಕೆಲಸ ಮಾಡಿಲ್ಲ, ಆದರೂ ಜನರಿಗೆ ಅದೊಂದು ದೊಡ್ಡ ಪ್ರಮಾದವಾಗಿ ಕಾಣುತ್ತಿಲ್ಲ. ಬಿ.ಜೆ.ಪಿಯ ವೇಣುಗೋಪಾಲ ಜೇವರ್ಗಿ ಜೆ.ಡಿ.ಎಸ್. ಅಭ್ಯರ್ಥಿಗಳಿಗೆ ತೊಡರುಗಾಲು ಹಾಕ ಬಹುದು.

ಆದರೂ ಈ ಸಲ ರಾಜೂಗೌಡನ ನೇತೃತ್ವದ ಜೆ.ಡಿ.ಎಸ್. ಪುರಸಭೆಯಲ್ಲಿ ವಿಜಯ ಗಳಿಸುವ ಸಾಧ್ಯತೆಗಳೇ ಅಧಿಕವಾಗಿವೆ.

-ವರದಿಗಾರ

ಅಶೋಕ್ ಬಂಟರಿಂದ ಮತ್ತೊಂದು ಲ್ಯಾಂಡ್ ಗ್ರ್ಯಾಬಿಂಗ್


ಉತ್ತರಹಳ್ಳಿ ಬಗರ್‌ಹುಕುಂ ಭೂ ದರೋಡೆಯ ಬಗ್ಗೆ ಪತ್ರಿಕೆ ದಾಖಲೆ ಸಮೇತ ಸರಣಿಗಟ್ಟಲೇ ವರದಿ ಪ್ರಕಟಿಸಿದಾಗಲೂ ಸರ್ಕಾರ ಹಾಳಾಗಲಿ, ವಿರೋಧಿ ಕಾಂಗ್ರೆಸ್ ಕೂಡ 'ಕ್ಯಾರೇ' ಅನ್ನಲಿಲ್ಲ. ಮೂರು ಬಿಟ್ಟ ಸರ್ಕಾರ ಮತ್ತು ದಾರಿ ತಪ್ಪಿದ ವಿರೋಧ ಪಕ್ಷ ಸೇರಿ ಕೊಂಡು ಒಂದೇ ತಟ್ಟೆಯಲ್ಲಿ ಉಣ್ಣಲು ಕುಳಿತಿರುವಾಗ ಅದೆಂಥದ್ದೇ ದಾಖಲೆ ಸಹಿತದ ಕರ್ಮಕಾಂಡಗಳೂ ತಬ್ಬಲಿಯಾಗಿ ಬಿಡುತ್ತವೆ.

ಇದು ಆರೋಗ್ಯ ಮಂತ್ರಿ ಅಶೋಕ್ ಬಂಟರ ನಿರ್ಲಜ್ಜ ಭೂಗಳ್ಳತನಕ್ಕೆ ಮತ್ತೊಂದು ಸೇರ್ಪಡೆಯಷ್ಟೇ. ಪತ್ರಿಕೆ ಬಯಲಿಗೆಳೆದ ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆಯ ಅಕ್ರಮಗಳ ಪೈಕಿ ಈ 36 ಗುಂಟೆ ಏನೇನೂ ಅಲ್ಲದಿರಬಹುದು. ಆದರೆ ಸರ್ಕಾರಿ ಭೂಮಿ ಒಂದೇ ಅಡಿಯಾದರೂ ಅದಕ್ಕೊಂದು ಲೆಕ್ಕ ಇದ್ದೇ ಇರುತ್ತದೆ. ಅದು ಜನರ ಸೊತ್ತು. ಬಗರ್‌ಹುಕುಂ ಭೂ ಮಂಜೂರಾತಿಗೂ ಒಂದು ಕಾಯ್ದೆ ಕಟ್ಟಳೆಯಿದೆ. ಹಾಗಿದ್ದೂ ಉತ್ತರಹಳ್ಳಿ ಹೋಬಳಿಯ ಕೆ. ಚೂಡಹಳ್ಳಿಯ 36 ಗುಂಟೆ ಸರ್ಕಾರಿ ಜಮೀನನ್ನು ಬಿಜೆಪಿಯ ಲೋಕಲ್ ಪುಢಾರಿ ಮರಿಯಪ್ಪ ಎಂಬಾತನಿಗೆ ಅಶೋಕ್ ಯಾವ ಕಾಯ್ದೆಯಡಿ, ಯಾವ ಪುರುಷಾರ್ಥಕ್ಕಾಗಿ ಮಂಜೂರು ಮಾಡಿದ್ದಾರೆಂಬುದು ಇವತ್ತಿಗೂ ಚಿದಂಬರ ರಹಸ್ಯವಾಗಿಯೇ ಉಳಿದಿದೆ.

ಕನಕಪುರ ರಸ್ತೆ ಕಗ್ಗಲಿಪುರದ ಪಕ್ಕದ್ದೇ ಕೆರೆ ಚೂಡಳ್ಳಿ

ಇಲ್ಲಿಗೆ ಎರಡು ವಾರದ ಹಿಂದಷ್ಟೇ ಜಿಲ್ಲಾಧಿಕಾರಿಗಳು ನಡೆಸಿದ ಸರ್ಕಾರಿ ಭೂಮಿಯ ಹರಾಜಿನಲ್ಲಿ ಗುಂಟೆಯೊಂದಕ್ಕೆ ಬಿಲ್ಡರುಗಳು ನಾಲ್ಕು ಲಕ್ಷ ರೂಪಾಯಿ ಬಿಡ್ ಕೂಗಿದ್ದಾರೆ. ಅಂದರೆ 36 ಗುಂಟೆ ಸರ್ಕಾರಿ ಭೂಮಿಯ ಮಾರುಕಟ್ಟೆ ರೇಟೇ ಒಂದು ಕೋಟಿ ನಲವತ್ತು ನಾಲ್ಕು ಲಕ್ಷ ರೂಪಾಯಿಗಳಾದಂತಾಯ್ತು. ಹೀಗೆ ಕೆ. ಚೂಡಹಳ್ಳಿಯ ಸ.ನಂ. 83 ರಲ್ಲಿದ್ದ ಒಂದೆಕರೆ ಇಪ್ಪತ್ತು ಗುಂಟೆ ಸರ್ಕಾರಿ ಭೂಮಿಯನ್ನು ನುಂಗಲು ಇನ್ನಿಲ್ಲದಂತೆ ಮಸಲತ್ತು ಮಾಡಿಕೊಂಡೇ ಬಂದ ಲೋಕಲ್ ಬಿಜೆಪಿ ಪುಢಾರಿ ಮರಿಯಪ್ಪ ಹೇಳಿಕೇಳಿ ಆರೋಗ್ಯ ಮಂತ್ರಿ ಆರ್. ಅಶೋಕ್‌ನ ಪಕ್ಕಾ ಛೇಲಾ ಉತ್ತರ ವೆಂಕ್ಯನ ಪಡ್ಡಕ.


ಈ ಉತ್ತರಿ ವೆಂಕ್ಯ ಉರ್ಫ್ ವೆಂಕಟಪ್ಪ ಹಾಲಿ ಉತ್ತರಹಳ್ಳಿ ಮಂಡಲ ಬಿಜೆಪಿಯ ಪ್ರಧಾನ ಕಾರ್ಯದರ್ಶಿ!



ವೆಂಕ್ಯನ ಪತ್ನಿಯ ಅಕ್ಕ ಜಾನಕಮ್ಮನೇ ಕೆ. ಚೂಡಳ್ಳಿ ಮರಿಯಪ್ಪನ ಪತ್ನಿ. ಹಾಗಂತ ಮರಿಯಪ್ಪ ನಿರ್ಗತಿಕ ರೈತನಲ್ಲ. ಈತನಿಗಾಗಲೇ ಕೆ. ಚೂಡಳ್ಳಿ ಸ.ನಂ. 61:4 ರಲ್ಲಿ 1.16 ಎಕರೆ, ಸ.ನಂ. 40:3 ರಲ್ಲಿ 11 ಗುಂಟೆ, ಸ.ನಂ. 20:1 ರಲ್ಲಿ ಮತ್ತೆ 10 ಗುಂಟೆ, ಸ.ನಂ. 84:6 ರಲ್ಲಿ ಇನ್ನೂ 28 ಗುಂಟೆ, ಜೊತೆಗೆ ಸ.ನಂ. 4 ರಲ್ಲಿ ಇನ್ನೊಂದೆಕರೆ ಹಾಗೂ ಸ.ನಂ. 87 ಮತ್ತು 86 ರಲ್ಲಿ ಮತ್ತೆ ಮೂರೆಕರೆಗೂ ಅಧಿಕ ಪಿತ್ರಾರ್ಜಿತ ಆಸ್ತಿಯಿದೆ. ಬಗರ್‌ಹುಕುಂ ಮಂಜೂರಾತಿ ಕಾಯ್ದೆಯಂತೆ ನಾಲ್ಕೆಕರೆ ಮೂವತ್ತೆಂಟು ಗುಂಟೆ ಕನಿಷ್ಠ ಹಿಡುವಳಿಯಿರುವ ಯಾರಿಗೂ ಸರ್ಕಾರಿ ಜಮೀನು ಮಂಜೂರು ಮಾಡುವಂತಿಲ್ಲ.


ಇಷ್ಟೆಲ್ಲ ಭೂಮಿಯಿದ್ದೂ ಕೆ. ಚೂಡಳ್ಳಿಯ ಸ.ನಂ. 83 ರಲ್ಲಿದ್ದ ಒಂದೆಕರೆ ಇಪ್ಪತ್ತು ಗುಂಟೆಯನ್ನು ತನಗೆ ಮಂಜೂರು ಮಾಡುವಂತೆ 2000 ನೇ ಸಾಲಿನಲ್ಲಿ ಮರಿಯಪ್ಪ ಅರ್ಜಿ ಹಾಕುತ್ತಾನೆ. ವಿಚಿತ್ರವೆಂದರೆ ಬೆಂಗಳೂರು ದಕ್ಷಿಣ ತಹಶೀಲ್ದಾರ್ ಕಚೇರಿಯಲ್ಲಿ ಇದನ್ನು 1998 ರ ಡಿಸೆಂಬರ್ 28 ರಂದು ಬಹುಹಿಂದೆಯೇ ಸ್ವೀಕರಿಸಿದಂತೆ ಹಳೇ ದಿನಾಂಕ ನಮೂದಿಸಲಾಗುತ್ತದೆ. ಅದಕ್ಕೆ ತಕ್ಕಂತೆ ಲಂಚತಿಂದ ನೆಲಗುಳಿ ವೃತ್ತದ ರೆವಿನ್ಯೂ ಇನ್ಸ್‌ಪೆಕ್ಟರ್ ಚೌಡರೆಡ್ಡಿ 1976 ರಿಂದಲೂ ಈತ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡಿದ್ದಾನೆಂದು ಖೊಟ್ಟಿ ರಿಪೋರ್ಟೊಂದನ್ನು 1999 ರಲ್ಲಿ ಬೆಂಗಳೂರು ದಕ್ಷಿಣ ತಹಶೀಲ್ದಾರರಿಗೆ ಸಲ್ಲಿಸುತ್ತಾನೆ. ತನ್ನ ವರದಿಯಲ್ಲಿ ಮರಿಯಪ್ಪನಿಗಿರುವ ಬೇಕಾಬಿಟ್ಟಿ ಪಿತ್ರಾರ್ಜಿತ ಆಸ್ತಿಯನ್ನೇ ಮುಚ್ಚಿಡುತ್ತಾನೆ. ಏಕೆಂದರೆ ಆ ಹೊತ್ತಿಗಾಗಲೇ ಮರಿಯಪ್ಪ ಪಂಚಾಯ್ತಿ ಮೆಂಬರ್ ಆಗಿ ಗೆದ್ದುಬಿಟ್ಟಿದ್ದ. ಜೊತೆಗೆ ಅಶೋಕ್ ಕುಮ್ಮಕ್ಕೂ ಇತ್ತಲ್ಲ....

ಆಗ ಉತ್ತರಹಳ್ಳಿ ಶಾಸಕರಾಗಿದ್ದ ಶ್ರೀನಿವಾಸ್ ಇದಕ್ಕೆ ಬಿಲ್‌ಕುಲ್ ಒಪ್ಪದೇ ಮರಿಯಪ್ಪನ ಅರ್ಜಿಯನ್ನೇ ತಿರಸ್ಕರಿಸುತ್ತಾರೆ. ಏಕೆಂದರೆ ಇದೇ ಎಮ್ಮೆಲ್ಲೇ ಶ್ರೀನಿವಾಸ್‌ರನ್ನು ಮುಂದಿಟ್ಟುಕೊಂಡು ಆ ಹೊತ್ತಿಗಾಗಲೇ ಮರಿಯಪ್ಪ ಇದೇ ಕೆ. ಚೂಡಹಳ್ಳಿಯಲ್ಲಿ 2.25 ಎಕರೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಿಸಿಕೊಂಡಾಗಿತ್ತು. ಮತ್ತೆ ಲ್ಯಾಂಡ್ ಹೊಡೆಯಲು ಎರಡನೇ ಬಾರಿ ಅರ್ಜಿ ಹಾಕಿದ ಮರಿಯಪ್ಪನನ್ನು ಶ್ರೀನಿವಾಸ್ ಉಗಿದು ಓಡಿಸಿದ್ದರು. ಆದರೆ ಅಶೋಕ್ ಗೆದ್ದು ಅವರೇ ದರಖಾಸ್ತು ಸಮಿತಿಯ ಅಧ್ಯಕ್ಷರಾಗುತ್ತಿದ್ದಂತೆ ಪಡ್ಡಕ ಉತ್ತರಿ ವೆಂಕ್ಯನನ್ನು ಛೂಬಿಟ್ಟು ಅಶೋಕ್ ತಲೆತಿಕ್ಕಿದ ಮರಿಯಪ್ಪನಿಗೆ ಯಾವುದೇ ಕಾರಣಕ್ಕೂ ಜಮೀನು ಮಂಜೂರು ಮಾಡದಂತೆ ಅದೇ ಗ್ರಾಮದ ಶ್ರೀನಿವಾಸಮೂರ್ತಿ ಸರ್ಕಾರಕ್ಕೆ ದೂರು ಕೊಡುತ್ತಾರೆ.



ಭೂಗಳ್ಳ ಮರಿಯಪ್ಪ

ಕೇವಲ ದೂರಷ್ಟೇ ಅಲ್ಲ, ಈಗಾಗಲೇ ಆತನಿಗೆ ಮಂಜೂರಾಗಿರುವ 2.25 ಎಕರೆ ಸರ್ಕಾರಿ ಲ್ಯಾಂಡು, ಆತ ಅದೇ ಕೆರೆ ಚೂಡಳ್ಳಿಯಲ್ಲಿ ಹೊಂದಿರುವ ಬೇಕಾಬಿಟ್ಟಿ ಜಮೀನಿನ ಪಹಣಿಗಳು ಎಲ್ಲವನ್ನೂ ಲಗತ್ತಿಸಿ ಬೆಂಗಳೂರು ದಕ್ಷಿಣ ತಹಶೀಲ್ದಾರ್ ಗಮನಕ್ಕೆ ತರುತ್ತಾರೆ. ಆಗ ಅಸಿಸ್ಟೆಂಟ್ ಕಮೀಷನರ್ ಆಗಿದ್ದ ಚಿಕ್ಕ ಮುನಿಯಪ್ಪ ಕಾನೂನುರೀತ್ಯ ಭೂ ಮಂಜೂರಾತಿ ಸಾಧ್ಯವೇ ಇಲ್ಲ ಎಂದು ಅದೆಷ್ಟೇ ಹಠ ಹಿಡಿದರೂ ಅಂತಿಮವಾಗಿ 2004 ರ ಜನವರಿ 5 ರಂದು ಕೆರೆ ಚೂಡಳ್ಳಿ ಸ.ನಂ. 83 ರಲ್ಲಿ 36 ಗುಂಟೆ ಸರ್ಕಾರಿ ಭೂಮಿಯನ್ನು ಅಶೋಕ್ ಮರಿಯಪ್ಪನಿಗೆ ಮಂಜೂರು ಮಾಡಿಬಿಡುತ್ತಾರೆ!



ಕಬಳಿಕೆಯಾದ ಚೂಡಳ್ಳಿ ಜಮೀನು

ಅಲ್ಲಿಗೆ ಒಂದು ಕೋಟಿ ನಲವತ್ತು ನಾಲ್ಕು ಲಕ್ಷ ರೂಪಾಯಿ ಮೌಲ್ಯದ ಸರ್ಕಾರಿ ಸೊತ್ತು ಬಿಜೆಪಿ ಕ್ರಿಮಿ ಉತ್ತರಿ ವೆಂಕ್ಯನ ಪಡ್ಡನ ಬಾಯಿಗೆ ಬಿದ್ದಂತಾಯ್ತು!

ಈ ಬಗ್ಗೆ ಕೆ. ಚೌಡಳ್ಳಿಯ ಶ್ರೀನಿವಾಸಮೂರ್ತಿ ಮತ್ತು ಇತರೇ ಗ್ರಾಮಸ್ಥರು ಈಗಾಗಲೇ ಜಿಲ್ಲಾಧಿಕಾರಿಗೆ ದೂರು ಕೊಟ್ಟಿದ್ದಾರೆ. ಕಂದಾಯ ಸಚಿವ ಜಗದೀಶ್ ಶೆಟ್ಟರ್‌ಗೂ ಮನವಿ ಮಾಡಿದ್ದಾರೆ. ಉತ್ತರಿ ವೆಂಕ್ಯನ ಪಡ್ಡಕ ಮರಿಯಪ್ಪ ಎಂಥಾ ಭೂಕಂಟಕನೆಂದರೆ ಈ ಹೊತ್ತಿಗಾಗಲೇ ತಾನು ಬಗರ್‌ಹುಕುಂ ಮಂಜೂರಾತಿಯಲ್ಲಿ ಗಿಟ್ಟಿಸಿದ ಭೂಮಿಯನ್ನು ಆಂಧ್ರದ ಬಿಲ್ಡರ್ ಒಬ್ಬನಿಗೆ ಮಾರಿಕೊಂಡಾಗಿದೆ. ಕಾಯ್ದೆ ಪ್ರಕಾರ 15 ವರ್ಷಗಳ ಕಾಲ ಬಗರ್‌ಹುಕುಂ ಜಮೀನನ್ನು ಮಾರುವುದೇ ಅಪರಾಧ. ಇದು ತಹಶೀಲ್ದಾರ್ ಸತೀಶ್ ಬಾಬು, ಅಸಿಸ್ಟೆಂಟ್ ಕಮೀಷನರ್ ವೆಂಕಟೇಶ್, ವಿಶೇಷ ಜಿಲ್ಲಾಧಿಕಾರಿ ರಾಮೇಗೌಡ ಎಲ್ಲರಿಗೂ ಗೊತ್ತಿದೆ. ಗೊತ್ತಿದ್ದೂ ಯಾರೂ ಸರ್ಕಾರಿ ಸೊತ್ತಿನ ರಕ್ಷಣೆಗೂ ಮುಂದಾಗುತ್ತಿಲ್ಲ.

ಏಕೆಂದರೆ ಉತ್ತರಿ ವೆಂಕ್ಯ ಮತ್ತು ಮರಿಯಪ್ಪ ಇಬ್ಬರೂ ಆರೋಗ್ಯ ಮಂತ್ರಿ ಅಶೋಕ್‌ರ ಕಟ್ಟಾ ಬಂಟರು. ಅಷ್ಟಕ್ಕೂ ಮರಿಯಪ್ಪ ನಿರ್ಗತಿಕನಲ್ಲ, ಆತ ಗಿಟ್ಟಿಸಿದ 36 ಗುಂಟೆ ಭೂಮಿಯನ್ನು ಯಾವತ್ತಿಗೂ ಬಗರ್‌ಹುಕುಂ ಸಾಗುವಳಿ ಮಾಡಿದವನೇ ಅಲ್ಲ. ಹಾಗಾದರೆ ಬಗರ್‌ಹುಕುಂ ಭೂಮಿ ಗಿಟ್ಟಿಸಲು ಕೇವಲ ಅಶೋಕ್ ಛೇಲಾಗಳಾಗಿದ್ದರೆ ಮಾತ್ರವೇ ಸಾಕೆ?

ದೇಶದ ಯಾವುದೇ ಕಾಯ್ದೆ ಕಾನೂನು ಅಶೋಕ್ ಬಂಟರಿಗೆ ಅನ್ವಯವಾಗುವುದಿಲ್ಲವೇ?

ಹೀಗಿದ್ದೂ ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆಯ ಬಗ್ಗೆ ವಿರೋಧಿ ಕಾಂಗ್ರೆಸ್, ಎ.ಟಿ. ರಾಮಸ್ವಾಮಿ ಸಮಿತಿ ಮತ್ತು ಲೋಕಾಯುಕ್ತ ಇನ್ನೂ ನಿದ್ದೆ ನಟಿಸುತ್ತಿರುವುದೇಕೆ?

ಇಲ್ಲಿ ಕಳ್ಳರ್‍ಯಾರು ಪೊಲೀಸರ್‍ಯಾರು? ಅಥವಾ ಭೂಕಬಳಿಕೆಯಲ್ಲಿ ಎಲ್ಲರೂ ಒಂದೇ ತಾಯಿ ಮಕ್ಕಳೇ?

-ರಾ.ಸೋಮನಾಥ್


ಕಟ್ಟಾ ಮಗನ ಮದುವೇಲಿ ಉಂಡವನೇ ನೆಲಗಳ್ಳ!

ಇದು ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಮಗ ಕಟ್ಟಾ ಜಗದೀಶ ಮತ್ತು ಬಳ್ಳಾರಿಯ ಮಂಡ್ಲೂರ್ ದಿವಾಕರ್ ಬಾಬು ಮಗಳು ಸೌಮ್ಯರ ಮದುವೆಯ ಫೋಟೋ!

ಗಮನವಿಟ್ಟು ನೋಡಿ. ವಧುವಿನ ಕತ್ತಿನ ವಜ್ರದ ನೆಕ್ಲೇಸ್ ಇದೆಯಲ್ಲ; ಅದೊಂದರಲ್ಲೇ ಐನೂರಕ್ಕೂ ಹೆಚ್ಚು ವಜ್ರಗಳಿವೆ. ಅದರ ಬೆಲೆ ಎಷ್ಟು ಗೊತ್ತೆ?

ಒಂದೂವರೆ ಕೋಟಿ!

ಇರಲಿ, ಈ ನೆಕ್ಲೇಸ್‌ಗಿಂತಲೂ ಮಿರಿಮಿರಿ ಮಿಂಚುವುದು ತಲೆಗೆ ಸಿಕ್ಕಿಸಿದ ಬೈತಲೆ ಬಟ್ಟು. ಅದೇ ಐವತ್ತು ಲಕ್ಷದ್ದು. ಹಾಗೇ ಎರಡೂ ತೋಳು ಬಂದಿಯ ವಂಕಿಯ ಬೆಲೆಯಿದೆಯಲ್ಲ; ಅದು ಒಂದೊಂದಕ್ಕೆ ಕಮ್ಮಿಯೆಂದರೂ ಹದಿನೈದು ಲಕ್ಷದ್ದಾಗುತ್ತದೆ. ಕಿವಿಗಳಿಗೆ ಓಲೆ ಮತ್ತು ಜುಮಕಿಗೆಂದು ಕಿಂಬರ್ಲಿ ವಜ್ರ. ಇನ್ನು ಕತ್ತಿನ ನೆಕ್ಲೇಸ್‌ನ ಜೊತೆಗಿರುವ ಚಿನ್ನದ ಕಾಸಿನ ಸರ, ಅದರ ಮೇಲೊಂದು ಕಂಠೀಹಾರ ಜೊತೆಗೊಂದು ನವರತ್ನ ಹಾರ, ನಡುನಡುವೆ ಎಳೇ ಸರ ಮತ್ತು ಡಾಬು ಎಲ್ಲ ಸೇರಿಬಿಟ್ಟರೆ ವಧುವಿಗೆ ತೊಡಿಸಿದ ಒಡವೆಯೇ ಐದೂವರೆ ಕೋಟಿಯ ನಿಧಿಯಾಗುತ್ತದೆ. ಪೌರಾಣಿಕ ನಾಟಕದ ಪಾತ್ರಧಾರಿಗಳೂ ತೊಡಲಾಗದಷ್ಟು ವಜ್ರಾಭರಣಗಳನ್ನು ಕಟ್ಟಾ ಸೊಸೆ ತೊಡುತ್ತಾರೆಂದರೆ; ಕರ್ನಾಟಕದಲ್ಲಿ ಬರಗಾಲವಿದೆ ಎಂದರೆ ಯಾರು ನಂಬಬೇಕು?



ಕಟ್ಟಾ ದಂಪತಿಗಳು



ಇದಿಷ್ಟು ವಧು-ವರರ ಆಭರಣ ವಾರ್ತೆಯಾದರೆ ಆರತಕ್ಷತೆ ಇನ್ನೂ ಭಯಂಕರವಾಗಿತ್ತು. ಅಡುಗೆಯ ಕಂಟ್ರಾಕ್ಟರ್‌ನ ಅಧಿಕೃತ ಹೇಳಿಕೆಯ ಪ್ರಕಾರ ಆವತ್ತಿಗೆಂದೇ ಆರುನೂರು ಕುರಿಗಳನ್ನು ಕಡಿಯಲಾಗಿತ್ತು. ಬಲಿಯಾದ ಕೋಳಿಗಳ ಸಂಖ್ಯೆ ಇಪ್ಪತ್ತು ಸಾವಿರವನ್ನು ದಾಟಿತ್ತು! ರಾಕ್ಷಸಗಾತ್ರದ ಕೊಪ್ಪರಿಗೆಗಳಲ್ಲಿ ಬೇಯಿಸಿದ ಬಿರಿಯಾನಿ ಬೆಟ್ಟವನ್ನು ನೋಡುತ್ತಿದ್ದರೆ ಹೊಟ್ಟೆಗಿಲ್ಲದೇ ಆತ್ಮಹತ್ಯೆ ಮಾಡಿಕೊಂಡ ರೈತ ಕನಿಷ್ಠ ಕಟ್ಟಾ ಮಗನ ಮದುವೆ ತನಕವಾದರೂ ಕಾಯಬಾರದಿತ್ತೆ? ಎನ್ನಿಸುತ್ತಿತ್ತು.


ಹಾಗಂತ ಮದುವೆಗೆ ಯಾರೆಂದರೆ ಯಾರೂ ಬರುವಂತಿರಲಿಲ್ಲ. ಕಾರ್ಡಿದ್ದವರಿಗಷ್ಟೇ ಪ್ರವೇಶ. ಆಂಧ್ರದ ಚಿತ್ತೂರಿನಿಂದಲೇ ಇಪ್ಪತ್ತೆಂಟು ಬಸ್ಸು ತುಂಬ ನಾಯ್ಡು ಕುಲತಿಲಕರು ಬಿಜಯಂಗೈದಿದ್ದರು. ಮಿಕ್ಕಂತೆ ವಿಜೃಂಭಿಸಿದ್ದೆಲ್ಲ ಲ್ಯಾಂಡ್ ಗ್ರ್ಯಾಬರ್‌ಗಳು ಮತ್ತು ಲ್ಯಾಂಡ್ ಬ್ರೋಕರ್‌ಗಳೇ. ಖತರ್‌ನಾಕ್ ಭೂಕಂಟಕ ರೆಡ್ಡಿ ವೀರಣ್ಣ, ಪ್ರಳಯಾಂತಕ ಕುಪೇಂದ್ರ ರೆಡ್ಡಿ, ಭೂಗಳ್ಳ ಜೈರಾಂರೆಡ್ಡಿ, ಕೆಐಎಡಿಬಿಯ ಏಜೆಂಟ್ ಪಿಚ್ಚಿರೆಡ್ಡಿ, ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯ ಮಗ ಜಗನ್‌ಮೋಹನ್ ರೆಡ್ಡಿ; ಹೀಗೆ ಒಂದು ಹಿಂಡು ಲ್ಯಾಂಡ್ ಮಾಫಿಯಾ ಮದುವೆ ತುಂಬ ಠಳಾಯಿಸುತ್ತಿತ್ತು.

ಇಡೀ ಮದುವೆಯ ಸಾರಥ್ಯ ವಹಿಸಿದ್ದು ಆಂಧ್ರದ ಯಮದೊಂಗ ವೆಂಕಯ್ಯನಾಯ್ಡು!

ಸಾಕ್ಷಾತ್ ಮಾಯಾಬಜಾರ್ ಸಿನಿಮಾದ ಘಟೋದ್ಗಜರಂತೆ ಮಿಂಚಿದ್ದು ಆಂಧ್ರದ ಮತ್ತೊಂದು ತೇಜರಾಜ್ ಗುಲೇಚ, ಎಂಬೆಸ್ಸೀ ಬಿಲ್ಡರ್ಸ್ ಖದೀಮ ಜೀತು ವೀರ್ವಾನಿ, ಸುಶೀಲ್ ಮಂತ್ರಿ, ಪೂರ್ವಂಕರ ಗುಟಖಾ ಖದೀಮರಾದ ಮಿಥಿಲೇಶ್ ಗರ್ಗ್ ಮತ್ತು ದೇವಿದಾಸ್ ಗರ್ಗ್, ಹುಟ್ಟಾ ಲ್ಯಾಂಡ್ ಗ್ರ್ಯಾಬರ್ ದಯಾನಂದ್ ಪೈ, ಎಚ್‌ಎಂ ಕನ್ಸ್‌ಟ್ರಕ್ಷನ್‌ನ ಶಿವಾನಿ ಹೀಗೆ ಯಾರೆಲ್ಲ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನೇ ಮುಂದಿಟ್ಟುಕೊಂಡು ಬಡರೈತರ ಭೂಮಿ ಕಸಿಯಲು ಅರ್ಜಿ ಹಾಕಿಕೊಂಡಿದ್ದಾರೋ ಅವರೆಲ್ಲರೂ ಕಟ್ಟಾ ಮಗನ ಮದುವೆಯಲ್ಲಿದ್ದರು. ಮತ್ತು ಶಕ್ತ್ಯಾನುಸಾರ ಕಾಣಿಕೆ ಕೊಟ್ಟರು. ಈ ಪೈಕಿ ಕಶ್ಯಪ್ ಎಂಬ ಬಿಲ್ಡರ್ ಒಬ್ಬನೇ ಮರ್ಸಿಡಸ್ ಕಾರೊಂದನ್ನು ಗಿಫ್ಟಾಗಿ ಕೊಟ್ಟಿದ್ದಾನೆ. ನಂದಗುಡಿ ಎಸ್‌ಇಝಡ್‌ನ ಮೂಲ ಪುರುಷ ನಿಖಿಲ್ ಗಾಂಧಿ ಆಸ್ಟ್ರೇಲಿಯಾ ದಿಂದ ತರಿಸಿದ ದುಬಾರಿಯ ಡೈಮಂಡ್ ರಿಂಗ್ ಪ್ರೆಸೆಂಟ್ ಮಾಡಿದ್ದಾನಂತೆ.

ಮದುವೆಯ ವಿಕಟವೆಂದರೆ ಬಂದವರು ತಿನ್ನದೇ ಬಿಟ್ಟಿದ್ದ ಎಂಜಲ ರಾಶಿಯೇ ಅರ್ಧ ಚಾಮುಂಡಿ ಬೆಟ್ಟದಷ್ಟಿತ್ತು. ತಟ್ಟೆಯ ತುಂಬ ಬಿರಿಯಾನಿ ಹಾಕಿಸಿಕೊಂಡು ಜೀರ್ಣಿಸಿಕೊಳ್ಳಲಾಗದೇ. ಒಂದೋ ಎರಡೋ ಚಮಚವನ್ನಷ್ಟೇ ಉಂಡು ಮಿಕ್ಕಿದ್ದನ್ನೆಲ್ಲ ಕಸ ಎಸೆದಂತೆ ಎಸೆದ ದೃಶ್ಯವಿತ್ತಲ್ಲ ಅದು ಹಸಿವನ್ನು ಬಲ್ಲ ಯಾರಿಗಾದರೂ ಕಣ್ಣೀರು ತರುವಂತಿತ್ತು.

ನೆಲ ನುಂಗುವವನಿಗೆ ಅನ್ನದ ಬೆಲೆ ಏನು ಗೊತ್ತು? ಕೇವಲ ಹತ್ತು ವರ್ಷದ ಹಿಂದೆ ಯಕಶ್ಚಿತ್ ಲ್ಯಾಂಡ್ ಬ್ರೋಕರ್ ಆಗಿದ್ದ ಕಟ್ಟಾ ತಾನು ಲಟಾರಿ ಸ್ಕೂಟರ್ ಹತ್ತುವುದಕ್ಕೂ ಮುನ್ನ ಫುಟ್‌ಪಾತಿನಲ್ಲಿ ಮಲಗಿದ್ದು, ತುತ್ತು ಅನ್ನಕ್ಕೆ ಅಲೆದದ್ದು ಇಷ್ಟು ಬೇಗ ಮರೆತು ಹೋಯಿತೆ? ■



ಆರ್ಯರ ಕಣ್ಣಲ್ಲಿ ದಕ್ಷಿಣ ಮತ್ತು ದ್ರಾವಿಡರು


ಮಧ್ಯ ಏಶಿಯಾದಿಂದ ಕ್ರಿ.ಪೂ. 1500 - 100 ವರ್ಷಗಳ ಹಿಂದೆ ಭಾರತಕ್ಕೆ ಲಗ್ಗೆ ಇಟ್ಟ ಆರ್ಯರು ಆ ಹೊತ್ತಿಗಾಗಲೇ ಸಮೃದ್ಧವಾಗಿ ಬೆಳೆದಿದ್ದ ದ್ರಾವಿಡ ನಾಗರಿಕತೆಯನ್ನು ಹೇಗೆ ನಾಶ ಮಾಡಿದರೆಂದು ಬಹುತೇಕ ಇತಿಹಾಸಕಾರರು ವಿವರವಾಗಿ ಬರೆದಿದ್ದಾರೆ. ಭಾರತ ಉಪಖಂಡವನ್ನು ಹೊರಗಿನ ಪ್ರಪಂಚದೊಂದಿಗೆ ಜೋಡಿಸುವ ಸರಳ ಮತ್ತು ಏಕೈಕ ಭೂಮಾರ್ಗ ಎಂದರೆ ವಾಯುವ್ಯ ಭಾರತ. ಆ ಮೂಲಕವೇ ಭಾರತ ಉಪಖಂಡವನ್ನು ಪ್ರವೇಶಿಸಿದ ಆರ್ಯರು ಮೊದಲು ದ್ರಾವಿಡರೊಂದಿಗೆ ಸಂಘರ್ಷಕ್ಕಿಳಿದು ಅವರು ಸಾವಿರಾರು ವರ್ಷಗಳಿಂದ ನಿರ್ಮಿಸಿದ್ದ ಸಿಂಧೂ ನಾಗರಿಕತೆಯನ್ನು ನಾಶ ಮಾಡಿದರು. ಭಾರತದ ಮೂಲ ನಿವಾಸಿಗಳಾದ ದ್ರಾವಿಡರಿಗೂ ಮತ್ತು ಹೊರಗಿನಿಂದ ಬಂದ ಆರ್ಯರಿಗೂ ನಡುವೆ ನಡೆಯುತ್ತಿದ್ದ ಈ ಸಂಘರ್ಷ ನಂತರದಲ್ಲಿಯೂ ಮುಂದುವರೆದು ಇದರಲ್ಲಿ ಆರ್ಯರೇ ಮೇಲುಗೈ ಪಡೆದರು. ಪರಿಣಾಮವಾಗಿ ದ್ರಾವಿಡರನ್ನು ದಕ್ಷಿಣ ಭಾರತದ ಕಡೆ ದೂಡಲಾಯಿತು. ಹೀಗಾಗಿ ದಕ್ಷಿಣ ಭಾರತವೆಂದರೆ ದ್ರಾವಿಡರ ಪ್ರದೇಶವೆಂದೂ, ಉತ್ತರ ಭಾರತವೆಂದರೆ ಆರ್ಯರ ಪ್ರದೇಶವೆಂದೂ ಪರಿಗಣಿಸುವ ಮಟ್ಟಿಗೆ ಈ ವಿಭಜನೆ ನಡೆದಿತ್ತು.

ಸಾಂಸ್ಕೃತಿಕವಾಗಿಯೂ ದ್ರಾವಿಡರನ್ನು ಮೂಲೆಗುಂಪು ಮಾಡಲು ಆರ್ಯರು ಹಲವಾರು ಪ್ರಯತ್ನಗಳನ್ನು ಮಾಡಿದರು. ವೇದಗಳಲ್ಲಿ, ಶಾಸ್ತ್ರಗಳಲ್ಲಿ ದ್ರಾವಿಡರನ್ನು ರಾಕ್ಷಸರಿಗೆ ಹೋಲಿಸಿದರು. ಅಥವಾ ದ್ರಾವಿಡರನ್ನೇ ರಾಕ್ಷಸರು ಎಂದು ಕರೆದರು ಎಂದರೂ ಆದೀತು. ಅವರು ವಾಸಿಸುವ ದಕ್ಷಿಣ ಭಾರತವನ್ನು ಒಂದು ದೊಡ್ಡ ನರಕವೆಂತಲೋ, ಭೀಕರ ಪ್ರದೇಶವೆಂತಲೋ, ಪಾಪಿಗಳ ಪ್ರದೇಶವೆಂತಲೋ ಬಣ್ಣಿಸಿದರು. ಹಾಗಾಗಿ ಉತ್ತರ ಭಾರತದಲ್ಲಿ ಯಾರಾದರೂ ಘೋರ ತಪ್ಪನ್ನೆಸಗಿದರೆ ಅವರನ್ನು ಕತ್ತೆಯ ಮೇಲೆ ಕೂರಿಸಿ ದಕ್ಷಿಣ ಭಾರತದ ಕಡೆ ಕಳಿಸಿಬಿಡುತ್ತಿದ್ದರು! ಇದು ಘೋರ ತಪ್ಪನ್ನೆಸಗಿದ ಪಾಪಿಗೆ ಕೊಡುವ ಶಿಕ್ಷೆ ಎಂದರೆ ದ್ರಾವಿಡರನ್ನು ಮತ್ತು ಅವರು ವಾಸಿಸುವ ದಕ್ಷಿಣ ಭಾರತವನ್ನು ಆರ್ಯರು ನೋಡುತ್ತಿದ್ದ ರೀತಿ ಹೇಗಿತ್ತೆಂದು ಅರ್ಥವಾಗುತ್ತದೆ.

ನಮ್ಮ ಪೌರಾಣಿಕ ಸಾಹಿತ್ಯದಲ್ಲಿ ಇಂತಹ ಅನೇಕ ಉದಾಹರಣೆಗಳು ಸಿಗುತ್ತವೆ. ಉತ್ತರ ಭಾರತವನ್ನು ಪುಣ್ಯಭೂಮಿಯೆಂದೂ ದಕ್ಷಿಣ ಭಾರತ ಪಾಪದ ಭೂಮಿಯೆಂದೂ ಹಾಗೂ ಉತ್ತರ ಭಾರತದಲ್ಲಿ ಹುಟ್ಟಿದವರು ನೇರವಾಗಿ ಮೋಕ್ಷಕ್ಕೆ ಹೋಗುತ್ತಾರೆಂದೂ, ದಕ್ಷಿಣ ಭಾರತದಲ್ಲಿ ಹುಟ್ಟಿದವರು ಮೋಕ್ಷಕ್ಕೆ ಹೋಗಬೇಕೆಂದರೆ ವಿಶೇಷ ಯಜ್ಞಯಾಗಾದಿಗಳನ್ನು ಮಾಡಬೇಕೆಂದೂ ಬಣ್ಣಿಸಿರುವುದರಲ್ಲಿಯೂ ಆರ್ಯರು ದ್ರಾವಿಡರನ್ನು ಹೇಗೆ ತುಚ್ಛವಾಗಿ ಕಾಣುತ್ತಿದ್ದರು ಎಂದು ಗೋಚರವಾಗುತ್ತದೆ.

ಅಯ್ಯೋ ರಾಮ!

ದಕ್ಷಿಣ ಭಾರತದ ಕಡೆಗಿನ ಆರ್ಯರ ವಿಕೃತ ನಿರೂಪಣೆ ಕಾಲಾಂತರದಲ್ಲಿ ಎಷ್ಟರ ಮಟ್ಟಿಗೆ ಬೆಳೆಯಿತೆಂದರೆ ದಕ್ಷಿಣ ಭಾರತದ ಬದಲಿಗೆ ಇಡೀ ದಕ್ಷಿಣ ದಿಕ್ಕೆ ಅನಿಷ್ಟವೆಂದು ಪರಿಗಣಿಸಲಾರಂಭಿಸಿದರು. ಕಾಲಕ್ರಮೇಣದಲ್ಲಿ ಆರ್ಯರು ಯಾರು, ದ್ರಾವಿಡರು ಯಾರು ಎಂದು ಬೇರ್ಪಡಿಸಲಾಗದಷ್ಟು ಆ ಎರಡೂ ಜನಾಂಗಗಳು ಮಿಶ್ರಣಗೊಂಡುಬಿಟ್ಟವಾದರೂ ಆರ್ಯರು ಬಿತ್ತಿದ ದಕ್ಷಿಣ ದಿಕ್ಕಿನ ಬಗೆಗಿನ ವಿಕೃತ ನಿರೂಪಣೆ ಮಾತ್ರ ಬದಲಾಗಲಿಲ್ಲ. ಇದನ್ನು ನಾವು ಇಂದಿಗೂ ಹಲವಾರು ಉದಾಹರಣೆಗಳಲ್ಲಿ ನೋಡಬಹುದು. ಉದಾಹರಣೆಗೆ, ಭಾರತದ ಬಹುತೇಕ ಹಳ್ಳಿಗಳಲ್ಲಿ ಇಂದಿಗೂ ದಲಿತರ ಕೇರಿಗಳು ಇರುವುದು ದಕ್ಷಿಣ ದಿಕ್ಕಿನಲ್ಲಿಯೇ! ಅಂದರೆ, ಕೀಳು ಜಾತಿಗಳೆಂದು ಮೇಲ್ಜಾತಿಯವರು ಪರಿಗಣಿಸಲ್ಪಟ್ಟಿದ್ದ ದಲಿತರು ಕೀಳು ದಿಕ್ಕು ಎಂದು ಪರಿಗಣಿಸಲ್ಪಟ್ಟಿದ್ದ ದಕ್ಷಿಣ ದಿಕ್ಕಿನಲ್ಲಿಯೇ ವಾಸಿಸಬೇಕು ಎಂಬುದು ಅವರ ತರ್ಕ. ಇದೂ ಕೂಡ ಆರ್ಯರು ಕೊಟ್ಟ ಕೊಡುಗೆಯೆ.



ಮುಸ್ಲಿಮರು ವಿದೇಶದಿಂದ ಬಂದು ಇಲ್ಲಿನ ಮೂಲನಿವಾಸಿಗಳ ಮೇಲೆ ದೌರ್ಜನ್ಯ ನಡೆಸಿ ತಮ್ಮ ಅಧಿಕಾರ ಸ್ಥಾಪಿಸಿಕೊಂಡರು. ಹಾಗಾಗಿ ಅವರನ್ನು ಈ ದೇಶದಿಂದ ಓಡಿಸಬೇಕು ಎಂಬ ವಿಕೃತ ವಾದವನ್ನು ಯಾವಾಗ ಸಂಘಪರಿವಾರದ ಚೆಡ್ಡಿಗಳು ಮುಂದಿಟ್ಟು ಪ್ರಚಾರ ಮಾಡಲಾರಂಭಿಸಿದರೋ ಅದಕ್ಕೆ ಪ್ರತಿಯಾಗಿ ಆರ್ಯರೂ ವಿದೇಶದಿಂದಲೇ ಬಂದು ಇಲ್ಲಿನ ನೈಜ ಮೂಲ ನಿವಾಸಿಗಳಾದ ದ್ರಾವಿಡರ ಮೇಲೆ ದೌರ್ಜನ್ಯವೆಸಗುತ್ತಾ ತಮ್ಮ ಅಧಿಪತ್ಯ ಸ್ಥಾಪಿಸಿದ್ದಾರಾದ್ದರಿಂದ ಅವರನ್ನೂ ಈ ದೇಶದಿಂದ ಓಡಿಸಬೇಕು ಎಂಬ ಮತ್ತೊಂದು ಪ್ರತಿವಾದ ಹುಟ್ಟಿಕೊಂಡಿತು. ಅದಕ್ಕೆ ಮತ್ತೆ ಚೆಡ್ಡಿಗಳು ಆರ್ಯರು ವಿದೇಶದಿಂದ ಬಂದವರಲ್ಲ, ಅವರು ಈ ದೇಶದ ಮೂಲನಿವಾಸಿಗಳೇ ಎಂದು ಚರಿತ್ರೆಯನ್ನೇ ತಿರುಚಲು ಪ್ರಯತ್ನಿಸಿ ಪ್ರಜ್ಞಾವಂತ ಮತ್ತು ಪ್ರಾಮಾಣಿಕ ಚರಿತ್ರಕಾರರಿಂದ ಮಂಗಳಾರತಿಯನ್ನೂ ಎತ್ತಿಸಿಕೊಂಡರು.

ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ರಾಮಮಂದಿರ ಇತ್ತು, ಅದನ್ನು ಕೆಡವಿ ಮಸೀದಿ ಕಟ್ಟಲಾಯಿತು ಎಂದು ಹೇಳುತ್ತಾ ಅದನ್ನು ಐತಿಹಾಸಿಕ ಸತ್ಯವೆಂಬಂತೆ ಬಿಂಬಿಸಲು ಪೊಳ್ಳು ಇತಿಹಾಸಕಾರರನ್ನೂ ಸೃಷ್ಟಿಸಿದ್ದರು. ಆಗಲೂ ಬಹುತೇಕ ಚರಿತ್ರೆಕಾರರು ಈ ವಾದವನ್ನು ಸಾರಾಸಗಟಾಗಿ ತಿರಸ್ಕರಿಸಿ ಸಂಘಪರಿವಾರಕ್ಕೆ ಮುಖಭಂಗ ಮಾಡಿದ್ದರು.

ಈಗ, ಅದೆಲ್ಲ ಹಳತಾಯಿತು. ಅವರಿಗೆ ಏನಾದರೊಂದು ಕಿತಾಪತಿ ಮಾಡದಿದ್ದರೆ ನೆಮ್ಮದಿ ಇರುವುದಿಲ್ಲ, ಹಾಗಾಗಿ ರಾಮ ಸೇತು ವಿವಾದವನ್ನು ಸೃಷ್ಟಿಸಿ ಕೋಲಾಹಲವೆಬ್ಬಿಸಲು ಯತ್ನಿಸುತ್ತಿದ್ದಾರೆ. ಅದಕ್ಕೆಂದು ಒಂದೆಡೆ, ರಾಮ ಐತಿಹಾಸಿಕ ಪುರುಷ, ರಾಮಸೇತುವನ್ನು 17 ಲಕ್ಷ ವರ್ಷಗಳ ಹಿಂದೆ ನಿರ್ಮಾಣವಾಯಿತು ಎಂದು ಇತಿಹಾಸವನ್ನು ತಿರುಚುತ್ತಿದ್ದರೆ, ಇನ್ನೊಂದೆಡೆ ಉಪಗ್ರಹ ಚಿತ್ರದಲ್ಲಿ ಕಾಣುತ್ತಿರುವುದು ಮಾನವ ನಿರ್ಮಿತ ರಚನೆ ಅಲ್ಲ ಎಂದು ವಿಜ್ಞಾನಿಗಳು ಹೇಳುತ್ತಿದ್ದರೂ ಅದು ಮಾನವ ನಿರ್ಮಿತ ಎಂದು ಹೇಳುತ್ತಾ ವಿಜ್ಞಾನವನ್ನೂ ತಿರುಚುತ್ತಿದ್ದಾರೆ.

ಒಟ್ಟಿನಲ್ಲಿ ಈ ಬಾರಿ ವಿಜ್ಞಾನಿಗಳು ಮತ್ತು ಚರಿತ್ರೆಕಾರರು ಇಬ್ಬರೂ ಸೇರಿ ಸಂಘಪರಿವಾರದ ಚೆಡ್ಡಿಗಳಿಗೆ ಮಂಗಳಾರತಿ ಮಾಡುವುದಂತೂ ಸತ್ಯ. ■

ಮುನೀಶ್ ತಾನೇಜ ಎಂಬ ಘಟಿಂಗನೇ ರಾಮಸೇತುವಿನ ಸಿದ್ಧಾಂತಿ

ಸಂಘಪರಿವಾರ ನಡೆಸುವ ಎಲ್ಲ ಮಂಗಾಟಗಳಿಗೆ ವೈಜ್ಞಾನಿಕ ಮತ್ತು ಚಾರಿತ್ರಿಕ ಆಧಾರಗಳನ್ನು ಕೊಟ್ಟುಬಿಟ್ಟರೆ ಸಾಮಾನ್ಯ ಜನರಿಗೆ, ಅದರಲ್ಲೂ ವಿಶೇಷವಾಗಿ ಮಧ್ಯಮ ವರ್ಗದ ಶಿಕ್ಷಿತ ಜನರಿಗೆ ಟೋಪಿ ಹಾಕುವುದು ಸುಲಭವಾಗುತ್ತದೆ. ಆದ್ದರಿಂದಲೇ, ಅವರು ಪ್ರತೀ ಇಶ್ಯೂವನ್ನು ಎತ್ತಿಕೊಂಡಾಗಲೂ ಅದನ್ನು ಚಾರಿತ್ರಿಕ ಮತ್ತು ವೈಜ್ಞಾನಿಕವಾಗಿ ನಿರೂಪಿಸಲು ಹೆಣಗಾಡುತ್ತಾರೆ. ಉದಾಹರಣೆಗೆ, ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ಮೊದಲು ರಾಮಮಂದಿರವಿತ್ತು ಎಂಬುದನ್ನು ಚಾರಿತ್ರಿಕವಾಗಿ ನಿರೂಪಿಸಲು ಬಿ.ಬಿ. ಲಾಲ್ ಎಂಬ ಟೊಳ್ಳು ಇತಿಹಾಸಕಾರನನ್ನು ಸೃಷ್ಟಿಸಿದರು. ಆದರೆ, ಅವನ ಮಾತಿಗೆ ಇತಿಹಾಸಕಾರರ ವಲಯದಲ್ಲಿ ಕವಡೆ ಕಾಯಿಯಷ್ಟು ಬೆಲೆ ಸಿಗಲಿಲ್ಲವಾದರೂ ಮಧ್ಯಮ ವರ್ಗದ ಸುಶಿಕ್ಷಿತರ ಒಂದು ವಲಯವನ್ನು ಪ್ರಭಾವಿಸುವಲ್ಲಿ ಬಿ.ಬಿ. ಲಾಲ್‌ನ ಪ್ರತಿಪಾದನೆಗಳು ಒಂದಷ್ಟು ಮಟ್ಟಿಗೆ ಯಶಸ್ವಿಯಾದವು.



ಬಾಬರಿಮಸೀದಿ ಗಲಭೆ

ಈಗ, ರಾಮಜನ್ಮಭೂಮಿ ತನ್ನ ಕಾವನ್ನು ಕಳೆದುಕೊಂಡಿರುವುದರಿಂದ ರಾಮಸೇತು ವಿವಾದವನ್ನು ಸೃಷ್ಟಿಸುತ್ತಿದ್ದಾರೆ. ಆದರೆ ಇಲ್ಲಿಯೂ ಭಾರತ ಮತ್ತು ಶ್ರೀಲಂಕಾ ನಡುವೆ ರಾಮ ನಿರ್ಮಿಸಿದ ಸೇತುವೆ ಇದೆ ಎಂಬುದನ್ನು ವೈಜ್ಞಾನಿಕವಾಗಿ ಪ್ರತಿಪಾದಿಸಲು ಅವರು ಆಶ್ರಯಿಸಿದ್ದು ಮುನೀಶ್ ತಾನೇಜ ಎಂಬ ಘಟಿಂಗನನ್ನು. ವಾಸ್ತವದಲ್ಲಿ ಈ ಘಟಿಂಗ ಕೊಟ್ಟ ಮಾಹಿತಿಗಳ ಆಧಾರದ ಮೇಲೇಯೇ ಇಡೀ ಇಶ್ಯೂವನ್ನು ಬೆಳೆಸಿದರು.

ಮೂಲತಃ ಉತ್ತರ ಪ್ರದೇಶದವನಾದ ಈ ತಾನೇಜ ತಾನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಘಟನೆಯ - ಇಸ್ರೋ - ವಿಜ್ಞಾನಿ ಎಂದೂ, ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಎರಡು ವರ್ಷಗಳ ರಜೆಯ ಮೇಲಿರುವುದಾಗಿಯೂ, ಸರ್ಕಾರದ ಸೇತು ಸಮುದ್ರಂ ಪ್ರಾಜೆಕ್ಟಿನಿಂದ ಹೇಗೆ ರಾಮನ ಸೇತುವೆಗೆ ಧಕ್ಕೆಯಾಗುತ್ತದೆಂದು ಅಧ್ಯಯನ ನಡೆಸಿದ್ದೇನೆಂದೂ, ಈ ಕಾರಣಕ್ಕಾಗಿ ತನಗೆ ಡಿಎಂಕೆ ಕಾರ್ಯಕರ್ತರಿಂದ ಪ್ರಾಣಾಪಾಯವಿದೆಯೆಂದೂ ಆರ್‌ಎಸ್‌ಎಸ್‌ನ ಸರಸಂಘಚಾಲಕ ಕೆ.ಎಸ್. ಸುದರ್ಶನ್ ಮತ್ತು ವಿಶ್ವಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ್ ಸಿಂಘಾಲ್ ಎದುರು ಪುಂಗಿ ಊದಿದರೆ ಅದಕ್ಕೆ ಈ ಮಹಾನುಭಾವರು ತಲೆಯಲ್ಲಾಡಿಸಿದ್ದಾರೆ. ಕೇಂದ್ರದ ಯುಪಿಎ ಸರ್ಕಾರದಲ್ಲಿ, ಅದರಲ್ಲೂ



ಸಂಘಪರಿವಾರದವರ ಧರಣಿ

ಪ್ರಧಾನಮಂತ್ರಿಗಳ ಸಚಿವಾಲಯದಲ್ಲಿ ಸಂಘಪರಿವಾರದ ಪರವಾಗಿರುವ ಒಬ್ಬ ಕಾರ್ಯದರ್ಶಿ ಇದ್ದರೆ ಅಲ್ಲಿಂದ ಏನೆಲ್ಲಾ ಮಾಹಿತಿ ಪಡೆಯಬಹುದು ಎಂದು ಸಂಘಪರಿವಾರದ ನಾಯಕಮಣಿಗಳು ಲೆಕ್ಕ ಹಾಕಿದ್ದಾರೆ. ಅಲ್ಲದೇ, ತಾವು ಸೃಷ್ಟಿಸಲು ಹೊರಟಿದ್ದ ರಾಮಸೇತು ವಿವಾದಕ್ಕೆ ವೈಜ್ಞಾನಿಕ ಆಧಾರ ಒದಗಿಸಲು ಒಬ್ಬ ಇಸ್ರೋ ವಿಜ್ಞಾನಿ ಕೂಡ ಸಿಕ್ಕಂತಾಯಿತು ಎಂದು ಬಹಳ ಹರ್ಷದಿಂದ ಈ ಘಟಿಂಗನಿಗೆ ಒಂದು ಫ್ಲಾಟ್, ಹಣ ಮತ್ತು ಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸಿಬಿಟ್ಟರು. ಅವನು ಕೊಟ್ಟ ಮಾಹಿತಿ, ವಿವರಣೆಗಳ ಆಧಾರದಲ್ಲಿ ರಾಮಸೇತು ವಿವಾದವನ್ನು ಸೃಷ್ಟಿಸಿ ದೇಶದಾದ್ಯಂತ ಹರಿಬಿಟ್ಟರು.

ಆದರೆ, ವಾಸ್ತವ ಏನೆಂದರೆ, ಮುನೀಶ್ ತಾನೇಜ ಒಬ್ಬ ವಿಜ್ಞಾನಿಯೇ ಅಲ್ಲ, ಆತ ಇಸ್ರೋದಲ್ಲಂತೂ ಇರಲೇ ಇಲ್ಲ, ಪ್ರಧಾನಮಂತ್ರಿಗಳ ಸಚಿವಾಲಯದಲ್ಲಿ ಕಾರ್ಯದರ್ಶಿಯೂ ಆಗಿರಲಿಲ್ಲ ಎಂಬ ವಿಚಾರಗಳು ಕೆಲವೇ ದಿನಗಳಲ್ಲಿ ಬಯಲಿಗೆ ಬಂದವು!

ಅಂತೂ ಈತನ ಪೂರ್ವಾಪರಗಳ ಬಗ್ಗೆ ತಿಳಿದುಕೊಳ್ಳದೇ ಸಂಘಪರಿವಾರ ಚೆಡ್ಡಿಗಳು ತಾನೇಜನಿಂದ ಪಕ್ಕಾ ಮಕ್ಮಲ್ ಟೋಪಿಯನ್ನು ಹಾಕಿಸಿಕೊಂಡರು. ಬಿ.ಬಿ. ಲಾಲ್‌ನ ಪ್ರತಿಪಾದನೆಗಳು ರಾಮಜನ್ಮಭೂಮಿ ವಿವಾದ ಸೃಷ್ಟಿಯಾದ ಮೇಲೆ ಬಹಳ ದಿನಗಳವರೆಗೂ ಇದ್ದವು. ಆದರೆ, ತಾನೇಜನ ಪ್ರತಿಪಾದನೆಗಳು ವಿವಾದ ಸೃಷ್ಟಿಯಾಗುವ ಮೊದಲೇ ಬಿದ್ದುಹೋದವು! ಆದರೂ ಚೆಡ್ಡಿಗಳು ಮಾತ್ರ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲವೆನ್ನುವಂತೆ ತಮ್ಮ ಮಂಗಾಟಗಳನ್ನು ಮುಂದುವರೆಸಿದ್ದಾರೆ.


■ ಕುಮಾರ್ ಬುರಡೀಕಟ್ಟಿ


ನಂಬಿಕೆಯನ್ನೇ ಆಧರಿಸಿದ್ದು ಚರಿತ್ರೆಯಲ್ಲ!


ಅಯೋಧ್ಯೆ

ಡಾ. ಬಂಜಗೆರೆ ಜಯಪ್ರಕಾಶ











ಪುರಾಣ, ಕಾವ್ಯ ಕಲೆ ಎಲ್ಲದರಲ್ಲೂ ಇತಿಹಾಸವಿರುತ್ತದೆ. ಯಾವುದೇ ಸಾಂಸ್ಕೃತಿಕ 'ಆಕೃತಿ' ಇತಿಹಾಸದ ಪ್ರಭಾವದಿಂದ ಮುಕ್ತವಾಗಿರುವುದಿಲ್ಲ. ಹಾಗೆಂದೇ ಡಿ. ಡಿ. ಕೋಸಾಂಬಿ ಮತ್ತು ಆ ಪಂಥದ ಇತಿಹಾಸಕಾರರು, ಇತಿಹಾಸದ ಸ್ಪಷ್ಟ ದಾಖಲೆಗಳು ಲಭ್ಯವಾಗದ ಸಂದರ್ಭಗಳಲ್ಲಿ ಸಾಂಸ್ಕೃತಿಕ ಆಕರಗಳನ್ನು ಪರಿಶೀಲಿಸುವ ಮುಖಾಂತರ ಇತಿಹಾಸ ಬರೆಯುವ ಪದ್ಧತಿಗಳನ್ನು ಅಳವಡಿಸಿಕೊಂಡರು.

ಆದರೆ ಇಲ್ಲಿ ಇರುವ ಸೂಕ್ಷ್ಮವಾದ ವ್ಯತ್ಯಾಸವನ್ನು ಗಮನಿಸಬೇಕು. ಸಾಂಸ್ಕೃತಿಕ 'ಆಕೃತಿ'ಗಳು ಇತಿಹಾಸದ ಪ್ರಭಾವದಲ್ಲಿ ರೂಪುಗೊಳ್ಳುವಾಗ ತಮ್ಮೊಳಗೆ ಆ ಇತಿಹಾಸದ ಛಾಯೆಯನ್ನು ಧರಿಸಿಕೊಂಡಿರುತ್ತವೆ. ಆದರೆ ಅದು ಯಥಾವತ್ ಇತಿಹಾಸವಲ್ಲ. ಪುರಾಣವೊಂದರಲ್ಲಿ ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಸಂಬಂಧಪಟ್ಟ ಪ್ರತಿಫಲನಗಳು ಹಾಗೂ ಉಲ್ಲೇಖಗಳು ಇರುತ್ತವೆ. ಆದರೆ ಐತಿಹಾಸಿಕ ದಾಖಲಾತಿ ಮಾಡುವ ಉದ್ದೇಶದಿಂದ ಕೃತಿಕಾರರು ಅವುಗಳನ್ನು ಅಲ್ಲಿ ತಂದುಕೊಂಡಿರುವುದಿಲ್ಲ.

ಪುರಾಣ, ಕಾವ್ಯ ಮುಂತಾದವುಗಳ ಮುಖಾಂತರವೂ ಇತಿಹಾಸ ರಚನೆಗೆ ಬೇಕಾದ ಮಾಹಿತಿಯನ್ನು ಪಡೆಯಬಹುದು ಎಂಬ ದೃಷ್ಟಿಕೋನ ಪುರಾಣಗಳೇ ಇತಿಹಾಸ ಎಂಬ ನಿಲುವಿಗಿಂತ ಭಿನ್ನವಾದುದು. ಈ ವ್ಯತ್ಯಾಸವನ್ನು ಕೋಮುವಾದಿ ಶಕ್ತಿಗಳು ಬೇಕಂತಲೇ ಮರೆಯುತ್ತಿವೆ. ಅವರಿಗೆ ಬೇಕಾಗಿರುವುದು ಇತಿಹಾಸ ಪರಂಪರೆಯಲ್ಲ, ಅದರ ಹೆಸರಲ್ಲಿ ಚಾಲ್ತಿಯಲ್ಲಿರುವ ನಂಬುಗೆಗಳು ಮಾತ್ರ.

ರಾಮಾಯಣದ ರಾಮ ಎಂಬ ಪ್ರತೀಕ ಹಾಗೂ ಆತನ ಕಾರ್ಯಾಚರಣೆಗಳು, ರಾಮಾಯಣ ಒಂದು ಕಾವ್ಯ ಹಾಗೂ ಪುರಾಣವಾಗಿ ಬಿಂಬಿಸುವ ವಿಧಾನಕ್ಕಿಂತ ಭಿನ್ನವಾದ ಆಯಾಮದಲ್ಲಿ ಸಂಭವಿಸಿರಬಹುದು. ಆ ಕಾಲಘಟ್ಟದ ಘಟನಾವಳಿಗಳು, ಸ್ಥಳ ಪ್ರದೇಶಗಳು ಪುರಾಣದಲ್ಲಿ ಬಿಂಬಿತವಾದವುಗಳಿಗಿಂತ ಭಿನ್ನವಾದವುಗಳಿರಬಹುದು. ಇತಿಹಾಸ ಪ್ರಜ್ಞೆಯಿಂದ ಅವುಗಳನ್ನು ಪರಿಶೀಲಿಸಿದಾಗ ಜನರ ನಡುವೆ ಚಾಲ್ತಿಯಲ್ಲಿರುವ ನಂಬುಗೆಗಳಿಗಿಂತ ಭಿನ್ನವಾದ ವಾಸ್ತವಾಂಶಗಳು ಗೋಚರಿಸಬಹುದು.

ರಾಮಾಯಣದ ಬಗ್ಗೆ ಹೇಳಬೇಕೆಂದರೆ, ಅದೊಂದು ಪುರಾತನ ಪಾಡ್ದನವಾಗಿ ಸಮುದಾಯಗಳ ನಡುವೆ ಚಲಾವಣೆಯಲ್ಲಿದ್ದು, ನಂತರದಲ್ಲಿ ಬೇರೆಬೇರೆಯವರಿಂದ ಸಂಕಲನಗೊಳ್ಳುತ್ತಾ, ಪರಿಷ್ಕಾರಗೊಳ್ಳುತ್ತಾ ಪುರಾಣವಾಗಿ ಬೆಳೆದು ಬಂದಿತು. ಅದರಲ್ಲಿ ಬರುವ 'ಲಂಕೆ' ಎಂಬುದು, ಈಗಿನ ಜನಪ್ರಿಯ ರಾಮಾಯಣ ಹೇಳುವ ಶ್ರೀಲಂಕೆಯಲ್ಲ. ಲಂಕೆ ಎಂಬುದು ಒಂದು ನಾಮಪದ. ಸುತ್ತಲೂ ನೀರಿದ್ದು ಮಧ್ಯದಲ್ಲಿ ನೆಲವಿರುವ ಪ್ರದೇಶವನ್ನು ದಂಡಕಾರಣ್ಯದ ಆದಿವಾಸಿ ಸಮುದಾಯಗಳು 'ಲಂಕ' ಎಂದು ಕರೆಯುತ್ತಾರೆ. ಆ ಅರ್ಥದಿಂದ ನೋಡಿದರೆ ಈಗಿನ ಶ್ರೀಲಂಕಾ ಕೂಡ ಲಂಕೆಯೇ. ಆದರೆ ಅದು ರಾಮಾಯಣದ ರಾವಣನ ಲಂಕಾಪಟ್ಟಣವೇ ಅಲ್ಲವೇ ಎಂಬುದನ್ನು ಪರಿಶೀಲಿಸಲು ಇತಿಹಾಸಕಾರ ಎಚ್. ಡಿ. ಸಾಂಕಾಲಿಯಾ ತುಂಬಾ ಸಂಶೋಧನೆಯನ್ನು ಮಾಡಿದ್ದಾರೆ.

ವಸ್ತುನಿಷ್ಠವಾದ ಅಧ್ಯಯನ ಹಾಗೂ ಪರಿಶೀಲನೆಯ ನಂತರ ಸಾಂಕಾಲಿಯಾ ಪ್ರತಿಪಾದಿಸಿದ ಅಂಶವೇನೆಂದರೆ ರಾಮಾಯಣದಲ್ಲಿ ಉಲ್ಲೇಖಗೊಂಡ ಲಂಕಾಪಟ್ಟಣ ಈಗಿನ ಶ್ರೀಲಂಕಾ ಅಲ್ಲ, ಬದಲಾಗಿ ಅದು ವಿಂಧ್ಯ ಪರ್ವತ ಪ್ರಾಂತ್ಯದ ಜಬಲ್ಪುರ ಹತ್ತಿರದಲ್ಲಿರುವ ಒಂದು ಅನಾಮಿಕ ನಡುಗಡ್ಡೆ. ವಾಲ್ಮೀಕಿ ರಾಮಾಯಣದಲ್ಲಿ ವರ್ಣಿತವಾಗುವ ಭೌಗೋಳಿಕ ಸನ್ನಿವೇಶ, ಆ ಚಾರಿತ್ರಿಕ ಕಾಲಘಟ್ಟದ ಜನವಸತಿಗಳ ವಿಸ್ತಾರ, ಅರಣ್ಯದ ಪ್ರಮಾಣ ಮುಂತಾದವುಗಳನ್ನೆಲ್ಲ ಲೆಕ್ಕ ಹಿಡಿದು ಸಾಂಕಾಲಿಯಾ ವಿಂಧ್ಯ ಸಾಲಾವಳಿಯ ಆ ನಡುಗಡ್ಡೆಯಲ್ಲಿ ಪುರಾತತ್ವ ಶೋಧ ಕೈಗೊಂಡರು.

ಪುರಾತತ್ವ ಶೋಧದ ಕಾಲದಲ್ಲಿ ಕಂಡುಬಂದ ಜನವಸತಿಯ ಕುರುಹುಗಳು, ಆ ಪ್ರದೇಶದಲ್ಲಿ ಗೋಚರಿಸಿದ ಲೋಹ ತಯಾರಿಕಾ ಪರಿಶ್ರಮದ ಉಳಿಕೆಗಳು ಮುಂತಾದವುಗಳನ್ನು ಸಾಕ್ಷ್ಯವಾಗಿ ಮಂಡಿಸಿ ಸಾಂಕಾಲಿಯಾ ಒಟ್ಟಾರೆಯಾಗಿ ವಾಲ್ಮೀಕಿ ರಾಮಾಯಣದಲ್ಲಿ ಕಂಡುಬರುವ ಭೌಗೋಳಿಕ ಸ್ಥಳಗಳನ್ನು ನಿರೂಪಿಸಿದರು. ಹೀಗಿರುವಾಗ ತಮಿಳುನಾಡಿನ ಆಚೆಯಿರುವ ಸಿಂಹಳ ದ್ವೀಪ ರಾಮಾಯಣದ ರಾಮನ ಸಂದರ್ಭದಲ್ಲಿ ವರ್ಣಿತವಾಗಿರುವ ಲಂಕಾಪಟ್ಟಣ ಆಗಿರುವುದಾಗಲೀ, ಆ ಲಂಕೆಗೆ ತಲುಪಲು ರಾಮನ ವಾನರ ಸೇನೆ ರಾಮಸೇತುವನ್ನು ಆ ಸಮುದ್ರದಲ್ಲಿ ಕಟ್ಟಿದ್ದಾಗಲೀ ಐತಿಹಾಸಿಕ ಸಂಗತಿಗಳಾಗಲು ಸಾಧ್ಯವಿಲ್ಲ. ಈ ಅಂಶಗಳನ್ನೇ ನ್ಯಾಯಾಲಯಕ್ಕೆ ಪುರಾತತ್ವ ಇಲಾಖೆಯ ಪತಿಯಿಂದ ಸಲ್ಲಿಸಲಾದ ಅಫಿಡವಿಟ್‌ನಲ್ಲಿ ಪ್ರತಿಪಾದಿಸಲಾಗಿದೆ.

ರಾವಣ ಎಂಬ ಹೆಸರು ಒಬ್ಬ ವ್ಯಕ್ತಿಯದಾಗಿರುವ ಸಾಧ್ಯತೆಗಿಂತ, ಆ ಸಮುದಾಯದ ರಾಜನಿಗೆ ಅಥವಾ ಮುಖಂಡನಿಗೆ ಬಳಕೆಯಾಗುತ್ತಿದ್ದ ನಾಮಪದವಾಗಿರಬೇಕು ಎಂಬುದು ಹಲವಾರು ಇತಿಹಾಸ ತಜ್ಞರ ವಿಶ್ಲೇಷಣೆ. ಈಗಲೂ ದಂಡಕಾರಣ್ಯ, ಗೊಂಡ್ವಾನ ಮುಂತಾದ ಅರಣ್ಯ ಪ್ರದೇಶದಲ್ಲಿ ವಾಸಿಸುವ ಕೆಲವು ಆದಿವಾಸಿ ಸಮುದಾಯಗಳು ತಮ್ಮ ರಾಜನನ್ನು 'ರಾವಣ' ಎಂಬ ಪದದಿಂದಲೇ ಕರೆಯುವ ಭಾಷಾಶಾಸ್ತ್ರ ಸಾಕ್ಷ್ಯವನ್ನು ಕೂಡ ಸಂಶೋಧನೆಗಳು ಹೊರತೆಗೆದಿವೆ. ಇಂದ್ರ ಎಂಬುದು ಒಂದು ನಾಮಪದವಾಗಿದ್ದು ಆರ್ಯರ ಮುಖಂಡನನ್ನು ಸೂಚಿಸುತ್ತಿತ್ತು. ಪುರಾಣಗಳ ಸಂದರ್ಭದಲ್ಲಿ ಹಲವು ಇಂದ್ರರ ಕಥೆಗಳನ್ನು ಒಂದೇ ವ್ಯಕ್ತಿ ಪಾತ್ರಕ್ಕೆ ಅಳವಡಿಸಿ ಕಡೆಗೆ ಅದನ್ನೊಂದು ಚಿರಂಜೀವ ಕ್ಯಾರೆಕ್ಟರ್ ಆಗಿ ರೂಪಿಸಲಾಗಿದೆ.

ಇಂದ್ರ ಮಾತ್ರವಲ್ಲದೆ, ಕೃಷ್ಣ ರಾಮ ಮುಂತಾದ ಪಾತ್ರಗಳೂ ಕೂಡ ಒಬ್ಬನೇ ವ್ಯಕ್ತಿಯ ಜೀವನವನ್ನು ಪ್ರತಿನಿಧಿಸುವುದಿಲ್ಲ. ಅವು ಪ್ರತೀಕಗಳು. ಕಾವ್ಯದಲ್ಲಿ ಹಲವು ಶತಮಾನಗಳ ಕಾಲಮಾನದಲ್ಲಿ ಬಾಳಿದ ಹಲವಾರು ವ್ಯಕ್ತಿಗಳ ಸಾಹಸಗಾಥೆಗಳನ್ನು, ಜೀವನ ಪ್ರಕರಣಗಳನ್ನು, ಘಟನಾವಳಿಗಳನ್ನು ಒಂದು ಪ್ರತೀಕದ ಎರಕಕ್ಕೆ ಹೊಯ್ಯಲಾಗಿದೆ. ಇತಿಹಾಸತಜ್ಞೆ ರೋಮಿಲಾ ಥಾಪರ್ ತಮ್ಮ 'ಎಕ್ಸೈಲ್ ಅಂಡ್ ದ ಕಿಂಗ್‌ಡಮ್' ಎಂಬ ಕೃತಿಯಲ್ಲಿ ವನವಾಸ, ಹೆಂಡತಿಯ ಅಪಹರಣ, ಎದುರಾಳಿ ಸಮುದಾಯದ ಮೇಲೆ ಯುದ್ಧ ಎನ್ನುವಂತಹ ಕಥಾ ಹಂದರವುಳ್ಳ ಸುಮಾರು 200 ಪ್ರಕರಣಗಳ ಬಗ್ಗೆ ಸೂಚಿಸುತ್ತಾರೆ.

ಒಂದು ಕಾಲಘಟ್ಟದಲ್ಲಿ ಆಗಾಗ ಸಂಭವಿಸುತ್ತಿದ್ದ ಇಂತಹ ಪ್ರಕರಣಗಳು ಜನಸಮುದಾಯಗಳಿಗೆ ಚಿರಪರಿಚಿತ ಕಥೆಗಳಾಗಿದ್ದು, ಕಾಲಾಂತರದಲ್ಲಿ ಅಂತಹ ಕಥನವನ್ನು ಆಧರಿಸಿದ ಜನಪದ ಕಾವ್ಯಗಳು ರೂಪುಗೊಂಡವು. ಅದೇ ರೀತಿ ರಾಮನ ಪ್ರತೀಕವೂ ಕೂಡ. ರಾಮ ಐತಿಹಾಸಿಕ ಎಂಬುದು ನಿಜ. ಹೇಗೆಂದರೆ ಸಾಮಾಜಿಕ ವಿಕಾಸದ ನಡೆಯಲ್ಲಿ, ಅರಣ್ಯ ವಾಸದಿಂದ ಹೊರ ಬಂದು ಊರು ಪಟ್ಟಣಗಳನ್ನು ಕಟ್ಟುತ್ತಿದ್ದ ನಿರ್ದಿಷ್ಟ ಸಮುದಾಯದಲ್ಲಿ, ಒಂದು ಕಾಲದಲ್ಲಿ ಬದುಕಿದ್ದ ವ್ಯಕ್ತಿಯಾಗಿರಬೇಕು ಎಂದು ಮಾತ್ರ. ಅಂದರೆ ರಾಮನೆಂಬ ಪಾತ್ರ ಪೂರ್ತಿ ಕಲ್ಪಿತವಾದುದಲ್ಲ.

ಅದೇ ಸಮಯದಲ್ಲಿ ರಾಮನ ಜೀವನ ಎಂದು ವರ್ಣಿತವಾಗುವ ಘಟನಾವಳಿಗಳು, ವ್ಯಕ್ತಿಗಳು, ಪ್ರಸಂಗಗಳೆಲ್ಲ ದಶರಥನಂದನ ರಾಮನ ಜೀವನದಲ್ಲಿ ನಡೆದ ಐತಿಹಾಸಿಕ ಘಟನೆಗಳೂ ಅಲ್ಲ. ಡಿ. ಡಿ. ಕೋಸಾಂಬಿ ತಮ್ಮ 'ಮಿಥ್ ಅಂಡ್ ರಿಯಾಲಿಟಿ'ಯಲ್ಲಿ ಶ್ರೀಕೃಷ್ಣನ ಕಥಾವಳಿಯ ಬಗ್ಗೆ ಅತ್ಯಂತ ಅರ್ಥಪೂರ್ಣವಾದ ವಿಶ್ಲೇಷಣೆಯನ್ನು ಮಂಡಿಸಿದ್ದಾರೆ. ಈಗ ಪೌರಾಣಿಕಗೊಂಡಿರುವ ಶ್ರೀಕೃಷ್ಣ ಹಾಗೂ ಆತನ ಪಾತ್ರದ ಸುತ್ತ ವರ್ಣಿತವಾಗುವ ಮಹಿಮೆಗಳು ಒಬ್ಬನೇ ಕೃಷ್ಣನಿಗೆ ಸಂಬಂಧಿಸಿದವುಗಳಲ್ಲ, ದೇವಕೀನಂದನ ಕೃಷ್ಣ, ಗೋಪಿಕೃಷ್ಣ, ಮಧುಸೂದನ, ಮಾಧವ, ಚಕ್ರಧಾರಿ ಕೃಷ್ಣ, ಗೋವರ್ಧನ ಗಿರಿಧಾರಿ ಕೃಷ್ಣ ಮುಂತಾದವರ ವಿಭಿನ್ನ ಜೀವನ ಗಾಥೆಗಳನ್ನು, ಒಂದು ಏಕಸೂತ್ರಕ್ಕೊಳಪಡಿಸಿ ಭಕ್ತವತ್ಸಲ ಕೃಷ್ಣ ರೂಪುಗೊಂಡಿರಬೇಕು.

ಇದರ ಸಾಮಾನ್ಯ ಗುಣವೆಂದರೆ, ಶ್ರೀ ಕೃಷ್ಣನಲ್ಲಿ ಸಮೀಕರಣಗೊಂಡ ಮಹಿಮೆಗಳೆಲ್ಲ, ಪಶುಪಾಲಕ ಸಮುದಾಯದಲ್ಲಿ, ಹೆಚ್ಚೂ ಕಡಿಮೆ ಸಾಮೀಪ್ಯತೆಯುಳ್ಳ ಪ್ರದೇಶಗಳಲ್ಲಿ ಸಂಭವಿಸಿದ ಘಟನಾವಳಿಗಳು ಮಾತ್ರವಾಗಿದ್ದು, ಭಿನ್ನ ಭಿನ್ನ ಬುಡಕಟ್ಟುಗಳು ಸಮೀಕರಣಗೊಂಡು, ಬೃಹತ್ ಜನಪದಗಳು ಏರ್ಪಡುವಾಗ, ಈ ಕಥೆಗಳೆಲ್ಲ ಸಮ್ಮಿಳನಗೊಂಡು ಒಂದೇ ಪುರಾಣ ಪ್ರತೀಕವಾಗಿ ಪ್ರಚಲಿತಗೊಂಡಿವೆ.

ಪುರಾಣಗಳನ್ನು ಇತಿಹಾಸದ ನಡೆಯಲ್ಲಿ ಬಂದ ವಿಕಾಸ, ಸಂಘರ್ಷ ಮುಂತಾದವುಗಳನ್ನು ಪರಿಶೀಲಿಸಲು ಒಂದು ಆಕರವನ್ನಾಗಿ ನೋಡಬಹುದೇ ಹೊರತು ಅವುಗಳನ್ನು ಯಥಾವತ್ ಐತಿಹಾಸಿಕ ಸಾಕ್ಷ್ಯಾಧಾರಗಳನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ. ಅದರಲ್ಲೂ ವ್ಯಕ್ತಿಯೊಬ್ಬನ ಜೀವನ ಘಟನಾವಳಿಯ ಕರಾರುವಾಕ್ ದಾಖಲೆಯನ್ನಾಗಿ ಇಟ್ಟುಕೊಳ್ಳುವುದಂತೂ ಪೂರ್ತಿ ಅವಜ್ಞೆಯಾಗುತ್ತದೆ. ಈಗ ಚಾಲ್ತಿಯಲ್ಲಿರುವ ಮರ್ಯಾದಾ ಪುರುಷೋತ್ತಮ ರಾಮ ಹೆಚ್ಚೂ ಕಡಿಮೆ ತುಳಸೀದಾಸರ 'ರಾಮಚರಿತ ಮಾನಸ'ದ ಕಥಾನಾಯಕ. ತುಳಸೀದಾಸರಂತಹ, ಕುಮಾರವ್ಯಾಸರಂತಹ ಭಕ್ತ ಕವಿಗಳು ತಮ್ಮ ಪುರಾಣಕಾವ್ಯಗಳನ್ನು ಬರೆಯುವಾಗ ವಾಲ್ಮೀಕಿ, ವ್ಯಾಸ ಮುಂತಾದ ಕೃತಿಕಾರ ಸಮೂಹಗಳು ರೂಪಿಸಿದ ಕಥಾಹಂದರವನ್ನು ಬಳಸಿಕೊಂಡಿದ್ದಾರೆ. ಆ ಕಥಾಹಂದರಕ್ಕೆ ಪ್ರಾಚೀನ ಕೃತಿಕಾರರಿಂದ ಪಡೆದ ವಿವರಗಳ ಜೊತೆಗೆ ತಮ್ಮ ಜೀವನ ಕಾಲದ ವಿವರಗಳು ಮತ್ತು ವರ್ಣನೆಗಳನ್ನು ಸೇರಿಸಿಯೇ ಕಾವ್ಯ ರೂಪಿಸಿದ್ದಾರೆ. ಅದರೊಂದಿಗೆ ಅವರ ಕಾಲಘಟ್ಟದ ಸಮಾಜಕ್ಕೆ ಅಗತ್ಯವಾಗಿದ್ದ ನೀತಿ ಹಾಗೂ ಮೌಲ್ಯಗಳನ್ನು ತಮ್ಮ ಕಾವ್ಯದ ಪಾತ್ರಗಳ ಮೂಲಕ ಪ್ರಸ್ತುತಪಡಿಸಿದ್ದಾರೆ. ಈ ಹಾದಿಯಲ್ಲಿಯೇ ಭಕ್ತವತ್ಸಲನಾದ ಕೃಷ್ಣ ಮರ್ಯಾದಾ ಪುರುಷೋತ್ತಮ ರಾಮ ರೂಪುಗೊಂಡು ಜನರ ನಡುವೆ 'ನಂಬುಗೆ'ಗಳೆಂಬಂತೆ ನೆಲೆಗೊಂಡಿದ್ದಾರೆ.

ಜನರ ಶ್ರದ್ಧೆ ನಂಬುಗೆಗಳು ಗೌರವಾರ್ಹವಾದವುಗಳೇ ಆದರೂ, ಅವುಗಳನ್ನು ಇತಿಹಾಸದ ವಾಸ್ತವಿಕ ಪ್ರತಿಫಲನಗಳು ಎಂದು ಸಾವಿರಾರು ವರ್ಷಗಳ ಕಾಲಾಂತರದಲ್ಲಿಯೂ ಮಾನ್ಯ ಮಾಡುವ ಹಠ ತೊಡುವುದು ಮೂಲಭೂತವಾದದ ಪ್ರಮುಖ ಸಮಸ್ಯೆ. ಮೊದಮೊದಲು ಗಂಗಾ ನದಿ ತಟದ ಅರಣ್ಯ ಸೀಮೆ ಹಾಗೂ ಅದರ ಸುತ್ತಮುತ್ತಲಲ್ಲಿ ನಡೆದ ಆರಂಭಿಕ ವ್ಯವಸಾಯ ಸಮಾಜದ ವಿಸ್ತರಣೆಯ ಸಾಹಸ ಗಾಥೆಯಾದ ರಾಮಾಯಣ, ಅಂತಹದೇ ಪ್ರಕ್ರಿಯೆಯು ಭಾರತೀಯ ಉಪಖಂಡದ ಹಲವು ಕಡೆಗಳಲ್ಲಿ ಪುನರಾವರ್ತನೆ

(12ನೇ ಪುಟಕ್ಕೆ)



ರಾಮನ ಹೆಸರಲ್ಲಿ ಮೀನುಗಾರರನ್ನು ಕೊಲ್ಲುವ ಕಪಿಗಳ ಸಂಚು

ರಾಮ!

ಭೂಖಂಡದ ದಕ್ಷಿಣ ತುದಿಯಲ್ಲಿ ಭಾರತದ ಮತ್ತು ಶ್ರೀಲಂಕಾದ ಭೂಭಾಗಗಳ ನಡುವೆ ನಿಸರ್ಗ ನಿರ್ಮಿತವಾದ ಸೇತುವೆಯನ್ನು ಒಡೆಯಲು ಬೇಜವಾಬ್ದಾರಿ, ಜನವಿರೋಧಿ ಯುಪಿಎ ಸರ್ಕಾರ ಸಿದ್ಧವಾಗುತ್ತಿದೆ. ಅದೇ ಸಂದರ್ಭದಲ್ಲಿ ಭಾರತದಾದ್ಯಂತ ಹೊಸ ಸೇತುವೆಯೊಂದನ್ನು (ಉಳಿಸಲು ಅಲ್ಲ) ನಿರ್ಮಿಸಲು ಕಪಿಸೈನ್ಯವೊಂದು ಸಜ್ಜಾಗುತ್ತಿದೆ. ಈ ಹಿಂದೆ ರಾಮಮಂದಿರದ ವಿಚಾರದಲ್ಲಿ ಇಟ್ಟಿಗೆಗಳನ್ನು ತಲೆಯ ಮೇಲೆ ಹೊತ್ತು 'ಚಳವಳಿ' ನಡೆಸಿದ ಈ ರಾಮಸೇವಕರು ಇಂದು ಇಟ್ಟಿಗೆಗಳು ಅಥವಾ ಕಲ್ಲು ಏನೂ ಇಲ್ಲದೆ ಕೇವಲ ಎಲ್ಲೆಂದರಲ್ಲಿ ಬಚ್ಚಿಕೊಳ್ಳುವ ತಮ್ಮ ಬಾಲಗಳನ್ನು ಮಾತ್ರ ನೆಚ್ಚಿ ರಾಮಸೇತುವೆಯನ್ನು ನಿರ್ಮಿಸಲು ಹೊರಟಿದ್ದಾರೆ. ಬೀದಿಗಳಲ್ಲಿ ರಸ್ತೆ ತಡೆ ನಡೆಸುವ ಮೂಲಕ, 10-15 ಜನರು ರೈಲ್ವೆ ನಿಲ್ದಾಣದಲ್ಲಿ ಕ್ರಾಸಿಂಗ್‌ಗಾಗಿ ಬಂದು ನಿಲ್ಲುವ ರೈಲನ್ನು ಹತ್ತಿ ಫೋಟೋ ತೆಗೆಸಿಕೊಳ್ಳುವ ಮೂಲಕ, ಮೂರ್ಖ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ಅಂತಹ ಸೇತುವೆಯೊಂದನ್ನು ನಿರ್ಮಿಸಬಹುದೆಂದು ಈ ಕಪಿಗಳು ತಿಳಿದಂತಿದೆ. ಆದರೆ ಇದರಿಂದ ಸೇತುವೆ ನಿರ್ಮಿಸುವ ವಿಷಯ ಹೇಗೂ ಇರಲಿ, ಈ ದೇಶದ ಜನರ ನಡುವಿನ ಐಕ್ಯತೆಯ ಸೇತುವೆಯನ್ನು ಇನ್ನಷ್ಟು ಶಿಥಿಲಗೊಳಿಸಲು ಬೇಕಾದ್ದನ್ನೆಲ್ಲ ಮಾಡುವ ಪ್ರಯತ್ನವಂತೂ ನಡೆಯುತ್ತಿದೆ.

ಇದು ಸೇತುಸಮುದ್ರಂ ವಿಷಯ. ಭಾರತ ಮತ್ತು ಶ್ರೀಲಂಕಾ ನಡುವೆ, ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ತಮಿಳುನಾಡಿನ ರಾಮೇಶ್ವರಂ ಬಳಿಯ ಧನುಷ್ಕೋಟಿಯಿಂದ ಶ್ರೀಲಂಕಾದ ಜಾಫ್ನಾದವರೆಗೆ ಸಮುದ್ರದೊಳಗೆ ರಚಿತವಾಗಿರುವ ಸೇತುವೆಯನ್ನು ಒಡೆದು ಅಲ್ಲಿ ಕಾಲುವೆಯನ್ನು ನಿರ್ಮಿಸಲು ಸರ್ಕಾರ ಹೊರಟಿದೆ. ಈ ಯೋಜನೆಗೆ 'ಸೇತುಸಮುದ್ರಂ ಷಿಪ್ಪಿಂಗ್ ಕೆನಾಲ್ ಪ್ರಾಜೆಕ್ಟ್' ಎಂದು ಹೆಸರು. ಮೊದಲು ಈ ಯೋಜನೆಯ ಪ್ರಸ್ತಾಪ ಬಂದಿದ್ದು 1860ರಲ್ಲಿ ಕಮಾಂಡರ್ ಎ.ಡಿ.ಟೇಲರ್ ಎಂಬುವವರಿಂದ. ನಂತರ 60ರ ದಶಕದಲ್ಲಿ ಮತ್ತೊಮ್ಮೆ ಇದರ ಪ್ರಸ್ತಾಪ ಕೇಳಿ ಬಂತು. ಆ ನಂತರ 1994ರಲ್ಲಿ ಈ ಯೋಜನೆ ಮಾಡಬೇಕೆಂಬ ಮಾತು ಬಂತು. ಆ ಸಂದರ್ಭದಲ್ಲಿ ಇಂದು ಯೋಜನೆಯನ್ನು ವಿರೋಧಿಸುತ್ತಿರುವ ಅಣ್ಣಾ ಡಿಎಂಕೆ ಸಹ ಬೆಂಬಲಿಸಿತ್ತು. 1999ರಲ್ಲಿ ಎನ್‌ಡಿಎ ಸರ್ಕಾರವು ಅಧಿಕಾರದಲ್ಲಿದ್ದಾಗ, ಈ ಯೋಜನೆಗೆ ಚಾಲನೆ ಸಿಕ್ಕಿತು. ಈಗ ಒಂದು ವರ್ಷದ ಕೆಳಗೆ ಯೋಜನೆಯನ್ನು ಜಾರಿ ಮಾಡುವ ಕೆಲಸ ಪ್ರಾರಂಭವಾಗಿದೆ. ಅದರ ವಿರುದ್ಧ ಮೀನುಗಾರರು ಅಂದಿನಿಂದಲೂ ಪ್ರತಿಭಟನೆ ಮಾಡುತ್ತಲೇ ಬಂದಿದ್ದಾರೆ. 2005ರವರೆಗೂ ಪ್ರತಿಭಟನೆಯ ಚಕಾರವೇ ಎತ್ತದಿದ್ದ ಎನ್‌ಡಿಎ ಮತ್ತು ಸಂಘಪರಿವಾರವು ಈಗ ರಾಮಸೇತುವನ್ನು ಒಡೆಯುವುದರ ವಿರುದ್ಧ ದೇಶಾದ್ಯಂತ 'ಚಳವಳಿ'ಯನ್ನು ಕಟ್ಟಲು ಹೊರಟಿದೆ.

ರಾಮಸೇತು ನಿಜವೇ?

ಭಾರತ ಭೂಶಿರದ ಕೆಳಗೆ ರಾಮೇಶ್ವರಂ ಬಳಿಯ ಧನುಷ್ಕೋಟಿ ಮತ್ತು ಶ್ರೀಲಂಕಾದ ಜಾಫ್ನಾದ ನಡುವೆ ಸಮುದ್ರದಲ್ಲಿ ನೀರಿನ ಮಟ್ಟದಿಂದ ಸ್ವಲ್ಪವೇ ಕೆಳಗೆ, ಎರಡೂ ಭೂಭಾಗಗಳನ್ನು ಬೆಸೆಯುವ ಒಂದು ರಚನೆ ಅಸ್ತಿತ್ವದಲ್ಲಿದೆ. ಇದು ಆ ಭಾಗವನ್ನು ವೀಕ್ಷಿಸಿ ಬಂದಿರುವವರಿಗೆಲ್ಲರಿಗೂ ಚೆನ್ನಾಗಿ ಗೊತ್ತು. ನಾಸಾ ತೆಗೆದಿರುವ ಫೋಟೋದಲ್ಲೂ ಅದು ಸ್ಪಷ್ಟವಾಗಿ ಕಂಡುಬರುತ್ತದೆ. ರಾಮಾಯಣದ ಕಥೆ ಗೊತ್ತಿರುವವರೆಲ್ಲರಿಗೂ ಸೀತಾಪಹರಣ ಮಾಡಿದ್ದ ರಾವಣನನ್ನು ಮಣಿಸಲು ಹೊರಟ ರಾಮನಿಗೆ ನೆರವಾಗಲು ವಾನರಸೈನ್ಯವು ಸಮುದ್ರದಲ್ಲಿ ಸೇತುವೆಯೊಂದನ್ನು ಕಟ್ಟಿದ ಪ್ರಸಂಗವು ಬರುತ್ತದೆಯೆಂಬುದು ಚೆನ್ನಾಗಿ ಗೊತ್ತು. ಅಂತಹ ಸೇತುವೆಯನ್ನು ನಿರ್ಮಿಸಿದ್ದು ಭಾರತ ಮತ್ತು ಶ್ರೀಲಂಕಾದ ನಡುವೆಯೆಂಬುದೂ ಸಹ ಜನಪ್ರಿಯ ನಂಬಿಕೆಗಳಲ್ಲಿ ಒಂದು. ಆದರೆ ರಾಮಾಯಣವನ್ನು ವೈಜ್ಞಾನಿಕವಾಗಿ ಸಮಾಜಶಾಸ್ತ್ರೀಯ ಪರಿಕರಗಳಿಂದ ವಿಶ್ಲೇಷಣೆ ನಡೆಸಿದ ಹಲವು ಪರಿಣಿತರು ರಾವಣನಿದ್ದ ಪ್ರದೇಶವು ಈಗಿನ ವಿಂಧ್ಯಪರ್ವತಕ್ಕಿಂತ ಕೆಳಗಿರಲಿಲ್ಲವೆಂದು ಸ್ಪಷ್ಟವಾಗಿ ನುಡಿಯುತ್ತಾರೆ. ಅದರ ಬಗ್ಗೆ ಪ್ರತ್ಯೇಕ ಲೇಖನದಲ್ಲಿ ವಿವರಗಳನ್ನು ನೋಡಬಹುದು. ಅದೇನೇ ಇರಲಿ ಇಂದು ಯೋಜನೆಯನ್ನು ವಿರೋಧಿಸುತ್ತಿರುವವರು ಮುಂದಿಟ್ಟಿರುವ ಅಂಶಗಳು ಹಲವಿವೆ. ಆದರೆ ಸಂಘಪರಿವಾರಕ್ಕೂ ಇತರರಿಗೂ ಇರುವ ವ್ಯತ್ಯಾಸವೆಂದರೆ ಈ ಸೇತುವೆ ಮಾನವ (ವಾನರ?) ನಿರ್ಮಿತವಾದದ್ದು ಎಂದು ಆರೆಸ್ಸೆಸ್ ಹೇಳುತ್ತಿದೆ. ತಜ್ಞರು ಇಲ್ಲಾ ಇದು ನಿಸರ್ಗ ನಿರ್ಮಿತವಾದುದ್ದು ಎಂದು ಅಭಿಪ್ರಾಯ ಪಡುತ್ತಿದ್ದಾರೆ.



ಸೇತುಸಮುದ್ರಂ ಯೋಜನೆ ವಿರುದ್ಧ ಪ್ರತಿಭಟಿಸುತ್ತಿರುವ ಮೀನುಗಾರರು

ಡಾ. ವಾಸು ಮತ್ತು ದೀಪು

ಭಾರತ ಮತ್ತು ಶ್ರೀಲಂಕಾದ ಭೂಭಾಗಗಳ ನಡುವೆ ಇರುವ ಪಾಕ್ ಜಲಸಂಧಿಯ ಈ ಭಾಗದಲ್ಲಿ ಈಶಾನ್ಯ ಮತ್ತು ನೈರುತ್ಯ ಮಾರುತಗಳು ಅಪಾರ ಪ್ರಮಾಣದಲ್ಲಿ ಹೂಳನ್ನು ಮತ್ತು ಸುಣ್ಣಕಲ್ಲನ್ನು ತಂದು ಈ ಭಾಗದಲ್ಲಿ ಸಂಚಯಗೊಳಿಸುತ್ತದೆ. ಈ ಮೇಲ್ಕಂಡ ಭೂಭಾಗಗಳೆರಡರಲ್ಲೂ ನದೀ ಮುಖಜಭೂಮಿ ಇರುವುದೂ ಸಹ ಇಂತಹ ಪ್ರಕ್ರಿಯೆಗೆ ಮತ್ತಷ್ಟು ಇಂಬು ಕೊಡುತ್ತದೆ. ಈ ರೀತಿ ಸಂಚಯಗೊಂಡ ಹೂಳು ಮತ್ತು ಸುಣ್ಣಕಲ್ಲು ಆ ಭಾಗದಲ್ಲಿ ಹವಳದ ದಿಬ್ಬದ ರಚನೆಗೆ ಕಾರಣವಾಗುತ್ತದೆ. ಪ್ರತಿದಿನ ನಡೆಯುವ ಈ ಕ್ರಿಯೆಯು ವರ್ಷವೊಂದಕ್ಕೆ ಸುಮಾರು 6000 ಕ್ಯೂಬಿಕ್ ಮೀಟರ್‌ಗಳಷ್ಟು ಹವಳದ ದಿಬ್ಬಕ್ಕೆ (ಕೋರಲ್ ರೀಫ್) ಮಣ್ಣು ಮತ್ತು ಸುಣ್ಣಕಲ್ಲನ್ನು ಸೇರಿಸುವುದನ್ನು ಕಳೆದ 1,75,000 ವರ್ಷಗಳಷ್ಟು ಹಿಂದಿನಿಂದ ನಡೆದು ಬಂದಿದೆ. ಈ ರೀತಿಯ ಹವಳದ ದಿಬ್ಬದ ಸಂಚಯವು ಹೀಗೇ ಮುಂದುವರೆದರೆ ಇನ್ನು 400 ವರ್ಷಗಳಲ್ಲಿ ಭಾರತ ಮತ್ತು ಶ್ರೀಲಂಕಾಗಳ ನಡುವೆ ಒಂದು ಭೂಭಾಗವೇ ನಿರ್ಮಿತವಾಗುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

ಆದ್ದರಿಂದಲೇ ಸೇತುಸಮುದ್ರ ಯೋಜನೆಯನ್ನು ಮಾಡಿದ್ದೇ ಆದಲ್ಲಿ ಪ್ರತಿವರ್ಷವೂ ಇಲ್ಲಿ ಮತ್ತೆ ಮತ್ತೆ ಸಂಗ್ರಹವಾಗುವ ಮಣ್ಣನ್ನು ಎತ್ತಲು 600 ಕೋಟಿ ರೂಪಾಯಿಗಳನ್ನು ವ್ಯಯಿಸುತ್ತಾ ಇರಬೇಕು ಎಂದು ಯೋಜನೆಯಲ್ಲಿ ಹೇಳಲಾಗಿದೆ. ಇವೆಲ್ಲವೂ ಈ ಸೇತುವೆಯು ನಿರ್ಮಿತವಾಗಿರುವುದು ಇಂತಹ ಒಂದು ನೈಸರ್ಗಿಕ ಕ್ರಿಯೆಯ ಕಾರಣದಿಂದ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಆದರೆ ಸಂಘಪರಿವಾರದ ಕಪಿ ಸೈನ್ಯ ಮಾತ್ರ ಅದನ್ನು ತಮ್ಮ ಪೂರ್ವಜನ್ಮದ ಸ್ಮೃತಿಯ ಕಾರಣದಿಂದಲೋ ಎಂಬಂತೆ ಅದು ಮಾನವ ನಿರ್ಮಿತವಾದುದು ಎಂದು ಹೇಳುತ್ತಾ ಬರುತ್ತಿದೆ. ಈ ಸೇತುವೆಯನ್ನು ಆಡಮ್ಸ್ ಬ್ರಿಡ್ಜ್ ಎಂದೂ ಕರೆಯಲಾಗುತ್ತದೆ.

ಏನಿದು ಸೇತು ಸಮುದ್ರ

ಈ ಸೇತುವೆಯು ಇರುವ ಕಾರಣದಿಂದಲೇ ಪಾಕ್ ಜಲಸಂಧಿಯಲ್ಲಿ ಹಡಗುಗಳು ಸಂಚರಿಸಲು ಸಾಧ್ಯವಿಲ್ಲ. ಇದರಿಂದಾಗಿ ಭಾರತದ ಪೂರ್ವ ಮತ್ತು ಪಶ್ಚಿಮ ತೀರಗಳ ನಡುವೆ ಸಂಚರಿಸುವ ಹಡಗುಗಳು ಶ್ರೀಲಂಕಾವನ್ನು ಸುತ್ತಿ ಓಡಾಡಬೇಕಾಗುತ್ತದೆ. ಹಾಗಾಗಿ ಸೇತುವೆಯನ್ನು 12 ಮೀ.ನಷ್ಟು ಆಳಕ್ಕೆ ಸುಮಾರು 30 ಕಿ.ಮೀ.ನಷ್ಟು ದೂರ ಅಗೆದು ಹಡಗುಗಳು ಸಂಚರಿಸಲು ಅನುವು ಮಾಡಿಕೊಡುವ ಯೋಜನೆಯೇ ಸೇತು ಸಮುದ್ರ ಯೋಜನೆಯಾಗಿದೆ. ಇದರಿಂದ 30 ಗಂಟೆಗಳಷ್ಟು ಸಮಯವೂ ಮತ್ತು ವಾರ್ಷಿಕ ಕೋಟ್ಯಾಂತರ ಹಣವೂ ಉಳಿತಾಯವಾಗುತ್ತದೆ ಎಂದು ಸರ್ಕಾರವು ಹೇಳುತ್ತಿದೆ. ಇವೆರಡೂ ಸಹ ಸುಳ್ಳು ಎಂಬುದನ್ನು ಈಗಾಗಲೇ ಯೋಜನೆಯನ್ನು ವಿರೋಧಿಸುತ್ತಿರುವ ಸಂಘಟನೆಗಳು ಹೇಳುತ್ತಿವೆ. ಹಾಗಿದ್ದ ಮೇಲೆ ಇದರ ಹಿಂದಿರುವ ಹಿತಾಸಕ್ತಿಯಾದರೂ ಏನು?

ಅಮೆರಿಕಾದ ಹಿತಾಸಕ್ತಿ

ಭಾರತವನ್ನು ತಮ್ಮ ರಫ್ತು ಉತ್ಪಾದನಾ ವಲಯವನ್ನಾಗಿ ಮಾಡಿಕೊಳ್ಳಲು [illegible]

[illegible]

ಒಂದು ಲಕ್ಷ ಎಪ್ಪತ್ತೈದು ಸಾವಿರಕ್ಕೆ ಎಷ್ಟು ಸೊನ್ನೆಗಳು?

ಸುಮಾರು 1,75,000 ವರ್ಷಗಳ ಹಿಂದೆ ಇಂದಿನ ಭಾರತ ಭೂಖಂಡವು ಸಮುದ್ರದಲ್ಲಿ ಚಲಿಸುತ್ತಾ ಬಂದು, ಇಂದಿನ ಚೀನಾದ ಭೂಭಾಗಕ್ಕೆ ಡಿಕ್ಕಿ ಹೊಡೆದದ್ದು, ಅದರ ಫಲವಾಗಿಯೇ ಹಿಮಾಲಯ ಪರ್ವತಗಳೂ ಸೃಷ್ಟಿಯಾದದ್ದು ವೈಜ್ಞಾನಿಕ ಸತ್ಯ. ಆಗಿನಿಂದಲೇ ಭಾರತ ಮತ್ತು ಶ್ರೀಲಂಕಾ ಭೂಭಾಗಗಳ ನಡುವಿನ ಜಲಸಂಧಿಯಲ್ಲಿ ಹವಳದ ದಿಬ್ಬ ರಚಿತವಾಗಲು ಪ್ರಾರಂಭವಾಯಿತು. ಈ ಅಂಕಿಗೆ ಒಂದು ಸೊನ್ನೆಯನ್ನು ಸೇರಿಸಿರುವ ಕಪಿ ಸೈನ್ಯವು 17,50,000 ವರ್ಷಗಳ ಹಿಂದೆ ಶ್ರೀರಾಮನ ಸೇನೆಯು ಸದರಿ ಸೇತುವೆಯನ್ನು ನಿರ್ಮಿಸಿತ್ತು ಎಂದು ಹೇಳುತ್ತಿದೆ. ರಾಮನನ್ನು ಐತಿಹಾಸಿಕ ಪುರುಷ ಎಂತಲೂ, ತಾವು ಹೇಳುತ್ತಿರುವುದೆಲ್ಲಾ ವೈಜ್ಞಾನಿಕವಾಗಿಯೂ ದೃಢಪಟ್ಟಿದೆ ಎಂದು ಹೇಳುವ ಇವರು ಇಂದಿನ ಮಾನವ-ನಿಯಾಂಡರ್ ಥಾಲ್, ಹೋಮೋಸೇಪಿಯನ್ಸ್-ವಿಕಾಸಗೊಂಡಿದ್ದು ಕೇವಲ 50,000 ವರ್ಷಗಳ ಹಿಂದೆ ಎಂಬ ಸಾಮಾನ್ಯ ಜ್ಞಾನವನ್ನೂ ಹೊಂದಿಲ್ಲ.




ರಾಮಸೇತುವೋ ಗ್ರಾಮಸೇತುವೋ

ಇಡೀ ದೇಶದಲ್ಲಿ ಸಾವಿರಾರು ಗ್ರಾಮಸೇತುಗಳು ಬೇಕಾಗಿದೆ. ಜನರು ಸಣ್ಣ ಹಳ್ಳಗಳನ್ನು, ನದಿಗಳನ್ನು ದಾಟಲು ಸೇತುವೆಗಳಿಲ್ಲದೆ ಹತ್ತಾರು ಮೈಲಿ ಸುತ್ತಿ ಹೋಗಬೇಕಿರುವ ಸಂದರ್ಭದಲ್ಲಿ ಎಂದಿಗೂ ಹೋರಾಟವನ್ನು ನಡೆಸದ ಈ ಕೋಮುವಾದಿಗಳು ರಾಮಸೇತುವಿನ ಹೆಸರಿನಲ್ಲಿ ಚಳವಳಿಯನ್ನೂ ಮಾಡುತ್ತಾರೆ, ಚಳವಳಿಯ ಹೆಸರಿನಲ್ಲಿ ಹಣವನ್ನೂ ಮಾಡುತ್ತಾರೆ. ಕೋಟಿ ಕೋಟಿ ರಾಮರಿಗೆ ಗುಡಿಸಲಿಲ್ಲದ ದೇಶದಲ್ಲಿ ರಾಮಮಂದಿರಕ್ಕಾಗಿ ಇಟ್ಟಿಗೆ ಹೊತ್ತವರು [illegible]?

ರಾಮನ ಹೆಸರಲ್ಲಿ ಮೀನುಗಾರರನ್ನು ಕೊಲ್ಲುವ ಕಪಿಗಳ ಸಂಚು

(11ನೇ ಪುಟದಿಂದ)

ಕಂಪೆನಿಗಳು ತಮ್ಮ ಅನುಕೂಲಕ್ಕಾಗಿ ಈ ಯೋಜನೆಯನ್ನು ಮಾಡಬೇಕೆಂದು ಬಯಸುತ್ತಿವೆ. ಇದಲ್ಲದೆ ಭಾರತ ಮತ್ತು ಅಮೆರಿಕಾಗಳು ಜಂಟಿಯಾಗಿ ಹೊಂದಿರುವ ಮಿಲಿಟರಿ ಹುನ್ನಾರಗಳಿಗೂ ಸಹ ಈ ಜಲಮಾರ್ಗವು ಅಗತ್ಯವಾಗಿದೆ. ಮೊದಲಿಂದಲೂ ಸಹ ಸೇತುಸಮುದ್ರ ಯೋಜನೆಯನ್ನು ರೂಪಿಸುವಲ್ಲಿ ಭಾರತದ ಮಿಲಿಟರಿಯು ವಹಿಸಿರುವ ಪಾತ್ರವು ಈ ಅಂಶವನ್ನು ಸಾಬೀತುಪಡಿಸುತ್ತದೆ. 1997ರಲ್ಲಿ ಯೋಜನೆಯ ಕಾರ್ಯಸಾಧ್ಯತೆಯನ್ನು ಪರಿಶೀಲಿಸಲು ಸರ್ಕಾರವು ಕೇಳಿದ್ದು ರಕ್ಷಣಾ ಇಲಾಖೆಯನ್ನೇ. ಮೊಟ್ಟ ಮೊದಲಬಾರಿಗೆ ಈ ಯೋಜನೆಯನ್ನು 3 ವರ್ಷಗಳೊಳಗೆ ಮುಗಿಸುತ್ತೇವೆಂದು 99ರಲ್ಲಿ ಘೋಷಿಸಿದ್ದು ಅಂದಿನ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡಿಸ್.




ಅರುಣ್ ಜೈಟ್ಲೆ

[illegible]

ಮೇಲೆ ಹೇಳಿದಂತೆ ಜಾರ್ಜ್ ಫರ್ನಾಂಡೀಸ್ ಯೋಜನೆಯನ್ನು ಪ್ರಕಟಿಸಿದ ಮೇಲೆ, ಅಂದಿನ ಪ್ರಧಾನಮಂತ್ರಿ ವಾಜಪೇಯಿಯವರು ಈ ಯೋಜನೆಗೆ ತಮ್ಮ ಸರ್ಕಾರವು ಬದ್ಧವಾಗಿದೆಯೆಂದು ಖಚಿತ ಭರವಸೆ ನೀಡಿದರು. 2000-01ರಲ್ಲಿ ಹಣಕಾಸು ಮಂತ್ರಿ ಯಶವಂತ ಸಿನ್ಹಾ ತಮ್ಮ ಬಜೆಟ್‌ನಲ್ಲಿ 4.8 ಕೋಟಿ ಹಣವನ್ನು ಯೋಜನೆಯ ಕಾರ್ಯಸಾಧ್ಯತೆಯ ಅಧ್ಯಯನಕ್ಕೆ ನೀಡಿದರು. ಅದರ ನಂತರ ಈ ಯೋಜನೆಯನ್ನು ಪರೀಕ್ಷಿಸಿ ಅದನ್ನು ಅನುಮೋದಿಸಿದವರಲ್ಲಿ ಮೂರು ಜನ ಬಜೆಪಿಯ ಸಚಿವರಿದ್ದಾರೆ: ಅರುಣ್ ಜೈಟ್ಲಿ, ವಿ.ಪಿ.ಗೋಯೆಲ್ ಮತ್ತು ಶತ್ರುಘ್ನ ಸಿನ್ಹಾ.

ಇಷ್ಟೆಲ್ಲಾ ಇದ್ದು, ಈಗ ಸಂಘಪರಿವಾರ ಮತ್ತು ಬಜೆಪಿಯೂ ಸೇರಿದಂತೆ ಅದರ ಇತರ ಅಂಗಸಂಸ್ಥೆಗಳು ಈ ಯೋಜನೆಯನ್ನು ವಿರೋಧಿಸುತ್ತಿರುವುದೇಕೆ? ಶ್ರೀ ರಾಮನು 'ಕಟ್ಟಿದ' ಸೇತುವೆಯಿದು ಎಂದು ಈ ರಾಮ ಭಕ್ತರಿಗೆ ಆಗ ಹೊಳೆಯಲಿಲ್ಲವೇ? ಅಥವಾ ಈ ನಕಲಿ ದೇಶಭಕ್ತರ ಅಮೆರಿಕಾದ ಗುಲಾಮಗಿರಿ ಆಗ ರಾಮ ಭಕ್ತಿಗಿಂತ ಹೆಚ್ಚಾಗಿತ್ತೇ?



ವಿ.ಪಿ.ಗೋಯೆಲ್

ಇದರ ಜೊತೆಗೆ ಇಂದು ಈ ಯೋಜನೆಯನ್ನು ವಿರೋಧಿಸುವ ಸಂದರ್ಭದಲ್ಲಿ ಮೀನುಗಾರರ ಆರ್ಥಿಕ ಭದ್ರತೆ, ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಇತ್ಯಾದಿಗಳ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುತ್ತಿರುವ ಇವರಿಗೆ ತಾವೇ ಯೋಜನೆಯನ್ನು ರೂಪಿಸುವಾಗ ಮೀನುಗಾರರ ಹಿತ ಎಲ್ಲಿ ಮಾಯವಾಗಿತ್ತು?

[illegible]

ಈ ಯೋಜನೆಯ ಕಾರ್ಯಸಾಧ್ಯತೆಯ ಬಗ್ಗೆಯೇ ಹಲವು ಪ್ರಶ್ನೆಗಳಿವೆ. ಸರ್ಕಾರವು ಹೇಳುತ್ತಿರುವ ವಾಣಿಜ್ಯ ಹಿತಾಸಕ್ತಿಯು ಈಡೇರುವುದಿಲ್ಲ ಏಕೆಂದರೆ 12 ಮೀ ಆಳದಲ್ಲಿ ದೊಡ್ಡ ಹಡಗುಗಳು ಸಂಚರಿಸಲಾಗುವುದಿಲ್ಲ; ವೇಗ ಇಲ್ಲಿ ಬಹಳ ನಿಧಾನವಾಗುತ್ತದೆ ಹಾಗೂ ಇಂಧನದ ವೆಚ್ಚ ಹೆಚ್ಚು ಕಡಿಮೆ ಅಷ್ಟೇ ಆಗುತ್ತದೆ ಎಂಬ ಅಂಶಗಳನ್ನು ಸರ್ಕಾರವು ಮರೆಮಾಚುತ್ತಿದೆ. ಆದ್ದರಿಂದಲೇ ಸೇತುಸಮುದ್ರ ಯೋಜನೆಯ ಹಿಂದಿರುವುದು ಮಿಲಿಟರಿ ಹಿತಾಸಕ್ತಿ ಎಂಬ ಅಂಶಕ್ಕೆ ಮತ್ತಷ್ಟು ಒತ್ತು ಬೀಳುತ್ತದೆ. ಜೊತೆಗೆ ಹತ್ತಿರದ ತೀರದಲ್ಲಿ ದೊಡ್ಡ ಪ್ರಮಾಣದಲ್ಲಿ ಅಣು ಇಂಧನವಾಗಿ ಬಳಕೆಯಾಗುವ ಥೋರಿಯಂ ನಿಕ್ಷೇಪಗಳಿರುವುದು ಸರ್ಕಾರದ ಉದ್ದೇಶಗಳ ಬಗ್ಗೆ ಮತ್ತಷ್ಟು ಅನುಮಾನಗಳನ್ನು ಮೂಡಿಸಿದೆ.

ಕಾರ್ಯಸಾಧ್ಯತೆಯ ಪ್ರಶ್ನೆ ಏನೇ ಇದ್ದರೂ ಸಹ, ಈ ಯೋಜನೆಯು ಹಲವು ಗಂಭೀರ ಅಪಾಯಗಳನ್ನು ತಂದೊಡ್ಡುವುದಂತೂ ನಿಜ. ಮೊದಲನೆಯದಾಗಿ, ಇದು ಎರಡು ಹಳ್ಳಿಗಳ ಮೀನುಗಾರರನ್ನು ನೇರವಾಗಿ ಒಕ್ಕಲೆಬ್ಬಿಸುವುದಕ್ಕಿಂತ ಹೆಚ್ಚಾಗಿ ಆ ಇಡೀ ಭಾಗದ ಮೀನುಗಾರರ ಆರ್ಥಿಕತೆಯ ಮೇಲೆ ತೀವ್ರವಾದ ಪರಿಣಾಮವನ್ನು ಬೀರುತ್ತದೆ. ಹವಳದ ದಿಬ್ಬಗಳಲ್ಲಿ ಸಂತಾನವೃದ್ಧಿ ಮಾಡುವ ಮೀನುಗಳ ಸಂಖ್ಯೆಯಲ್ಲಿ ಗಣನೀಯ ಕುಸಿತವುಂಟಾಗುತ್ತದೆ. ಎರಡನೆಯದಾಗಿ, ಇಲ್ಲಿರುವ ಹಲವಾರು ಪ್ರಭೇದದ ಜೀವಿಗಳು ನಾಶವಾಗುತ್ತವೆ. ಈ ಹವಳದ ದಿಬ್ಬವನ್ನು ಒಡೆದರೆ ಅದು ಭೂಮಿಯಲ್ಲಿ ಉಂಟುಮಾಡುವ ಪರಿಣಾಮವು ಭೂಕಂಪ ಮತ್ತು ಸುನಾಮಿಗಳಿಗೆ ಎಡೆ ಮಾಡಿಕೊಡುತ್ತದೆ. ಇದಲ್ಲದೆ ಇನ್ನೂ ಹತ್ತು ಹಲವು ದುಷ್ಪರಿಣಾಮಗಳಿರುವ ಯೋಜನೆಯನ್ನು ವಿರೋಧಿಸಲೇಬೇಕಿದೆ.

ಅಯ್ಯೋ ರಾಮ!

ಮೀನುಗಾರರ ಬೆಂಬಲಕ್ಕೆ ನಿಲ್ಲದ ಚಡ್ಡಿಗಳು

ಇಲ್ಲಿನ ಮೀನುಗಾರರು ಹತ್ತು ಹಲವು ಸಂಘಟನೆಗಳ ಮೂಲಕ, ಮೀನುಗಾರರ ಪಂಚಾಯಿತಿಗಳ ಮೂಲಕ, ತೀರ ಪ್ರದೇಶದ ಕ್ರಿಯಾ ವೇದಿಕೆಯ ಮೂಲಕ ಯೋಜನೆಯನ್ನು ಪ್ರಕಟಿಸಿದಂದಿನಿಂದ (2000) ಪ್ರತಿಭಟಿಸುತ್ತಾ ಬಂದಿದ್ದಾರೆ. ಸರ್ಕಾರವು ನಡೆಸಿದ ಪಬ್ಲಿಕ್ ಹಿಯರಿಂಗ್‌ಗಳಲ್ಲಿ ತಮ್ಮ ವಿರೋಧವನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಒಟ್ಟು 5 ಸಾರಿ ತಮ್ಮ ಕೆಲಸ ಕಾರ್ಯಗಳನ್ನು ಬಂದ್ ಮಾಡಿ ಪ್ರತಿಭಟನೆ, ಸಮಾವೇಶ ನಡೆಸಿ ಯೋಜನೆಯ ಉದ್ಘಾಟನೆ ನಡೆದಾಗಲೂ ಪ್ರತಿಭಟಿಸಿದ್ದಾರೆ. ಇಷ್ಟಲ್ಲದೆ ಇವರ ಪ್ರತಿಭಟನೆಯನ್ನು ಮೊದಲು ನೌಕಾಪಡೆ, ಆನಂತರ ತಮಿಳುನಾಡು ಪೊಲೀಸರು, ಅವರೊಂದಿಗೆ ಡಿಎಂಕೆಯ ಗೂಂಡಾಪಡೆ ಅತೀವ ದಮನಕಾರಿ ವಿಧಾನಗಳಿಂದ ಹತ್ತಿಕ್ಕಲು ಪ್ರಯತ್ನಿಸಿದವಾದರೂ ತಮ್ಮ ಪ್ರತಿರೋಧವನ್ನು ಇಂದಿಗೂ ಮುಂದುವರಿಸುತ್ತಲೇ ಇದ್ದಾರೆ.



ಶತ್ರುಘ್ನ ಸಿನ್ಹಾ


ಆದರೆ ಈ ಯಾವ ಪ್ರತಿಭಟನೆಗಳಲ್ಲೂ ಬಜೆಪಿಯಾಗಲೀ, ಸಂಘಪರಿವಾರವಾಗಲೀ ಭಾಗವಹಿಸಲಿಲ್ಲವೆಂಬುದನ್ನು ಗಮನಿಸಬೇಕು. ಅವರು ಇದನ್ನೊಂದು ವಿಷಯವೆಂದು ಪರಿಗಣಿಸಿದ್ದೇ ಯುಪಿಎ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರವೇ. ಯಾವ ಯೋಜನೆಗೆ ತಾನೇ ಅಸ್ತು ಎಂದಿತ್ತೋ ಅದನ್ನೇ ಈಗ ರಾಮಭಕ್ತಿ, ಶ್ರದ್ಧೆ ನಂಬಿಕೆಗಳ ಹೆಸರಿನಲ್ಲಿ ವಿರೋಧಿಸುತ್ತಿದೆ. ಇದಕ್ಕಿಂತ ಮಜಬೂತಾದ ಪ್ರಹಸನ ಇನ್ನೊಂದಿದ್ದೀತೆ?!

ಚಡ್ಡಿಗಳ ಹುನ್ನಾರ ಬಯಲಾಗಲಿ

ಸಂಘಪರಿವಾರದ ಉದ್ದೇಶವೇನೇ ಇರಲಿ, ಈ ಯೋಜನೆಯು ಜನವಿರೋಧಿ ಮತ್ತು ಪರಿಸರ ವಿರೋಧಿಯಾಗಿರುವುದರಿಂದ ಏನೇ ಆಗಲಿ, 'ರಾಮಸೇತು' ಉಳಿಯಲಿ ಎಂದು ಕೆಲವರು ಹೇಳುತ್ತಾರೆ. ಆದರೆ ಅದು ಅಷ್ಟು ಸುಲಭವಲ್ಲ, ಮೊದಲನೆಯದಾಗಿ ಅವರ ಉದ್ದೇಶ ಇದನ್ನು ಉಳಿಸುವುದಲ್ಲ; ಬದಲಿಗೆ ದೇಶಾದ್ಯಂತ ಉನ್ಮಾದವನ್ನು ಹಬ್ಬಿಸುವುದು ಮತ್ತು ಅದರ ಮುಖಾಂತರ ತಮ್ಮ ದುಷ್ಟ ಅಜೆಂಡಾವನ್ನು ಈಡೇರಿಸಿಕೊಳ್ಳುವುದೇ ಆಗಿದೆ. ಎರಡನೆಯದಾಗಿ ಅವರು ರಾಮಸೇತು ಉಳಿಯಲಿ ಎಂದು ಹೇಳುತ್ತಿರುವಾಗಲೇ ಈ ದೇಶದ ಎಲ್ಲಾ ಯೋಜನೆಗಳು ಮತ್ತು ನೀತಿಗಳ ಫಲಾನುಭವಿಗಳೂ, ನಿರೂಪಕರೂ ಆಗಿರುವ ಅಮೆರಿಕಾದ ಖೂಳ ಕಂಪೆನಿಗಳು ಮತ್ತು ಭಾರತದ ದೊಡ್ಡ ಬಂಡವಾಳಶಾಹಿಗಳನ್ನು ಸಂತೃಪ್ತಿಯಿಂದಿಡಲು ಇದಕ್ಕಿಂತ ಅಪಾಯಕಾರಿಯಾದ ಪರ್ಯಾಯವನ್ನು ಮುಂದಿಡುತ್ತಿದ್ದಾರೆ. ಹಾಗಾಗಿ ನಾವಿಂದು ಹೇಳಬೇಕಿರುವುದು, ಸೇತುಸಮುದ್ರಂ ಯೋಜನೆ ರದ್ದಾಗಲಿ, ಸಂಘಪರಿವಾರವು ಹುನ್ನಾರವು ಬಯಲಾಗಲಿ ಎಂಬುದೇ ಆಗಿದೆ.

ಮೀನುಗಾರರು ಮತ್ತು ಪರಿಸರ ವಿರೋಧಿ ಕಪಿಗಳು

ರಾಮಸೇತುವನ್ನು ಉಳಿಸಲು ಹೊರಟಿರುವ ಈ ಜನ, ಅಷ್ಟಕ್ಕೆ ಸುಮ್ಮನಾಗಿದ್ದರೆ ಇವರ ನಿಜಬಣ್ಣ ಸಂಪೂರ್ಣ ಗೊತ್ತಾಗುತ್ತಿರಲಿಲ್ಲ, ಅಮೆರಿಕವನ್ನಾಗಲೀ, ಈ ದೇಶದ ದೊಡ್ಡ ಬಂಡವಾಳಶಾಹಿಗಳನ್ನಾಗಲೀ ವಿರೋಧಿಸಲು ಸಾಧ್ಯವಿಲ್ಲದವರು ಇಡೀ ಯೋಜನೆಯನ್ನು ಹೇಗೆ ತಾನೇ ಬೇಡವೆಂದಾರು? ಹಾಗಾಗಿಯೇ ಅವರು ಇದೇ ಯೋಜನೆಯನ್ನು ಸ್ವಲ್ಪ ಪಕ್ಕದಲ್ಲಿ ಅಂದರೆ ರಾಮೇಶ್ವರಂ ಮತ್ತು ಪಾಂಬನ್ ನಡುವೆ ಇರುವ ಭೂಮಿಯನ್ನು ಕೊರೆದು ಮಾಡಬೇಕೆಂಬ ಬದಲಿ ಪ್ರಸ್ತಾಪವನ್ನಿಟ್ಟಿದ್ದಾರೆ. ಅಂದರೆ ರಾಮಸೇತುವೆಂದು ಹೇಳಲಾಗುತ್ತಿರುವ ಹವಳದ ದಿಬ್ಬ ಉಳಿದು ಪಕ್ಕದಲ್ಲಿನ ಭೂಮಿ ಮತ್ತು ಹವಳದ ದಿಬ್ಬವನ್ನು ಒಡೆದು ಮಾಡುವ ಸೇತುವೆ. ಪರಿಸರದ ದೃಷ್ಟಿಯಿಂದ ಇದು ಈಗಿನದಷ್ಟೇ ಅಪಾಯಕಾರಿಯಾದುದು. ಜೊತೆಗೆ ಇಲ್ಲಿ ಭೂಮಿಯನ್ನು ಒಡೆದು ಮಾಡಲಾಗುವುದರಿಂದ ಮೀನುಗಾರರನ್ನು ದೊಡ್ಡ ಸಂಖ್ಯೆಯಲ್ಲಿ ಒಕ್ಕಲೆಬ್ಬಿಸಿ ಸ್ಥಳಾಂತರ ಮಾಡಬೇಕಾಗುತ್ತದೆ. ಹಾಗಾಗಿಯೇ ಸಂಘಪರಿವಾರದ ನಿಜವಾದ ಘೋಷಣೆಯು ರಾಮಸೇತು ಉಳಿಯಲಿ ಎಂಬುದಲ್ಲ, ಬದಲಿಗೆ, ರಾಮಸೇತು ಉಳಿಯಲಿ, ಮೀನುಗಾರರು ಅಳಿಯಲಿ, ಪರಿಸರ ನಾಶವಾಗಲಿ ಎಂದಾಗಿದೆ.



ನಂಬಿಕೆಯನ್ನೇ ಆಧರಿಸಿದ್ದು ಚರಿತ್ರೆಯಲ್ಲ!

(10ನೇ ಪುಟದಿಂದ)

ಗೊಂಡಾಗ, ಆ ಪ್ರಾಂತ್ಯಗಳ ಕಥೆಯಾಗಿಯೂ ಅಳವಡಿಕೆಯಾಯಿತು.

ರಾಜ್ಯಗಳು, ರಾಜರ ಆಸ್ಥಾನಗಳು, ಆಳ್ವಿಕೆಯ ಕ್ರಮಗಳು ಬೇರೆ ಬೇರೆ ಪ್ರದೇಶಗಳಲ್ಲಿ ವಿಸ್ತರಣೆಯಾಗತೊಡಗಿದ ಕ್ರಮದಲ್ಲೇ ರಾಮಾಯಣ, ಮಹಾಭಾರತಗಳೂ ಕೂಡ ವ್ಯಾಪಕಗೊಂಡವು. ಈ ಹಂತದಲ್ಲಿ ಮೊದಲು ಗಂಗಾ ತಟದಿಂದ ಹಿಡಿದು ವಿಂಧ್ಯ ಪರ್ವತ ಸಾಲಿನವರೆಗೆ ಕಾರ್ಯಕ್ಷೇತ್ರ ಹೊಂದಿದ್ದ ರಾಮಾಯಣ ಕಥೆಗೆ ಅಯೋಧ್ಯೆಯಿಂದ ಇಂದಿನ ಸಿಂಹಳದವರೆಗೂ ತನ್ನ ಕುರುಹು ಪರಂಪರೆಯನ್ನು ಅಚ್ಚೊತ್ತಿತ್ತು.

ಅಂದಿನ ರಾವಣನ ಲಂಕೆಯಂತದ್ದೇ ನಡುಗಡ್ಡೆಯಾದ ಸಿಂಹಳ, ರಾವಣನ ಜನಸಮುದಾಯಕ್ಕೆ ಸಮೀಪವರ್ತಿಗಳಾದ ದ್ರಾವಿಡ ಕಪ್ಪು ಜನರನ್ನು ಹೊಂದಿದ್ದ ಸಮಾಜ, ಅಲ್ಲೂ ಸಂಭವಿಸಿರಬಹುದಾದ ಆರ್ಯ-ಅನಾರ್ಯ ಸಂಘರ್ಷ ಮುಂತಾದವುಗಳು ತಮ್ಮಲ್ಲೂ ರಾಮಾಯಣ ಸಂಭವಿಸಿದೆ ಎಂಬ ನಂಬುಗೆಗಳನ್ನೂ, ಆ ನಂಬುಗೆಗಳಿಗೆ, ಪುರಾಣಗಳಿಂದ ಎರವಲು ಪಡೆದ ನಾಮವಾಚಕಗಳನ್ನೂ ಬಳಸಿಕೊಂಡಿವೆ.

ಇಂದಿನ ರಾಮ ಸೇತು ಎಂಬುದು ಒಂದು ಕಾಲದಲ್ಲಿ ನಿಸರ್ಗ ಘಟನೆಗಳಿಂದ ನಿರ್ಮಿತವಾದುದ್ದಿರಬಹುದು ಅಥವಾ ಮನುಷ್ಯರೇ ತಮ್ಮ ಜೀವನ ವಿಸ್ತರಣೆಗಾಗಿ ನಿರ್ಮಿಸಿದ ಸೇತುವಿರಬಹುದು ಅಥವಾ ಅಲ್ಲಿ ಆಗಿಲ್ಲದಿದ್ದ ಸಮುದ್ರ ಈಗ ಏರ್ಪಟ್ಟು ಆ ಭೂಭಾಗವನ್ನು ಮುಳುಗಿಸಿರಬಹುದು. ಇದೆಲ್ಲಾ ಸಾವಿರಾರು ವರ್ಷಗಳ ನೈಸರ್ಗಿಕ ವಿದ್ಯಮಾನದ ಚಮತ್ಕಾರ. ಇಂತಹ ವಿಷಯವನ್ನು ವಾಲ್ಮೀಕಿ ರಾಮಾಯಣದ ರಾಮನಿಗೂ, ಆತನ ವಾನರ ಸೈನ್ಯಕ್ಕೂ ಜೋಡಿಸಿ ಕಲ್ಪನೆಗಳನ್ನು ಹೆಣೆದಿದ್ದು ದಕ್ಷಿಣ ಭಾರತೀಯ ಭಕ್ತಿ ಕವಿಗಳು. ಕಂಬ ರಾಮಾಯಣದ ಕಥೆ ಅಯೋಧ್ಯಾ ರಾಮನ ಕಥಾಹಂದರವನ್ನೇ ಬಳಸಿಕೊಂಡರೂ, ಅದನ್ನು ಸ್ಥಳೀಯಗೊಳಿಸುವ, ಸಮಕಾಲೀನಗೊಳಿಸುವ ಕವಿಯ ಹಂಬಲದಲ್ಲಿ ದಕ್ಷಿಣದಲ್ಲಿದ್ದ ಸಿಂಹಳವೇ ಶ್ರೀಲಂಕಾ ಆಗಿ ವರ್ಣಿತವಾಗುತ್ತದೆ. ಇರದೇ ಇದ್ದ ಐತಿಹಾಸಿಕತೆಯನ್ನು ಈ ಐತಿಹ್ಯಗಳು ರೂಪಿಸುತ್ತವೆ. ಹಾಗಂತ ಅದನ್ನು ಚಾರಿತ್ರಿಕ ಸಂಗತಿ ಎಂದು ಆದಳಿತಾತ್ಮಕವಾಗಿ ಭಾವಿಸುವುದು ಮಾತ್ರ ಮೂರ್ಖತನವಾಗುತ್ತದೆ.

ತರಾಸು 'ಹಂಸಗೀತೆ' ಎಂಬ ಕಾದಂಬರಿಯೊಂದನ್ನು ಬರೆದರು. ಅದು ಚಲನಚಿತ್ರವೂ ಆಯಿತು. ಅದರಲ್ಲಿ ವೆಂಕಟಸುಬ್ಬಯ್ಯ ಅಂತಲೋ ಏನೋ ಒಬ್ಬ ಸಂಗೀತಗಾರನ ಜೀವನವನ್ನು ಚಿತ್ರಿಸಲಾಗಿದೆ. ಈ ಸಂಗೀತಗಾರ ಪಾಳೇಗಾರರ ಆಡಳಿತ ಕಾಲದಲ್ಲಿದ್ದ ಮಹಾ ದೈವನಿಷ್ಠ ಪ್ರತಿಭಾವಂತನೆಂದೂ, ಚಿತ್ರದುರ್ಗದ ಕೋಟೆಯನ್ನು ಹೈದರಾಲಿ ಸೈನ್ಯ ಗೆದ್ದಾದ ಮೇಲೆ, ಅವರ ಎದುರಿಗೆ ಸಂಗೀತ ಹೇಳಲು ನಿರಾಕರಿಸಿ ನಾಲಗೆ ಕತ್ತರಿಸಿಕೊಂಡ ಎಂದೂ ಈ ಕಾದಂಬರಿ ಸೂಚಿಸುತ್ತದೆ.

ಚಲನಚಿತ್ರ ಬಂದಾದ ಮೇಲೆ 'ಹಂಸಗೀತೆ'ಯ ಕಥಾವಸ್ತು ಚರಿತ್ರೆಯ ಭಾಗ ಎಂಬಂತೆ ಜನಸಾಮಾನ್ಯರು ಭಾವಿಸಿದರು. ಕೋಟೆ ತೋರಿಸಲು ಇದ್ದ ಅಡ್ಡಕಸುಬಿ ಗೈಡ್ ಕೆಲವರು ಜನರಂಜನೆಗಾಗಿ, ಬಂದ ಪ್ರವಾಸಿಗರಿಗೆ ಏಕನಾಥೇಶ್ವರಿ ದೇವಸ್ಥಾನದ ಮುಂದಿದ್ದ ಜಗುಲಿಯೊಂದನ್ನು ತೋರಿಸಿ ಇದೇ ಸಂಗೀತಗಾರ ವೆಂಕಟಸುಬ್ಬಯ್ಯ ಹಾಡಲು ಕುಳಿತುಕೊಳ್ಳುತ್ತಿದ್ದ ಜಾಗ ಎಂದು ಹೇಳತೊಡಗಿದರು. ಜನರಿಂದ ಜನರಿಗೆ ವಿಷಯ ಹರಡಿ ವೆಂಕಟಸುಬ್ಬಯ್ಯ ಎಂಬ ಸಂಗೀತಗಾರ, ಚಿತ್ರದುರ್ಗದ ಜನತೆಗೆ ದಾಳಿಕೋರ ಹೈದರಾಲಿ, ಟೀಪು ಎದುರು ತಲೆ ಬಾಗದ 'ಸ್ವಾಭಿಮಾನ'ದ ಸಂಕೇತವೆಂಬಂತೆ ಬಿಂಬಿತವಾಗತೊಡಗಿದ.

ಇತಿಹಾಸಕಾರರನ್ನು ಕೇಳಿದರೆ ಆ ಬಗೆಯ ಪ್ರಸಂಗ ಚಿತ್ರದುರ್ಗ ನಾಯಕ ಪಾಳೇಗಾರರ ಇತಿಹಾಸದಲ್ಲಿ ಉಲ್ಲೇಖವಿಲ್ಲ ಎಂದರು. ಜನಪದ ಸಾಹಿತ್ಯದಲ್ಲೂ ಇಲ್ಲ. ಅದೊಂದು ಕಲ್ಪಿತ ಕತೆ ಎಂದು ಕಾದಂಬರಿಕಾರ ತರಾಸು ಸ್ವತಃ ಹೇಳಿಕೆ ನೀಡಿದರು. ಆದರೆ ಜನ ಬಿಡಬೇಕಲ್ಲ, ಸಂಗೀತಗಾರ ದೇವತೆ ಗುಡಿ ಬಳಿ ಹಾಡಲು ಕುಳಿತುಕೊಳ್ಳುತ್ತಿದ್ದ ಜಗಲಿಯನ್ನು ನೋಡುವ ಕುತೂಹಲದಿಂದ ಪ್ರವಾಸಿಗರಲ್ಲಿ ಅನೇಕರು ಗೈಡ್‌ಗಳನ್ನು ವಿಚಾರಿಸುತ್ತಾರೆ. ಗೈಡ್‌ಗಳು ತೋರಿಸುತ್ತಾರೆ. ಕ್ರಮೇಣ ಅದೊಂದು ಪಾರಂಪರಿಕ ನಂಬಿಕೆಯಾದರೆ ಆಶ್ಚರ್ಯವಿಲ್ಲ. ರಾಮಸೇತು ಕೂಡ ಬಹುಶಃ ಹೀಗೆ ಆಗಿರುವಂತಾದ್ದೇ. ಸ್ವತಃ ವಾಲ್ಮೀಕಿ ಬಂದು ರಾಮ ಕಟ್ಟಿದ ಸೇತುವೆ ಇದಲ್ಲ ಎಂದರೂ ಸಂಘ ಪರಿವಾರದವರು ಬಿಡುವುದಿಲ್ಲ, ಯಾಕೆಂದರೆ ಅವರ ನಂಬುಗೆ ಚರಿತ್ರೆಯ ಮೇಲೆ ಆಧಾರಪಟ್ಟಿಲ್ಲ, ಬದಲಾಗಿ ಅವರ ಚರಿತ್ರೆಯೇ ನಂಬುಗೆಯನ್ನು ಆಧರಿಸಿದೆ.


ಎಸ್.ಪಿ.ರವಿಯ ನಖರಾಗಳಿಂದ ದರ್ಪಿಷ್ಠರ ತಾಣವಾಗುತ್ತಿರುವ ಠಾಣೆಗಳು

ಸಾಮಾನ್ಯವಾಗಿ ಆರಕ್ಷಕ ಠಾಣೆಯನ್ನು ಅನಕ್ಷರಸ್ಥರು 'ಆ ರಾಕ್ಷಸರ ಠಾಣೆ'ಯಂತಲೇ ಕರೆಯುತ್ತಾರೆ. ಅಂದಂತೆ ಬಹುತೇಕ ಪೊಲೀಸ್ ಸ್ಟೇಷನ್‌ಗಳಲ್ಲಿ ಖಾಕಿ ಡ್ರೆಸ್ ತೊಟ್ಟುಕೊಂಡ ಮೃಗಗಳಿರುವುದೇ ಹೆಚ್ಚು. (ಎಲ್ಲೋ ಒಂದೆರಡು ಕಡೆ ಅಪವಾದವೆಂಬಂತಹ ಒಳ್ಳೆಯ ಅಧಿಕಾರಿಗಳಿದ್ದಾರೆ. ಆ ಮಾತು ಬೇರೆ) ಮಾನವೀಯತೆಗೂ, ಅವರಿಗೂ ಯಾವುದೇ ಬಾದರಾಯಣ ಸಂಬಂಧವೂ ಇರುವುದಿಲ್ಲ. ಪೊಲೀಸ್ ಕಚೇರಿಗೆ ಹೋದ ಯಾರನ್ನೂ ಅವರು 'ಬನ್ನಿ ಕುಳಿತುಕೊಳ್ಳಿ' ಎಂದು ಕುರ್ಚಿ ತೋರಿಸಲು ಸಾಧ್ಯವೇ ಇಲ್ಲ. ಇಂಥ ಮೃಗಗಳ ಇಲಾಖೆಗೆ ಮಾನವೀಯ ಕಳಕಳಿಯ ಎಂ.ಪಿ. ಪ್ರಕಾಶರಂಥ ಗೃಹಮಂತ್ರಿಗಳಿರುವುದೇ ಒಂದು ಸೋಜಿಗ!

ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಅನತಿ ದೂರದಲ್ಲೇ ಇರುವ ಗಾಂಧಿಗಂಜ್ ಏರಿಯಾದ ಪಿಎಸ್‌ಐ ಅಡೆಪ್ಪ ಎಂಥ ಐನಾತಿ ಆಸಾಮಿ ಎಂಬುದನ್ನು ಇಡೀ ಏರಿಯಾವೇ ಒಕ್ಕೊರಲಿನಲ್ಲಿ ಹೇಳುತ್ತದೆ. ಠಾಣೆಯಲ್ಲಿ ಕುಳಿತು ಅವರು ನಡೆಸುವ ಡೀಲ್‌ಗಳು, ಬಯ್ಗಳಗಳು ಯಾವ ನಾಗರಿಕನೂ ಕೇಳಿಸಿಕೊಳ್ಳುವಂತಿಲ್ಲ. ಯಾರಾದರೂ ಅವರ ಠಾಣೆಗೆ ಹೋಗಲೇಬೇಕಾದ ಅನಿವಾರ್ಯತೆ ಸೃಷ್ಟಿಯಾದರೆ "ಏನೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ" "ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ" ಎಂದು ದೇವರಲ್ಲಿ ಮೊರೆ ಇಟ್ಟೆ ಹೋಗಬೇಕಾಗುತ್ತದೆ. ಅಷ್ಟೊಂದು ಅಪ್ಪಟ ಸಂಸ್ಕೃತ(?) ಭಾಷೆ ಅವರಿಂದ ಪ್ರಯೋಗವಾಗುತ್ತಿರುತ್ತವೆ. ಯಾರಿಗೂ ದುಡ್ಡು ಕೊಟ್ಟು ಯಾವ ಕೆಲಸವನ್ನು ಮಾಡಿಸಿ ಗೊತ್ತಿಲ್ಲದ ಸಾಹೇಬರಿಗೆ ಮಾಡಿದ ಕೆಲಸಕ್ಕೆ ಯಾರಾದರೂ ದುಡ್ಡು ಕೇಳಿದರೆ ಕೆಂಡದಂತ ಕೋಪ ಬಂದುಬಿಡುತ್ತದೆ.

ಸರಿಯಾಗಿ ಒಂದು ತಿಂಗಳ ಹಿಂದೆ ಈ ಸಾಹೇಬರ ಮನೆಯ ಬೋರ್‌ವೆಲ್ ಕೆಟ್ಟು ಹೋಯಿತು. ದುರಸ್ತಿ ಮಾಡಿಸಲು, ದೀಪಕ್ ಎಲೆಕ್ಟ್ರಾನಿಕ್ಸ್ ಅಂಗಡಿಯ ನಾವದಗೇರಿ ರಾಜಕುಮಾರ ಮತ್ತು ವಿಜಯಕುಮಾರ ಎಂಬುವವರನ್ನು ಕರೆತಂದರು. ಅವರೂ ಬೋರ್‌ವೆಲ್ ರಿಪೇರಿ ಮಾಡಿದರು. ಆದರೆ ಅವರು ಎಲ್ಲರಿಗೂ ಕೇಳುವಂತೆ ಪೊಲೀಸ್ ಇಲಾಖೆಯ ಈ ಅಧಿಕಾರಿಗಳಿಗೂ ದುಡ್ಡು ಕೇಳುವುದೇ? ಯಾರಿಗೂ ಹಣ ಕೊಟ್ಟು ಗೊತ್ತಿಲ್ಲದ ಅಡ್ನಾಡಿ ಅಡೆಪ್ಪ ದುಡ್ಡು ಕೊಡಲು ಸಾಧ್ಯವೇ?

ಆದೇಕೋ ಸಮಾಧಾನದಿಂದ ಇದ್ದ ಸಾಹೇಬರು ನಾಳೆ ಮನೆಗೆ ಬನ್ನಿ ಹಣ ಕೊಡುತ್ತೇನೆ ಅಂದರು. ಇದನ್ನು ನಂಬಿ ದೀಪಕ್ ಎಲೆಕ್ಟ್ರಾನಿಕ್ಸ್ ಹುಡುಗರು ಮನೆಗೂ ಹೋಗುವುದೇ? ಅದೂ ಸಾಹೇಬರು ಇಲ್ಲದಾಗ! ಸಾಹೇಬರ ಹೆಂಡತಿಯ ಮಾತನ್ನು ನಂಬಿ ಮತ್ತೆ ಠಾಣೆಯ ಮುಂದೆ ಕಳಾಯಿಸಿ ಬೋರ್‌ವೆಲ್ ರಿಪೇರಿ ದುಡ್ಡು ಕೇಳಿದರೆ ಆಡೆಪ್ಪನವರು ಅಡ್ನಾಡಿಯಾಗದೆ ಇನ್ನೇನು ಆಗಲು ಸಾಧ್ಯ? ಸದರಿ ಯುವಕರನ್ನು ಮನ ಬಂದಂತೆ ಥಳಿಸಿ, ಲಾಕಪ್ಪಿನಲ್ಲಿ ಇಟ್ಟುಬಿಟ್ಟರು!! ತಮ್ಮ ಘನಂದಾರಿ ಖಾಕಿಗೆ ಹೊಸ ಖದರು ತಂದರು.



ಬಸವ ಕಲ್ಯಾಣದ ಪಿ.ಎಸ್.ಐ. ಯಂತೂ ತಾನು ಸರ್ಕಾರಿ ನೌಕರನೆಂಬುದನ್ನೂ ಮರೆತು, "ಸರ್ ನಮ್ಮಲ್ಲಿ ಹೀಗೆ ಸಮಸ್ಯೆ ಇದೆ ನೀವು ಬನ್ನಿ" ಎಂದರೆ "ಕೂಡಲೇ ಯಾವುದಾದರೂ ವೆಹಿಕಲ್ ಕಳಿಸ್ರೀ.... ಬರ್ತೀನಿ" ಎನ್ನುತ್ತಾರೆ. ಹುಮ್ನಾಬಾದ್ ತಾಲ್ಲೂಕಿನ ಮನ್ನಾಖೇಳಿಯ ಮುಲ್ಲಾ ಎಂಬ ಠಾಣಾಧಿಕಾರಿಯೂ ನಾನೇನು ಕಮ್ಮಿಯೆಂಬಂತೆ ತಮ್ಮ ಕಣ್ಣೆದುರಿಗೆ ಯಾವುದೇ ಘಟನೆ ನಡೆದರೂ ಅದು ನಡೆದೇ ಇಲ್ಲವೆಂಬಂತೆ ಗಪ್‌ಚುಪ್ ಕುಳಿತುಕೊಳ್ಳುತ್ತಾರೆ. ಆಕ್ಸಿಡೆಂಟ್ ಆಗಿ ಸತ್ತು ಹೋದರೂ ಅವರು ಮಾತ್ರ ಕ್ಯಾರೆ ಅನ್ನೋದಿಲ್ಲ.

ಜಿಲ್ಲೆಯಾದ್ಯಂತ ಪೊಲೀಸರ ದರ್ಪದ ಈ ನಡವಳಿಕೆಗೆ 'ಮೂಲ ಕಾರಣ ಇಲ್ಲಿಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ರವಿಯೇ ಆಗಿದ್ದಾರೆ. ರವಿ ಒಳ್ಳೆಯವರು ಮತ್ತು ಕೆಲಸಗಾರರು. ಆದರೆ ಅಧಿಕಾರವನ್ನು ಯಾರ ಮೇಲೆ ಚಲಾಯಿಸಬೇಕು? ಯಾವಾಗ ಚಲಾಯಿಸಬೇಕು? ಎಂಬ ಸೂಕ್ಷ್ಮತೆಯೇ ಗೊತ್ತಿಲ್ಲ. 'ತುಘಲಕ್'ನಂತೆ ಒಮ್ಮೊಮ್ಮೆ ತಮ್ಮ ತಲೆಯಲ್ಲಿ ಏನು ಬರುತ್ತದೋ ಅದನ್ನು ಮಾಡದೇ ಬಿಟ್ಟವರೇ ಅಲ್ಲ.

ಆದೇಕೋ ಒಂದು ತಿಂಗಳ ಹಿಂದೆ ರಾತ್ರಿ 10 ಗಂಟೆಯ ತರುವಾಯ ಬೀದರ್ ಪಟ್ಟಣದಲ್ಲಿ ಜನರ್‍ಯಾರು ರಸ್ತೆಯ ಮೇಲೆ ತಿರುಗಾಡಬಾರದು ಅನಿಸಿತು. ಸರಿ ಆ ಬಗ್ಗೆ ಮುಂಜಾಗ್ರತೆಯಿಂದ ಹಿರಿಯ ನಾಗರಿಕರ ಸಭೆ, ಪತ್ರಿಕಾ ಹೇಳಿಕೆ ಏನೊಂದನ್ನೂ ನೀಡದೆ ಒಂದು ಫರ್ಮಾನು ಹೊರಡಿಸಿದರು. ಇದರಿಂದ ಸುಮಾರು ಹತ್ತೆಂಟು ದಿನ ಜನಸಾಮಾನ್ಯರು ಪೊಲೀಸರ ಚಿತ್ರದ ರುಚಿ ಕಂಡದ್ದೇ ಕಂಡದ್ದು. ಸಿವಿಲ್ ಮ್ಯಾಟರ್ ಒಂದಕ್ಕೆ ಸಂಬಂಧಿಸಿದಂತೆ ಅಮಾಯಕನೋರ್ವ ಎಸ್. ರವಿಯವರನ್ನು ಸಹಾಯ ಕೇಳಲು ಹೋದರೆ "ಐ ವಿಲ್ ಶೂಟ್ ಯೂ..." ಎಂದು ಬೆದರಿಸಿ ಕಳಿಸಿದರಂತೆ!

"ನನ್ನ ಗಂಡನ ಮನೆಯವರಿಂದ ಕಿರುಕುಳವಾಗುತ್ತಿದೆ. ಗಂಡನ ಮನೆಯ ಬಹುತೇಕರು ತಮ್ಮ ಇಲಾಖೆಯಲ್ಲಿಯೇ ಇದ್ದಾರೆ. ದಯ ವಿಟ್ಟು ನನಗೆ ನ್ಯಾಯ ಒದಗಿಸಿ. ನನ್ನ ತಂದೆ ಮುಂತಾದವರ್‍ಯಾರು ಇಲ್ಲ" ಎಂದು ತನ್ನ ಅಳಲನ್ನು ಹೇಳಿದ ಬಾಲ್ಕಿಯ ಒಬ್ಬ ಅಮಾಯಕಳೊಬ್ಬಳಿಗೆ "ಹೆಮ್ಮಾರಿ"ಎಂದು ಜರಿದು ಕಳಿಸಿದ್ದಾರೆ. ಆಕೆ ತನ್ನ ನೋವನ್ನು ಬರೆದು ಪತ್ರಿಕೆಗೆ ಕಳಿಸಿದರೆ "ನೀನು ಪತ್ರಿಕೆಗಳಿಗೆ ದೂರು ಕೊಡ್ತೀಯಾ?" ಎಂದು ಬೆದರಿಸಿದ್ದಾರೆ.

ಸದಾ ಪೊಲೀಸ್ ಗತ್ತಿನಲ್ಲಿರುವ, ತನ್ನ ಹತ್ತಿರ ಬಂದಿರುವ ಎಲ್ಲರನ್ನೂ ಗುಮಾನಿಯಿಂದ ನೋಡುವ, ತಾನು ಮಾತ್ರ ಚಾರಿತ್ರ್ಯವಂತ, ಉಳಿದವರೆಲ್ಲ 'ಕಚಡಾ' ಬುದ್ಧಿಯವರು ಎಂದು ಭ್ರಮಿಸಿರುವವರೆಗೂ ರವಿ ಎಷ್ಟೇ ಪ್ರಾಮಾಣಿಕ ಅಧಿಕಾರಿಯಾಗಿದ್ದರೂ ಅವರು ಜನಪರವಾಗುವುದಿಲ್ಲ. ಕೂಡಲೆ ಅವರು ಸರಳತೆಯನ್ನು ಮೈಗೂಡಿಸಿಕೊಳ್ಳದಿದ್ದರೆ ಬೀದರ್ ಜಿಲ್ಲೆಯ ಪೊಲೀಸ್ ಠಾಣೆಗಳನ್ನೇ ಜನ ಬಹಿಷ್ಕರಿಸುವ ದಿನ ಬಂದರೂ ಅಚ್ಚರಿಪಡಬೇಕಿಲ್ಲ.

-ವರದಿಗಾರ

ಚೆಲ್ಲಾಟ ನಡೆಸುವ ಶರಣ ಪ್ರಕಾಶ ಪಾಟೀಲ್

ಎಕ್ಕುಟ್ಟಿ ಹೋಗಿರುವ ಸೇಡಂ ಪುರಸಭೆ




ಶರಣಪ್ರಕಾಶ ಪಾಟೀಲ

ವಾಸವದತ್ತಾ, ರಾಜಶ್ರೀ ಸಿಮೆಂಟು ಹೆಸರು ಕೇಳುತ್ತಲೇ ಪಕ್ಕನೆ ನೆನಪಾಗುವ ಹೆಸರು ಸೇಡಂ. ಈ ತಾಲ್ಲೂಕಿನ ರಾಜಕೀಯವೂ ಹೆಚ್ಚುಕಡಿಮೆ ಧೂಳಿನಿಂದಲೇ ತುಂಬಿದೆ. ಕಾಂಗ್ರೆಸ್ಸಿನ ಶರಣಪ್ರಕಾಶ ಪಾಟೀಲರ ತರಹೇವಾರಿ ರಾಜಕೀಯಕ್ಕೆ ಬಲಿಯಾಗಿ ಅಭಿವೃದ್ಧಿ ಎಂಬುದು ಇಲ್ಲಿ ಮರೀಚಿಕೆಯಾಗಿದೆ. ಆದರೆ ಇದನ್ನು ಕಂಡೂಕಾಣದಂತೆ ತೆಪ್ಪಗೆ ಕುಳಿತಿದ್ದಾರೆ ಜೆಡಿಎಸ್‌ನ ಚಂದ್ರಶೇಖರ ರೆಡ್ಡಿ ಮದನ ದೇಶಮುಖ. ಇವರು ಶಾಸಕರ ಐದು ವರ್ಷದ ಅವಧಿ ಮುಗಿಯುವವರೆಗೂ ಬಾಯಿ ಹೊಲಿದುಕೊಂಡು ಕುಳಿತುಕೊಳ್ಳಬೇಕೆಂಬ ಪ್ರತಿಜ್ಞೆ ತೊಟ್ಟವರಂತೆ ಗಪ್‌ಚುಪ್ ಅಂತ ಕುಳಿತುಬಿಟ್ಟದ್ದಾರೆ. ಇದರಿಂದಾಗಿ ಶರಣಪ್ರಕಾಶ ಪಾಟೀಲ ಆಡಿದ್ದೇ ಆಟ, ಹೂಡಿದ್ದೇ ಮಾಟ ಎನ್ನುವಂತಾಗಿದೆ.

ಸೇಡಂ ಪುರಸಭೆಗೆ ಹಿಂದೆಂದೂ ಬರಲಾರದಷ್ಟು ಬಜೆಟ್ ಈ ಸಲ ರವಾನೆಯಾಗಿತ್ತು, ಇದಕ್ಕೆ ಪ್ರಯತ್ನಿಸಿ ಹಣ ತಂದು ಹಾಕಿದವರು ಸುದರ್ಶನ ರೆಡ್ಡಿ ಪಾಟೀಲ. ಅಲ್ಲದೆ ವಾಸವದತ್ತಾ ಸಿಮೆಂಟ್ ಕಾರ್ಖಾನೆಯಿಂದ ಬಂದ 2.5 ಕೋಟಿ ತೆರಿಗೆ ಹಣದಲ್ಲಿಯೇ ಇಡೀ ನಗರವನ್ನು ಮಾದರಿಯ ನಗರವನ್ನಾಗಿ ಮಾಡಬಹುದಿತ್ತು, ಸರ್ಕಾರದಿಂದ ಬಂದ 11 ನೇ ಹಣಕಾಸು ಯೋಜನೆಯ ಹಣವೂ ನೇರ ಪುರಸಭೆಯ ಸದಸ್ಯರ ಮತ್ತು ಶಾಸಕರ ಜೇಬಿ ಸೇರಿಬಿಟ್ಟಿದೆ. ಚಿಲ್ಲರೆ ಪುಢಾರಿಗಳ ತೃಪ್ತಿಪಡಿಸಲು ಕಣ್ಣೊರೆಸಿ ಕಾದಿ ಹೊದ್ದುಕೊಂಡ ಶಾಸಕರೇ ಇದಕ್ಕೆಲ್ಲ ನೇರ ಜವಾಬ್ದಾರರು.

ಕಾನೂನನ್ನು ಸರಿಯಾಗಿ ಚಲಾಯಿಸಬೇಕೆಂದು ಅರಿಯದ ನಾಗಪ್ಪನಂಥ ಎಬಡ ಅಧಿಕಾರಿಯಿಂದ, ಕವಿತಾ ಮನಿಕೇರಿ ಎಂಬ ವಿಭಾಗಾಧಿಕಾರಿಯಿಂದ ಸೇಡಂ ನಗರದ ಗಲ್ಲಿಗಲ್ಲಿಗಳಲ್ಲಿ ಹೊಲಸು ಜನರ ಮುಖಕ್ಕೆ ರಾಚುತ್ತದೆ. ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿರುವ ನಗರಕ್ಕೆ ಬೇಲಿಯೇ ಹಾಕುವವರಿಲ್ಲದೆ ಗಬ್ಬೆದ್ದು ನಾರತೊಡಗಿದೆ. ಆಗೀಗ ಮಾಡಿದ ಸಿ.ಸಿ. ರಸ್ತೆಗಳ ಕಾಮಗಾರಿಯನ್ನಂತೂ ನೋಡಲಾಗುವುದಿಲ್ಲ.

ಈಗ ಮತ್ತೆ ಪುರಸಭೆಯ ಚುನಾವಣೆಗೆ ನಿಂತಿರುವ ಅಭ್ಯರ್ಥಿಗಳನ್ನು ಗಮನಿಸಿದರೆ ಮೇಲಿನ ಮಾತಿಗೆ ಸರಿಯಾದ ಉದಾಹರಣೆ ಸಿಕ್ಕುತ್ತದೆ. ಪುರಸಭೆಯ ಸದಸ್ಯರು, ನಗರದ ಅಭಿವೃದ್ಧಿ ಆರೋಗ್ಯ, ಜನಸಾಮಾನ್ಯರ ಹಿತವನ್ನು ಕಾಪಾಡಬೇಕಾದ ಪ್ರಜ್ಞಾವಂತಿಕೆಯುಳ್ಳವರು ಆಗಿರಬೇಕು. ಆದರೆ ವಾಸ್ತವವೇನೆಂದರೆ ಪುರಸಭೆಯ ಸದಸ್ಯತ್ವ ಎನ್ನುವುದು ರೊಕ್ಕ ಮಾಡಿಕೊಳ್ಳುವ ಒಂದು ಉದ್ಯೋಗ ಎಂದು ಇವರೆಲ್ಲ ಭಾವಿಸಿರುವುದರಿಂದ ಪುರದ ಅಭಿವೃದ್ಧಿಗಿಂತ ಮನೆಯ ಅಭಿವೃದ್ಧಿಯೇ ಇಲ್ಲಿ ಮುಖ್ಯವಾಗುತ್ತದೆ.




ಚಂದ್ರಶೇಖರ ರೆಡ್ಡಿ

ಹಿಂದೊಮ್ಮೆ ಪುರಸಭೆಯ ಅಧ್ಯಕ್ಷನಾಗಿದ್ದ ಯಕ್ಬಾಲ ಖಾನ್ ಆಶ್ರಯ ಮನೆಗಳಲ್ಲಿ ಲಫಡಾ ನಡೆಸಿ ಲೋಕಾಯುಕ್ತರಿಂದ ಮುಖಕ್ಕೆ ಇಕ್ಕಿಸಿಕೊಂಡಿದ್ದ, ಕೆಲವು ಕಾಲ ಈ ಕಾರಣಕ್ಕೆ ಕೃಷ್ಣನ ಜನ್ಮಸ್ಥಾನಕ್ಕೂ ಹೋಗಿಬಂದಿದ್ದ ಈಗ ಮತ್ತೆ ಗರಿಗರಿ ಬಟ್ಟೆ ತೊಟ್ಟು, ಹೊಸ ಪಟ್ಟುಗಳನ್ನಿಟ್ಟು ಚುನಾವಣೆಗೆ ನಿಂತಿದ್ದಾನೆ.

ಪುರಸಭೆಯಲ್ಲಿ ಕೆಲಸಗಳಿಗೆ ಟೆಂಡರ್ ಕರೆಯುವುದು ಎಲ್ಲರೂ ಕೇಳಿ ಗೊತ್ತಿರುವ ಸಂಗತಿ. ಆದರೆ ಆ ಟೆಂಡರ್‌ಗಳನ್ನೇ ಗುತ್ತಿಗೆ ಹಿಡಿಯುವ ಕೌತುಕ ಯಾರಾದರೂ ಕಂಡಿರಾ? ಅದನ್ನು ನೀವು ಪರಾಂಬರಿಸಬೇಕಾದರೆ ಪುರಸಭೆಯ ಮತ್ತೊಬ್ಬ ಉಪಾಧ್ಯಕ್ಷನಾಗಿದ್ದ ಗಫೂರ್ ಖಾನ್‌ನನ್ನೇ ಕೇಳಿ ತಿಳಿದುಕೊಳ್ಳಬೇಕು. ಯಾವುದಕ್ಕೂ ಹೇಸಿಗೆ ಪಟ್ಟುಕೊಳ್ಳದ, ತಿನ್ನಬಾರದ್ದನ್ನೆಲ್ಲ ತಿನ್ನಲು ತುದಿಗಾಲ ಮೇಲೆ ನಿಂತಿರುವ ಗಫೂರ್ ಕೂಡ ತನ್ನ ಮುಖವನ್ನು ಮುನಿಸಿಪಾಲಿಟಿಯತ್ತ ಮತ್ತೊಮ್ಮೆ ಚಾಚಿದ್ದಾನೆ. ನಾಗೇಂದ್ರಪ್ಪ ರುದ್ನೂರು ಮತ್ತೊಮ್ಮೆ ತನ್ನ ಕರಾಮತ್ತನ್ನು ಪ್ರದರ್ಶಿಸಲು ಅಣಿಯಾಗಿದ್ದಾನೆ. ಬಸವರಾಜ ಪಾಟೀಲ ಸೇಡಂ ಅವರ ಸಹೋದರ ತಮ್ಮ ಕಾಲ ಈಗ ಬಂದೀತು, ಆಗ ಬಂದೀತು ಎಂದು ಕಾಯುತ್ತಲೇ ಇದ್ದಾರೆ.

ಹೀಗೆ ತೀರಾ ಎಕ್ಕುಟ್ಟಿ ಹೋಗುತ್ತಿರುವ ಸೇಡಂ ಪುರಸಭೆಯ ಹಣೆಬರಹ ಗೊತ್ತಿದ್ದರೂ ಮೂಕನಾಗಿ ಕುಳಿತ ಚಂದ್ರಶೇಖರ ಮದನಾ ದೇಶಮುಖ ಎಚ್ಚರಗೊಳ್ಳದೆ ಹೋದರೆ ಶರಣಪ್ರಕಾಶ ಪಾಟೀಲರ ಭ್ರಷ್ಟ ಬೇರುಗಳು ಮತ್ತಷ್ಟು ಆಳಕ್ಕೆ ಇಳಿಯುವುದರಲ್ಲಿ ಸಂದೇಹವಿಲ್ಲ. ಇದನ್ನೆಲ್ಲ ಗ್ರಹಿಸಿ ಮತದಾರ ತನ್ನ ಓಟನ್ನು ಸಮರ್ಥ ಅಭ್ಯರ್ಥಿಗೆ ಚಲಾಯಿಸಬಲ್ಲನಾದರೆ ತನ್ನ ಊರನ್ನು ತಾನೆ ಕಟ್ಟಿಕೊಳ್ಳಬಲ್ಲ. ಆದರೆ ಈ ಕನಸುಗಳುಳ್ಳ ಮತದಾರ ಸದ್ಯ ಸೇಡಂನಲ್ಲಿ ಇದ್ದಾರೆಯೇ? ಎಂಬುದೇ ಸದ್ಯದ ಪ್ರಶ್ನೆಯಾಗಿದೆ.

-ವರದಿಗಾರ



ಜೋಭದ್ರಗೇಡಿ ಖರ್ಗೆ, ಧರಂಸಿಂಗ್, ಖಮರುಲ್‌ರಿಂದ

ನಲುಗಿಹೋಗಿರುವ ಕಲಬುರ್ಗಿ ನಗರಪಾಲಿಕೆ

ಚುನಾವಣೆಯ ದಿನಾಂಕ ಘೋಷಣೆಯಾಗುತ್ತಿರುವಂತೆ ಕಲಬುರ್ಗಿ ಪಾಲಿಕೆಯ ಸದಸ್ಯರಾಗಲು ತುದಿಗಾಲ ಮೇಲೆ ನಿಂತಿರುವ ಪುಡಾರಿಗಳು ವಾತಾವರಣವನ್ನು ರಂಗೇರಿಸುತ್ತಿದ್ದಾರೆ. ಕಳೆದ ಸಲ ಹಾಗೂ ಹೀಗೂ ತಮ್ಮ ಕೈ ಮೇಲೆ ಮಾಡಿಕೊಂಡ ಕಾಂಗ್ರೆಸ್‌ಗಳು ಈ ಬಾರಿಯೂ ಆ ಗದ್ದುಗೆಯನ್ನು ಕಬಳಿಸಲು ಹರಸಾಹಸ ನಡೆಸುತ್ತಿವೆ. ಆದರೆ ತಾವು ಯಾವ ವಾರ್ಡ್‌ಗಳಲ್ಲಿ ಕೆಲಸ ಮಾಡಿದ್ದೇವೆ? ಯಾವ ವಾರ್ಡ್‌ಗಳ ಡ್ರೈನೇಜ್ ದುರಸ್ತಿ ಮಾಡಿದ್ದೇವೆ, ನಗರದ ಯಾವ ಗಲ್ಲಿಗಳಿಗೆ ಕುಡಿಯುವ ನೀರನ್ನು ಪೂರೈಸಿದ್ದೇವೆ? ಎಂಬ ಪ್ರಶ್ನೆಗಳ ಕುರಿತು ಯಾವ ಆತ್ಮವಿಮರ್ಶೆಯೂ ಮಾಡಿಕೊಳ್ಳಲು ತಯ್ಯಾರಿಲ್ಲ.

ಬೇಸಿಗೆ ದಿನಗಳು ಬಂದವೆಂದರೆ ಇಡೀ ನಗರದ ಜನತೆ ಕೊಡಗಳನ್ನು ಹಿಡಕೊಂಡು ಬೋರವೆಲ್‌ಗಳಿಗಾಗಿ ಅಂಡಲೆಯಬೇಕಾಗುತ್ತದೆ. ಸರಿಯಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸದ ನನಗರ ಪಾಲಿಕೆಯ ಸದಸ್ಯರು ಮತ್ತು ಅಧ್ಯಕ್ಷರು ತಮ್ಮ ಅಧಿಕಾರದ ಅವಧಿಯಲ್ಲಿ ಕಡಿದು ಕಟ್ಟಿಹಾಕಿದ್ದು ಅಷ್ಟರಲ್ಲೇ ಇದೆ. ವರ್ಷದ ಎಲ್ಲಾ ದಿನಗಳಲ್ಲಿ ತಿನ್ನುವ ಕೆಲಸದಲ್ಲಿ ಮಾತ್ರ ನಿರತರಾಗಿರುವ ಪಾಲಿಕೆಯ ಸದಸ್ಯರು ಬೇಸಿಗೆ ಬಂದಾಗ 'ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಲು ಅಣಿಯಾದರು' ಎಂಬಂತೆ ನೀರಿನ ಸಮಸ್ಯೆ ಪರಿಹರಿಸುವ ಕುರಿತು ಆಲೋಚಿಸತೊಡಗುತ್ತಾರೆ. ಕೆಲವರಂತೂ ನೀರಿನ ರಾಜಕೀಯಕ್ಕೂ ಇಳಿದು ಸಮಸ್ಯೆ ಮತ್ತಷ್ಟು ಕಗ್ಗಂಟಾಗುವಂತೆ ನೋಡಿಕೊಳ್ಳುತ್ತಾರೆ.


ಖಮರುಲ್ಲಾ ಇಸ್ಲಾಂ ಎಂಬ ಕಮ್ಯುನಲ್ ಶಾಸಕ ಪಾಲಿಕೆಯ ಗಾರ್ಡನ್ ಜಾಗಗಳನ್ನು ಹುಡುಕುತ್ತಾ ಅಲ್ಲಿ ತನ್ನ ಠಿಕಾಣಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಧರ್ಮಸಿಂಗ್, ಖರ್ಗೆ, ಇಕ್ಬಾಲ್ ಅಹ್ಮದ್ ಸರಡಗಿ ಎಂಬ ಜೋಭದ್ರಗೇಡಿಗಳಿಂದ ಪಾಲಿಕೆ ಅಕ್ಷರಶಃ ಸತ್ಯನಾಶ ಆಗಿಹೋಗಿದೆ. ನಗರಪಾಲಿಕೆಯ ವಿರಾಟ್ ರೂಪದ ಭ್ರಷ್ಟಾಚಾರ ಕುರಿತು ಆಗೀಗ ಧ್ವನಿ ಎತ್ತುವ ಎಸ್.ಕೆ. ಕಾಂತಾ ಎಂಬ ಮಾಜಿ ಕಾರ್ಮಿಕ ಮಂತ್ರಿಯ ಹುಟ್ಟಡಗಿಸಲು ಜೆ.ಡಿ.ಎಸ್.ನ ಬಸವರಾಜ ತಡಕಲ್, ದರ್ಶನಾಪುರ ಮುಂತಾದವರು ಪಣತೊಟ್ಟಂತೆ ಕಾಣುತ್ತಿದೆ.

ನಗರಪಾಲಿಕೆಯ ಚುನಾವಣೆಯ ಅಭ್ಯರ್ಥಿಗಳ ಎಲ್ಲಾ ಬಿ.ಫಾರಂಗಳನ್ನು ತಡಕಲ್ ದೇವೇಗೌಡರಿಂದ ಇಸಗೊಂಡು ಬಂದು ರಾಜಕೀಯ ಆರಂಭಿಸಿದ್ದಾನೆ. ದರ್ಶನಾಪುರ ಚೇಲಾ ಆಗಿರುವ ತಡಕಲ್ ತಮ್ಮ ಗುಂಪಿನ ಪ್ರಾಬಲ್ಯವನ್ನು ಪ್ರದರ್ಶಿಸಲು ಈ ಬಾರಿ ಕಾಂತಾ ಮತ್ತು ಅವರ ಹಿಂಬಾಲಕರಿಗೆ ಕೋಕ್ ಕೊಡುವ ಸಾಧ್ಯತೆಗಳೇ ಅಧಿಕವಾಗಿವೆ. ಬಿಜೆಪಿಯ ಚಂದ್ರಶೇಖರ ಪಾಟೀಲ ರೇವೂರ ತನ್ನ ಇದ್ದಬಿದ್ದಷ್ಟು ಚರಿಷ್ಮಾ ಕಳಕೊಂಡಿದ್ದರಿಂದ ಈ ಬಾರಿ ಪಾಲಿಕೆಗೆ ಒಂದೆರಡು ಕಡೆ ಅಭ್ಯರ್ಥಿಗಳು ಆಯ್ಕೆಯಾಗುವ ಸಂಭವ ಇದೆ.

ಅದೇನೂ ಕರಾಮತ್ತೋ? ಬಹಳಷ್ಟು ಮತದಾರರ ಹೆಸರುಗಳು ನಾಪತ್ತೆಯಾಗಿಬಿಟ್ಟಿವೆ. ಇದರಲ್ಲಿ ಕಾಂಗ್ರೆಸ್ ಕೈವಾಡ ಎದ್ದುಕಾಣುತ್ತಿದೆ ಎಂಬ ಆರೋಪವೂ ಕೇಳಿಬರುತ್ತಿದೆ. ಆದ್ದರಿಂದ ಈ ಬಾರಿ 52 ವಾರ್ಡ್‌ಗಳಲ್ಲಿ ಯಾವುದೇ ಪಕ್ಷಕ್ಕಿಂತ ಅಭ್ಯರ್ಥಿಗಳನ್ನು ನೋಡಿ ಮತದಾರ [illegible] ಇದ್ದಾನೆ


-ವರದಿಗಾರ

ಮಾನವೀಯತೆ ಕಳೆದುಕೊಂಡ ಪೊಲೀಸ್ ಉದ್ಯೋಗಿಗಳು



■ ರಾಜನ ಬಂಧನದ ಬಳಿಕ ಹಲವಾರು ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳೊಡನೆ ನಾನು ಸಂಪರ್ಕ ಪಡೆದಿದ್ದೆ. ಆದರೆ ಪ್ರಾಮಾಣಿಕವಾಗಿ ಅಪರಾಧ ಸಾಬೀತುಪಡಿಸಲು ಆಗ್ರಹವಿರುವ ಒಬ್ಬನೇ ಒಬ್ಬ ಅಧಿಕಾರಿಯನ್ನೂ ನಾನು ಕಂಡಿಲ್ಲ ಎಂದು ಹೇಳಲು ನನಗೆ ಸಾಧ್ಯವಿದೆ. ಅಪರಾಧ ಸಾಬೀತು ಪಡಿಸಲು ಶಾಸ್ತ್ರೀಯವಾದ ನೂರಾರು ಹಾದಿಗಳು ಪೊಲೀಸರ ಮುಂದಿದೆ.

ತಂದೆಯ ನೆನಪುಗಳು 5



■ ಈಚಾರ ವಾರಿಯರ್

ಕನ್ನಡಕ್ಕೆ: ಸಾರಾ ಅಬೂಬಕ್ಕರ್

ಒಂದು ದಿನ ನನ್ನ ಸ್ನೇಹಿತರೋರ್ವರು ಬಂದು ನನ್ನೊಡನೆ, ರಾಜ್ಯಸಭಾ ಸದಸ್ಯರಾದ ವಿಶ್ವನಾಥ ಮೇನೋನ್ ನನ್ನನ್ನು ಹುಡುಕುತ್ತಿದ್ದಾರೆಂದೂ, ಕೂಡಲೇ ಅವರನ್ನು ಭೇಟಿಯಾಗಬೇಕೆಂದು ಹೇಳಿದ್ದಾರೆಂದೂ ಹೇಳಿದರು.

ನಾನು ತಡಮಾಡದೆ ಅವರ ಮನೆಗೆ ಹೋದೆ. ಈ ಹಿಂದೆ ನನಗೆ ಅವರ ಪರಿಚಯವಿರಲಿಲ್ಲ. ರಾಜ್ಯಸಭಾ ಸದಸ್ಯರಾದ ಅವರಿಗೆ ನನ್ನ ನಿವೇದನಾ ಪತ್ರದ ಪ್ರತಿ ದೊರೆತೊಡನೆ ಅವರು ಅದನ್ನು ರಾಜ್ಯ ಸಭೆಯ ಮುಂದೆ ಇಟ್ಟು, ಶಕ್ತಿಯುತವಾದ ಭಾಷೆಯಲ್ಲಿ ನನ್ನ ಮಗನ ವಿವರ ತಿಳಿಸಬೇಕೆಂದು ವಾದಿಸಿದರು. ಆದರೆ ರಾಜನು ಪೊಲೀಸ್ ಕಸ್ಟಡಿಯಲ್ಲಿ ಇಲ್ಲ ಎಂಬ ಉತ್ತರ ಮಾತ್ರ ಅವರಿಗೆ ದೊರೆಯಿತು.

ವಿಶ್ವನಾಥ ಮೇನೋನ್ ಈ ಸಮಸ್ಯೆಯನ್ನು ಸಮರ್ ಮುಖರ್ಜಿಯವರಿಂದ ಲೋಕಸಭೆಯಲ್ಲಿ ಎತ್ತಿಸಿದರು. ಆದರೆ ಮೇನೋನ್ ಅವರಿಗೆ ದೊರೆತ ಉತ್ತರವೇ ಸಮರ್ ಮುಖರ್ಜಿಯವರಿಗೂ ದೊರೆಯಿತು. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಈ ವಿಷಯ ಕುರಿತು ನಡೆದ ವಾದದ ಸಂಕ್ಷಿಪ್ತ ವರದಿಯೊಂದನ್ನು ವಿಶ್ವನಾಥ ಮೇನೋನ್ ನನಗೆ ತಂದುಕೊಟ್ಟರು. ಈ ಘಟನೆಯ ಬಳಿಕ ನಾನು ವಿಶ್ವನಾಥ ಮೇನೋನರೊಡನೆ ನಿರಂತರವಾಗಿ ಸಂಪರ್ಕವಿಟ್ಟುಕೊಂಡಿದ್ದೆ.

ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಮುಂತಾದವರಿಗೆ ವಿಜ್ಞಾಪನೆ ಕಳುಹಿಸುವಾಗಲೆಲ್ಲ ನಾನು ಅದರ ಒಂದೊಂದು ಪ್ರತಿಯನ್ನು ಎಲ್ಲಾ ಪಾರ್ಲಿಮೆಂಟ್ ಸದಸ್ಯರಿಗೂ ಕಳುಹಿಸಿದ್ದೆ. ಆದರೆ ಎ.ಕೆ.ಜಿ., ವಿಶ್ವನಾಥ ಮೇನೋನ್ ಹಾಗೂ ಪಾಡ್ಯಂರಾಜನನ್ನು ಹೊರತುಪಡಿಸಿ ಇತರರು ಯಾರೂ ಪ್ರತಿಕ್ರಿಯೆ ನೀಡಲಿಲ್ಲ. ತಮಗಾರಿಗೂ ಈ ನಿವೇದನೆಗಳ ಪ್ರತಿ ದೊರೆಯಲಿಲ್ಲ ಎಂದೇ ಇವರೆಲ್ಲರೂ ಹೇಳಿದರು. ಏನೇ ಆದರೂ ಎ.ಕೆ.ಜಿ., ವಿಶ್ವನಾಥ ಮೇನೋನ್ ಹಾಗೂ ಪಾಡ್ಯಂರಾಜನ್ ಅವರೊಡನೆ ಅಂಚೆ ಇಲಾಖೆಗೆ ಪ್ರತ್ಯೇಕವಾದ ಮಮತೆ ಇದೆಯೆಂದು ಯಾರಿಗಾದರೂ ಸಂದೇಹವಿದ್ದರೆ ದೂರು ಹೇಳದ ರೀತಿಯಲ್ಲಿ ಇತರ ಸದಸ್ಯರ ವರ್ತನೆ ಇತ್ತು. ಜನಸಾಮಾನ್ಯರೊಡನೆ ಜನಪ್ರತಿನಿಧಿಗಳು ಯಾವ ರೀತಿ ವರ್ತಿಸುತ್ತಾರೆಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಈ ಜನಪ್ರತಿನಿಧಿಗಳಲ್ಲಿ ಕೆಲವರು ನನ್ನ ಉತ್ತಮ ಸ್ನೇಹಿತರೂ ಆಗಿದ್ದರು. ಉದಾಹರಣೆಗೆ ತ್ರಿಶೂರ್ ಎಂ.ಪಿ. ಆಗಿದ್ದ ಸಿ. ಜನಾರ್ದನನ್, ವಯಲಾರ್ ರವಿ ಮುಂತಾದವರು. ನನ್ನ ವಿಜ್ಞಾಪನೆ ಕೈಸೇರಿದೆ ಎಂದು ಒಪ್ಪಿಕೊಳ್ಳಲು ಇವರಲ್ಲಿ ಹಲವರು ಖಂಡಿತ ಸಿದ್ಧರಿರಲಿಲ್ಲ. ಜನಪ್ರತಿನಿಧಿ ಎಂಬ ಪದವಿಗೆ ಇವರಿಗೆ ಎಷ್ಟು ಅರ್ಹತೆ ಇದೆ ಎಂದು ಓದುಗರೇ ತೀರ್ಮಾನಿಸಿದರೆ ಸಾಕು.

ಈ ಸಮಸ್ಯೆಯನ್ನು ಕೈಗೆತ್ತಿಕೊಂಡ ಬಳಿಕ ವಿಶ್ವನಾಥ ಮೇನೋನ್ ಹಲವು ಬಾರಿ ದೆಹಲಿಗೆ ಹೋಗಿದ್ದಾರೆ. ನನ್ನ ಈ ನಿವೇದನೆಗಳ ಪ್ರತಿಗಳು ಕೈಸೇರಿದೊಡನೆ ಅವರು ಅವುಗಳನ್ನು ಕರುಣಾಕರರಿಗೆ ಕಳುಹಿಸುತ್ತಿದ್ದರು. ಆದರೆ ಒಂದೇ ಒಂದು ಮನವಿಗೂ ಅವರಿಂದ ಉತ್ತರ ದೊರೆಯಲಿಲ್ಲ.

ಒಂದು ಬಾರಿ ಕರುಣಾಕರ ಮತ್ತು ವಿಶ್ವನಾಥ ಮೇನೋನ್ ದೆಹಲಿಯಿಂದ ಒಂದೇ ವಿಮಾನದಲ್ಲಿ ಬಂದರು. ಅವರು ಕರುಣಾಕರನೊಡನೆ, "ನಾವೆಲ್ಲರೂ ಜನಪ್ರತಿನಿಧಿಗಳಲ್ಲವಾ? ನಾವು ನಿಮಗೆ ಪತ್ರವನ್ನೇನಾದರೂ ಕಳುಹಿಸಿದರೆ ಅದಕ್ಕೆ ಉತ್ತರ ಕೊಡುವ ಸಹೃದಯತೆಯನ್ನಾದರೂ ತೋರಿಸಬಾರದೇ?" ಎಂದು ಕೇಳಿದರು.

"ನಾನು ನಿಮಗೆಲ್ಲರಿಗೂ ಉತ್ತರ ಬರೆಯುತ್ತಿರುತ್ತೇನಲ್ಲಾ?" ಕರುಣಾಕರನ ಉತ್ತರವಾಗಿತ್ತು. ಆಗ ವಿಶ್ವನಾಥ ಮೇನೋನ್ ನನ್ನ ಮನವಿಯ ಕುರಿತು ಜ್ಞಾಪಿಸಿದರು. "ಅಂತಹ ಒಂದು ಪತ್ರ ದೊರೆತ ನೆನಪಿಲ್ಲ" ಎಂದನು ಕರುಣಾಕರ. "ಪುನಃ ಮತ್ತೊಂದು ಮನವಿ ಕಳುಹಿಸಿದರೆ ಬೇಕಾದಂತೆ ಮಾಡಬಹುದು" ಎಂದೂ ಸೇರಿಸಿದನಾತ. ಹಾಗೆಯೇ ಮೇನೋನ್ ನನ್ನ ಮನವಿಯ ಜೊತೆಯಲ್ಲಿ ಒಂದು ಪತ್ರವನ್ನೂ ಸೇರಿಸಿ ಕರುಣಾಕರನಿಗೆ ಕಳುಹಿಸಿ ಕೊಟ್ಟರು. ತಡಮಾಡದೆ ಅದಕ್ಕೆ ಉತ್ತರವೂ ದೊರೆಯಿತು.

"ಪೊಲೀಸ್ ಹಿಡಿದುಕೊಂಡು ಹೋದ ತನ್ನ ಮಗನನ್ನು ಕಾಣುವುದಿಲ್ಲವೆಂದೂ, ದಯವಿಟ್ಟು ಅವನನ್ನು ಕಂಡುಹಿಡಿದು ವಿವರ ತಿಳಿಸಬೇಕೆಂದೂ ಪ್ರೊಫೆಸರ್ ಈಚ್ಚರ ವಾರಿಯರ್ ಅವರ ಪತ್ರದೊಡನೆ ಬರೆದು ಕಳುಹಿಸಿದ ತಮ್ಮ ಪತ್ರ ಕೈಸೇರಿದೆ. ಪ್ರಸ್ತುತ ವಿಷಯದ ಕುರಿತು ಆಲೋಚಿಸುತ್ತಿದ್ದೇನೆ" ಎಂಬುದಾಗಿತ್ತು ಆ ಉತ್ತರ.

ಈ ಪತ್ರ ಮತ್ತು ಈ ವಿಶಿಷ್ಟ ಶಬ್ದವಾದ 'ಪ್ರಸ್ತುತ ವಿಷಯ' ಎಂಬ ಶಬ್ದ ನನ್ನ ಹೇಬಿಯಸ್ ಕಾರ್ಪಸ್ ಪಿಟಿಶನ್ ವಿಚಾರಣೆಯ ಸಂದರ್ಭದಲ್ಲಿ ಬಹಳ ಕೋಲಾಹಲವನ್ನೇ ಸೃಷ್ಟಿಸಿತು. ಈ 'ಪ್ರಸ್ತುತ ವಿಷಯ' ಏನೆಂಬುದರ ಕುರಿತು ಎರಡೂ ನ್ಯಾಯಾಲಯಗಳಲ್ಲೂ ದೊಡ್ಡ ಚರ್ಚೆಯೇ ನಡೆಯಿತು. ಶ್ರೇಷ್ಠ ನ್ಯಾಯಾಲಯದಲ್ಲಿ ಅಡ್ವೊಕೇಟ್ ರಾಮಕುಮಾರ್ ಇದನ್ನು ಸಾರ್ವಜನಿಕವಾಗಿ ಅನುವಾದಿಸಿ ತಿಳಿಸಿದರು. ಶ್ರೇಷ್ಠ ನ್ಯಾಯಾಲಯದಲ್ಲೂ ಬಹಳ ಕೋಲಾಹಲವೇ ಉಂಟಾಯಿತು. ಹಾಗೇ ಈ ಪದಪ್ರಯೋಗ ಮತ್ತು ವಿಶ್ವನಾಥ ಮೇನೋನ್ ಈ ಮೊಕದ್ದಮೆಯ ವಿಷಯದಲ್ಲಿ ಪ್ರತ್ಯೇಕವಾದ ಗೌರವಕ್ಕೆ ಅರ್ಹರಾಗುತ್ತಾರೆ.

* * * * *

ನಾನು ಪ್ರಧಾನಮಂತ್ರಿ ಮತ್ತು ಅಧ್ಯಕ್ಷರಿಗೆ ಕಳುಹಿಸುತ್ತಿದ್ದ ಮನವಿಗಳ ಆಧಾರದಲ್ಲಿ ಅಸಂಖ್ಯ ಪೊಲೀಸ್ ಅಧಿಕಾರಿಗಳು ನನ್ನನ್ನು ಪ್ರಶ್ನಿಸಿದ್ದಾರೆ. "ನಿಮ್ಮ ಮಗನು ಎಲ್ಲಿಗೆ ಹೋಗಿದ್ದಾನೆ" ಎಂಬುದೇ" ಹಲವರ ಪ್ರಥಮ ಪ್ರಶ್ನೆಯಾಗಿತ್ತು. ಈ ಉದ್ಯೋಗಿಗಳೆಡೆಯಲ್ಲಿ ಸಿ.ಐ.ಬಿ.ಯ ಎರ್ನಾಕುಲಂ ಜಿಲ್ಲೆಯ ಪೊಲೀಸ್ ಎಸ್.ಪಿ. ಬಾಲಕೃಷ್ಣ ಪಿಳ್ಳೈ ಎಂಬುವರು ತನ್ನನ್ನು ಭೇಟಿಯಾಗಬೇಕೆಂದು ನನ್ನ ಬಳಿಗೆ ಜನ ಕಳುಹಿಸಿದರು. ಅದು ಪ್ರತ್ಯೇಕವಾದ ಬೇರೆ ಒಂದು ಅನುಭವವಾಗಿತ್ತು.

ಸಿ.ಐ.ಬಿ. ಎಂಬ ಹೊಸ ವಿಭಾಗದಲ್ಲಿರುವವರಾಗಿರಬೇಕೆಂದುಕೊಂಡು ನಾನು ಈ ಸಿ.ಐ.ಬಿ.ಯ ಎಸ್.ಪಿ.ಯವರ ಮುಂದೆ ಹಾಜರಾದೆ. ನಾನು ತ್ರಿಶೂರಿನ ಸೈಂಟ್ ಥಾಮಸ್ ಕಾಲೇಜಿನಲ್ಲಿ ಕೆಲಸ ಮಾಡಿದ್ದೆ. ಆ ಸಮಯದಲ್ಲಿ ಈಗ ಸಿ.ಐ.ಬಿ. ಅಧಿಕಾರಿ ಅಲ್ಲಿ ಅಧ್ಯಾಪಕರಾಗಿದ್ದರು. ಆ ಬಳಿಕ ಐ.ಪಿ.ಎಸ್. ಪಡೆದುಕೊಂಡು ಈ ಸಿ.ಐ.ಬಿ.ಯಲ್ಲಿ ಸೇರಿದ್ದರು. ನಾನು ಸೈಂಟ್ ಥಾಮಸ್‌ನಲ್ಲಿ ಕೆಲಸ ಮಾಡುವಾಗ ಆತ ಅಲ್ಲಿ ಕೆಲಸದಲ್ಲಿರಲಿಲ್ಲ. ನಾನು ಆತನ ಭೇಟಿಗಾಗಿ ಹೋಗುವಾಗ ಎ.ಜಿ. ಆಫೀಸಿನಲ್ಲಿ ಲೆಕ್ಕಾಧಿಕಾರಿಯಾಗಿರುವ ನನ್ನ ತಮ್ಮ ಕೃಷ್ಣನ್ ಕುಟ್ಟಿ ವಾರಿಯರ್ ಕೂಡಾ ನನ್ನೊಡನಿದ್ದನು.

ನಾವು ಪರಸ್ಪರ ಪರಿಚಯ ಮಾಡಿಕೊಂಡೆವು. ಪೊಲೀಸ್ ಅಧಿಕಾರಿ ನನ್ನ ತಮ್ಮನೊಡನೆ ಕೊಂಚ ಹೊರಗಿರಲು ಹೇಳಿದರು. ಬಳಿಕ ಆ ಅಧಿಕಾರಿ ನನ್ನೊಡನೆ ಒಂದು ಪ್ರಶ್ನೆ ಕೇಳಿದರು. "ನಾನು ತಮ್ಮ ಮಗನನ್ನು ಬಿಡುಗಡೆ ಮಾಡಿಸಿಕೊಡುತ್ತೇನೆ. ಆದರೆ ಬಿಡುಗಡೆಯ ಬಳಿಕ ಆತನಿಂದ ಏನು ಮಾಡಿಸಬೇಕೆಂದು ಕೊಂಡಿದ್ದೀರಿ?" ಈ ಪ್ರಶ್ನೆ ನನ್ನನ್ನು ಅಸ್ವಸ್ಥಗೊಳಿಸಿತು. ಅದರ ಉದ್ದೇಶವೇನೆಂದು ಕೂಡಲೇ ನನಗೆ ಮನವರಿಕೆಯಾಗಲಿಲ್ಲ.

ರಾಜನು ಎಂಜಿನಿಯರಿಂಗ್ ಪೂರ್ತಿಯಾಗಿಸಬೇಕೆಂಬುದು ನನ್ನ ಉದ್ದೇಶ ಎಂದು ನಾನಂದೆ. ಆಗ "ಅದು ಬೇಡ" ಎಂದನು ಆ ಅಧಿಕಾರಿ. ನಾನು ಆಶ್ಚರ್ಯಚಕಿತನಾದೆ. ಆತನ ಉದ್ದೇಶವೇನೆಂದು ನನಗೆ ಅರ್ಥವಾಗಲಿಲ್ಲ. ಆಗ ಪೊಲೀಸ್ ಅಧಿಕಾರಿ ನಾಟಕೀಯವಾಗಿ "ರಾಜನು ನಕ್ಸಲೈಟರೊಡನೆಯೇ ಮುಂದುವರಿಯಲಿ. ಹಾಗೆ ಮುಂದುವರಿದು ನಕ್ಸಲೈಟ್‌ಗಳ ಕಾರ್ಯಕ್ರಮಗಳನ್ನು ನಮಗೆ ತಿಳಿಸುತ್ತಿರಬೇಕು." ರಾಜನ್ ನಕ್ಸಲೈಟರ ಮಧ್ಯದಲ್ಲಿ ಓರ್ವ ಪೊಲೀಸ್ ಏಜಂಟ್ ಆಗಿ ಕಾರ್ಯ ನಿರ್ವಹಿಸಬೇಕು ಎಂಬುದು ಆತನ ಮಾತಿನ ಅರ್ಥವಾಗಿತ್ತು.

ನಾನು ಭ್ರಮಾಧೀನನಾದೆ. ರಾಜನನ್ನು ಕಾಣಬೇಕೆಂಬ ಉತ್ಕಟಾಸೆ ಒಂದು ನಿಮಿಷ ಬಹಳ ಶಕ್ತಿಯುತವಾಯಿತು. ಅಸ್ಪಷ್ಟವಾದ ಯಾವುದೋ ಒಂದು ನೆನಪು ನನ್ನನ್ನು ಆವರಿಸಿಕೊಳ್ಳತೊಡಗಿತು. ಬಳಿಕ ನಾನು ನನ್ನನ್ನು ನಿಯಂತ್ರಿಸಿಕೊಂಡೆ. ಈ ವ್ಯವಸ್ಥೆಗನುಸಾರವಾಗಿ ರಾಜನನ್ನು ಹೊರಗೆ ತರುವುದಕ್ಕಿಂತ ಅವನು ಪೊಲೀಸ್ ಕಸ್ಟಡಿಯಲ್ಲಿದ್ದರೇನೇ ಹೆಚ್ಚು ಸುರಕ್ಷಿತನಾಗಿರುತ್ತಾನೆ ಎಂದು ನನ್ನ ನಂಬಿಕೆಯಾಗಿತ್ತು ಮಾತ್ರವಲ್ಲ ಈ ವ್ಯವಸ್ಥೆಯಲ್ಲಿನ ಅಧಾರ್ಮಿಕತೆ ನನ್ನನ್ನು ಅಧೀರನನ್ನಾಗಿಸಿತು.

"ರಾಜನು ನಿಮ್ಮ ಕೈಯಲ್ಲೇ ಇರಲಿ. ಈ ವ್ಯವಸ್ಥೆಯನ್ನು ಅಂಗೀಕರಿಸಿ ಅವನನ್ನು ಹೊರಗೆ ತರಲು ನಾನು ಇಚ್ಛಿಸುವುದಿಲ್ಲ" ನಾನಂದೆ. ಇದನ್ನು ಕೇಳಿದೊಡನೆ ಆ ಅಧಿಕಾರಿ ತನ್ನ ನಿಲುವನ್ನು ಬದಲಾಯಿಸಿದನು. "ಸರ್ ಹೋಗಿ ಹದಿನೈದು ದಿವಸಗಳೊಳಗೆ ರಾಜನನ್ನು ಬಿಡುಗಡೆ ಮಾಡುವೆವು" ಎಂದು ಆತ ಹೇಳಿದನು.

ಇದನ್ನು ಕೇಳಿದೊಡನೆ ನನಗೆ ಬಹಳ ಸಂತೋಷವಾಯಿತು. ರಾಜನು ಬಿಡುಗಡೆಗೊಳ್ಳುತ್ತಾನೆಂದಲ್ಲ, ಬದಲಾಗಿ ರಾಜನು ಬದುಕಿದ್ದಾನೆಂಬ ಆಶ್ವಾಸನೆಯಾಗಿ

ನಮ್ಮವರ ಸ್ವಗತ

■ ಬಾಜಾವಲಿ ಈಚನಾಳ,
ಲಿಂಗಸುಗೂರು

ನೋವ ನುಂಗಿ ಅಗಣಿತ
ಗಣಿಯ ಗರ್ಭದಲಿಳಿದು
ಬಂಗಾರ ತೆಗೆದು
ಬೆಂದು-ಬಸವಳಿದು
ನಿಮ್ಮ ಸೌಂದರ್ಯ [illegible]
[illegible] ಬೀಗಿದವರು ನಾವು!

ಮಳೆ-ಚಳಿ-ಗಾಳಿ-ಬಿಸಿಲೆನ್ನದೆ
[illegible] ಮಡಿಲಲ್ಲಿ
ಮೈಯ್ಯ ಮುರಿದು, ಬೆವರ
ಸುರಿದು, ದವಸ-ಧಾನ್ಯ ಬೆಳೆದು
ನಿಮ್ಮ ಮನೆಯಲಿ [illegible]
[illegible] ನಾವು!

ಗಡಿಯ ಗಲಾಟೆಯಲಿ ಗಸ್ತು
ಹೊಡೆಯುತ್ತ, ವೈರಿಗಳ
ಗುಂಡಿಗೆ ಗುಂಡಿಗೆಯನು
ಒಡ್ಡುತ್ತಾ, ಸಿಂಹಾಸನದಿ
ಮೆರೆವ ನಿಮ್ಮ ಐಷಾರಾಮಿ
ಬದುಕಿಗೆ ಗೋರಿಯಾದವರು ನಾವು!

ಹಾಲುಣಿಸಿ ಹಾಲಹಲವುಂಡು
ನೀಲಕಂಠರಾದೆವು, ಕಷ್ಟದ
ಕುಲುಮೆಯಲಿ ಕುದ್ದೂ
ಶುದ್ಧರಾಗದೆ ನಿರ್ದಯ ಧಣಿಗಳಿಗೆ
ಅಡಿಯಾಳಾಗಿ ತ್ಯಾಗ-
[illegible] ಸಾಕ್ಷಿಯಾದವರು ನಾವು!

ನಾನವನನ್ನು ಕಂಡೆ. ಆದರಿಂದಾಗಿ ನಾನು ಕೊಂಚ ಸಂತೃಪ್ತಿ ಪಡೆದೆ. ಈ ಪೊಲೀಸ್ ಅಧಿಕಾರಿಗೆ ರಾಜನು ಓರ್ವ ನಕ್ಸಲೈಟ್ ಆಗಿದ್ದನೆಂಬ ವಿಷಯದಲ್ಲಿ ಯಾವ ಸಂದೇಹವೂ ಇರಲಿಲ್ಲ. ಆದರೆ ರಾಜನು ನಕ್ಸಲೈಟ್ ಎಂದು ತೀರ್ಮಾನಿಸಲು ಇವರ ಕೈಯಲ್ಲಿ ಯಾವ ಸಾಕ್ಷ್ಯವೂ ಇರಲಿಲ್ಲ. ಅವರ ಅನ್ವೇಷಣೆಯ ರೀತಿ ಇದಾಗಿತ್ತು. ಇದು ನನ್ನ ಅಪರಾಧ ತನಿಖೆ ವಿಭಾಗದ ಓರ್ವ ಉನ್ನತ ಅಧಿಕಾರಿಯಿಂದುಂಟಾದ ಅನುಭವವಾಗಿತ್ತು. ಆತನು ಮುಂದಿಟ್ಟ ಕರಾರನ್ನು ನಾನು ಒಪ್ಪಿಕೊಂಡು, ರಾಜನನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದರೆ ಆತನೇನು ಮಾಡುತ್ತಿದ್ದ? ರಾಜನನ್ನು ತಂದುಕೊಡಲು ಆತನಿಂದ ಹೇಗೆ ಸಾಧ್ಯವಾಗುತ್ತಿತ್ತು?

ಈ ಪೊಲೀಸ್ ಅಧಿಕಾರಿಯ ಕೈಯಲ್ಲಿ ತನಿಖೆಗಾಗಿ ದೊರೆತದ್ದು ನಾನು ಅಧ್ಯಕ್ಷರಿಗೆ ಕಳುಹಿಸಿದ ಮನವಿ ಮಾತ್ರ. ಅಧ್ಯಕ್ಷರ ನಿರ್ದೇಶನದ ಪ್ರಕಾರವಿರುವ ತನಿಖೆ ಇಂತಹುದ್ದಾದರೆ ಉಳಿದ ವಿಷಯಗಳ ತನಿಖೆ ಹೇಗಿರಬಹುದು? ಪೊಲೀಸ್ ಇಲಾಖೆಯ ಇಷ್ಟು ದೊಡ್ಡ ಸ್ಥಾನದಲ್ಲಿರುವ ಓರ್ವ ಅಧಿಕಾರಿಗೆ ರಾಜನು ಬದುಕಿಲ್ಲ ಎಂಬ ಯಥಾಸ್ಥಿತಿ ತಿಳಿದಿರಲಿಲ್ಲ ಎಂದು ಊಹಿಸಲು ಸಾಧ್ಯವಾ? ಸಾಧ್ಯವಿಲ್ಲ. ಮತ್ತೇಕೆ ಇಂತಹ ಒಂದು ನಾಟಕವಾಡಿದರು? ಅದು ಇಂದಿಗೂ ಅಜ್ಞಾತವಾಗಿದೆ.


ಇದರ ಬಳಿಕ ನಾನು ಹಲವಾರು ಬಾರಿ ಈ ಪೊಲೀಸ್ ಅಧಿಕಾರಿಯನ್ನು ಎರ್ನಾಕುಲಂ ನಗರದಲ್ಲಿ ಭೇಟಿಯಾಗಿದ್ದೆ. ಆಗೆಲ್ಲ ನನ್ನನ್ನು ನೋಡಿಯೂ ನೋಡದಂತೆ ಮಾಡಿ ಮುಖ ತಿರುಗಿಸಿ ಹೊರಟು ಹೋಗುತ್ತಿದ್ದನಾತ. ನನ್ನನ್ನು ಎದುರಿಸಲು ಈವರೆಗೂ ಧೈರ್ಯವಹಿಸಿಲ್ಲ.

ರಾಜನ ಬಂಧನದ ಬಳಿಕ ಹಲವಾರು ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳೊಡನೆ ನಾನು ಸಂಪರ್ಕ ಪಡೆದಿದ್ದೆ. ಆದರೆ ಪ್ರಾಮಾಣಿಕವಾಗಿ ಅಪರಾಧ ಸಾಬೀತುಪಡಿಸಲು ಆಗ್ರಹವಿರುವ ಒಬ್ಬನೇ ಒಬ್ಬ ಅಧಿಕಾರಿಯನ್ನೂ ನಾನು ಕಂಡಿಲ್ಲ ಎಂದು ಹೇಳಲು ನನಗೆ ಸಾಧ್ಯವಿದೆ. ಅಪರಾಧ ಸಾಬೀತು ಪಡಿಸಲು ಶಾಸ್ತ್ರೀಯವಾದ ನೂರಾರು ಹಾದಿಗಳು ಪೊಲೀಸರ ಮುಂದಿದೆ. ತರಬೇತಿ ಸಮಯದಲ್ಲಿ ಇವೆಲ್ಲವುಗಳ ಕುರಿತು ಅವರಿಗೆ ಸಮನಾದ ಮಾರ್ಗದರ್ಶನ ದೊರೆಯುತ್ತದೆ. ಆದರೆ ಅಂತಹ ಸಮನಾದ ಹಾದಿಯಲ್ಲಿ ಇವರಾರೂ ಮುನ್ನಡೆಯುವುದಿಲ್ಲ. ಅವರಿಗೆ ಸಂಬಂಧ ಪಟ್ಟಂತೆ ತುಂಬಾ ಸುಲಭದ ಹಾದಿಯಾದ ಮರ್ದನದ ಹಾದಿಯೇ ಮುಂದಿರುವಾಗ ಬೇರೆ ಹಾದಿಗಳನ್ನು ಯಾಕೆ ಹುಡುಕಬೇಕು? ರಾಜನ ಕುರಿತು ಹೇಳುವುದಾದರೆ ತಾಯಣ್ಣಾ ಪೊಲೀಸ್ ಠಾಣೆ ಆಕ್ರಮಣದಲ್ಲಿ ರಾಜನು ಭಾಗವಹಿಸಿದ್ದನೆಂದು ಅವನನ್ನು ಬಂಧಿಸುವುದಕ್ಕೆ ಮೊದಲೇ ಪೊಲೀಸರು ತೀರ್ಮಾನಿಸಿದ್ದರು. ರಾಜನ ವಿಷಯದಲ್ಲಿ ಅವನು ಆ ದಿನ ಆ ಪ್ರದೇಶದಲ್ಲೇ ಇರಲಿಲ್ಲ ಎಂಬುದನ್ನು ಸಾಬೀತುಪಡಿಸಲು ಯಾವ ತೊಂದರೆಯೂ ಇರಲಿಲ್ಲ. ಆದರೆ ರಾಜನ ಕುರಿತು ತನಿಖೆ ನಡೆಸಬೇಕೆಂದು ಯಾರಿಗೂ ಅನ್ನಿಸಲಿಲ್ಲ. ಅತ್ಯುತ್ತಮ ಭವಿಷ್ಯವಿದ್ದ ಓರ್ವ ಯುವಕನ ನಿರಪರಾಧದ ಕುರಿತು ಒಬ್ಬನೇ ಒಬ್ಬ ಪೊಲೀಸ್ ಅಧಿಕಾರಿಯೂ ಉತ್ಕಟಿತನಾಗಲಿಲ್ಲ. ಆದುದರಿಂದಲೇ ಪೊಲೀಸರೆಂದರೆ ಒಂದು ಮರ್ದನದ ಉಪಕರಣವೆಂಬ ನನ್ನ ಅನಿಸಿಕೆ ಬಹಳ ಸರಿಯಾಗಿದೆ ಎಂದು ನಾನಂದು ಕೊಂಡಿದ್ದೇನೆ.

ರಾಜನ ಕುರಿತ ಅನ್ವೇಷಣೆ ಮುಂದುವರಿಸಬೇಕೆಂಬುದೇ ನನ್ನ ವಿಧಿಯಾಗಿತ್ತು. ಒಂದೊಂದು ತನಿಖೆ ಕೂಡಾ ವೇದನೆಯ ಕಹಿ ನೀರನ್ನೇ ನನಗೆ ಬಹುಮಾನವಾಗಿ ನೀಡಿತು. ಪೊಲೀಸ್ ಕಸ್ಟಡಿಯಲ್ಲಿ ನನ್ನ ಮಗ ಬದುಕಿರಬಹುದೆಂದು ನಾನು ಬಹುವಾಗಿ ನಿರೀಕ್ಷಿಸಿದ್ದೆ. ಆದರೆ ನನ್ನ ಮಹತ್ವಾಕಾಂಕ್ಷೆಗೆ ಗಾಯವುಂಟುಮಾಡಿಕೊಂಡು ರಾಜನ ಅನುಪಸ್ಥಿತಿ ಒಂದು ವಾಸ್ತವವಾಗಿ ಮುಂದು ವರಿಯಿತು. ಹಲವು ರಾತ್ರಿಗಳಲ್ಲಿ ನಾನವನನ್ನು ಕನಸು ಕಂಡೆ. ಅವನ ಬಾಲ್ಯ ಮತ್ತು ಕೌಮಾರ್ಯವನ್ನು ಹಿಂದೆಂದೂ ಇಲ್ಲದಂತಹ ರೀತಿಯಲ್ಲಿ ನಾನು ಜ್ಞಾಪಿಸಿಕೊಳ್ಳತೊಡಗಿದೆ. ಅಸ್ವಾಸ್ಥ್ಯದಿಂದ ಕೂಡಿದ ಗಂಟೆಗಳಲ್ಲಿ ಅವನ ಒಳ್ಳೆಯ ನೆನಪುಗಳಲ್ಲಿ ನಾನು ಮುಳುಗಿದೆ. ಈ ಸಂದರ್ಭದಲ್ಲಿ ರಾಜನ ತಾಯಿ ಪೂರ್ತಿಯಾಗಿ ಮಾನಸಿಕ ರೋಗಿಯಾದಳು. ಆತನ ಸಹೋದರಿಯರು ಯಾವಾಗಲೂ ಅಳುತ್ತಿದ್ದರು.

ರಾಜನು ಹಾಡುವುದನ್ನು ರೆಕಾರ್ಡ್ ಮಾಡಿದ ಕೆಲವು ಕ್ಯಾಸೆಟ್ಟುಗಳು ನನ್ನ ಕೈಯಲ್ಲಿದ್ದವು. ಒಂದು ಕಪ್ಪು ಬಿಳಿಯ ಟೇಪ್‌ರೆಕಾರ್ಡ್‌ನಲ್ಲಿಟ್ಟು ನಾನು ಅವನ ಹಾಡುಗಳನ್ನು ಆಗಾಗ ಕೇಳುತ್ತಿದ್ದೆ. ವಿಷಾದದಿಂದ ತುಂಬಿದ ಒಂದು ಹಾಡಿನ ನಡುವೆ ಅವನು ನನ್ನೊಡನೆ ಸಂಭಾಷಿಸಿದನು. ಪ್ರೀತಿ ತುಂಬಿದ ಈ ಶಬ್ದವನ್ನು ನನ್ನಿಂದ ಕಿತ್ತುಕೊಳ್ಳಬೇಡ ಎಂದು ಹಲವು ಬಾರಿ ನಾನು ದೇವರೊಡನೆ ಕಣ್ಣೀರು ತುಂಬಿ ಪ್ರಾರ್ಥಿಸಿದೆ.

(ಮುಂದುವರೆಯುತ್ತದೆ)



ವಯಸ್ಸಾದ ನಂತರ ಹೆಣ್ಣುಮಕ್ಕಳು ಸಹಶಿಕ್ಷಣ ನೀಡುವ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣವನ್ನು ಪಡೆಯಬಹುದೇ?

ಫತ್ವಾ: ವಯಸ್ಸಾದ ನಂತರ ಹೆಣ್ಣುಮಕ್ಕಳು ಪರ್ದಾ ಧರಿಸದೆ ಪುರುಷರೊಂದಿಗೆ ಬೆರೆಯಬಾರದು. ಪ್ರಸಕ್ತ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕೆಡುಕು ಉಂಟಾಗುವ ಬಹಳಷ್ಟು ಸಂದರ್ಭಗಳಿವೆ. ಆದುದರಿಂದ ಸಹಶಿಕ್ಷಣ ನೀಡುವ ವಿದ್ಯಾಸಂಸ್ಥೆಗಳಿಗೆ ಹೆಣ್ಣುಮಕ್ಕಳನ್ನು ವಿದ್ಯಾರ್ಜನೆಗಾಗಿ ಕಳುಹಿಸತಕ್ಕದ್ದಲ್ಲ.

ದಾರುಲ್-ಉಲೂಮ್ ದೇವ್‌ಬಂದ್‌ನ ದಾರುಲ್ ಇಫ್ತಾದವರು ನೀಡಿರುವರು ಎಂದು ಮಾಧ್ಯಮಗಳಲ್ಲಿ ವರದಿಯಾಗಿರುವ ಫತ್ವಾದ ಸಾರಾಂಶ ಮೇಲ್ಕಂಡಂತೆ ಇದೆ. ಅಲಿಗಢದ ಒಬ್ಬ ವ್ಯಕ್ತಿಯ ಪ್ರಶ್ನೆಗೆ ಉತ್ತರ ರೂಪವಾಗಿ ಈ ಫತ್ವಾವನ್ನು ಜಾರಿಗೊಳಿಸಲಾಗಿದೆ. ಇವತ್ತಿನ ಸಂದರ್ಭದಲ್ಲಿ ಪ್ರತಿಯೊಂದು ಫತ್ವಾವನ್ನು ಕೂಡಾ ಮಾಧ್ಯಮವು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುವುದರಿಂದ, ಈ ಫತ್ವಾ ಕೂಡಾ ಸಾಕಷ್ಟು ಚರ್ಚೆಗೊಳಗಾಗಿದೆ. ನಾನು ಈ ಫತ್ವಾದ ಸಿಂಧುತ್ವದ ಬಗ್ಗೆಯಾಗಲೀ ಅಥವಾ ಫತ್ವ ನೀಡುವ ಪ್ರಾಧಿಕಾರದ ವಿವರಣೆಯನ್ನಾಗಲೀ ಬಯಸುವುದಿಲ್ಲ. ಈ ಫತ್ವಾಗಳ ಹಿನ್ನೆಲೆಯ ಬಗ್ಗೆ ನಾನು ಕ್ಷ-ಕಿರಣವನ್ನು ಬೀರಲು ಇಚ್ಛಿಸುತ್ತೇನೆ.

ಸುಮಾರು 100 ವರ್ಷಗಳ ಹಿಂದೆ ಇರಾನಿನಲ್ಲಿ ಒಬ್ಬ ಆಯತುಲ್ಲಾ ಯಾವುದೋ ಒಂದು ಕಾರಣಕ್ಕಾಗಿ ತಂಬಾಕು ಸೇವನೆಯನ್ನು ನಿಷಿದ್ಧಗೊಳಿಸಿ ಒಂದು ಫತ್ವಾ ಹೊರಡಿಸಿದ. ಇರಾನಿನ ಬಾದಷಾಹನಾಗಿದ್ದ ಶಾಹ್ ಖಾಚಾರ್ ಹುಕ್ಕ ಪ್ರಿಯನಾಗಿದ್ದ. ಬೆಳಗಾದೊಡನೆಯೇ ಆತ ಹುಕ್ಕ ತರುವಂತೆ ಹುಕುಮ್ ನೀಡಿದ. ಎಲ್ಲಾ ಹುಕ್ಕಗಳನ್ನು ಹೊರಗೆಸೆದಿರುವುದಾಗಿ ಸೇವಕ ನುಡಿದು ತನ್ನ ಅಸಹಾಯಕತೆಯನ್ನು ಪ್ರಕಟಗೊಳಿಸಿದ ಮತ್ತು ಆಯತುಲ್ಲಾರ ಫತ್ವಾದ ಬಗ್ಗೆ ತಿಳಿಸಿದ. ಇದನ್ನು ಕೇಳಿದ ಕೂಡಲೇ ಶಾಹ್ ಸುಮ್ಮನಾದ. ಈ ಫತ್ವಾದ ದೆಸೆಯಿಂದ ಇರಾನಿನಲ್ಲಿ ತಂಬಾಕಿನ ವಹಿವಾಟಿನ ಏಕಸ್ವಾಮ್ಯತೆಯನ್ನು ಪಡೆದಿದ್ದ ಬ್ರಿಟಿಷರು ಕಂಗಾಲಾದರು. ಮತ್ತೆ ಫತ್ವಾ ಹೇಗೆ ಹಿಂದೆ ಪಡೆಯಲಾಯಿತು, ಹುಕ್ಕ ಹೇಗೆ ಮರು ಪ್ರವೇಶ ಪಡೆಯಿತು ಎಂಬ ವಿವರಗಳು ನಮಗೆ ತಿಳಿದುಬಂದಿಲ್ಲ.

ಈ ಪ್ರಸಂಗಗಳಲ್ಲಿ ಫತ್ವಾದ ಪ್ರಮುಖ ಪಾತ್ರದ ಬಗ್ಗೆ ಮಾತ್ರ ತಿಳಿಸಬೇಕಾಗಿದೆ. ದಾರುಲ್-ಉಲೂಮ್ ದೇವ್‌ಬಂದ್‌ನ ಫತ್ವಾ ಮತ್ತು ಆಯತುಲ್ಲಾನ ಫತ್ವಾ-ಇವೆರಡರ ನಡುವೆ ಭೂಮಿ-ಆಕಾಶದ ಅಂತರವಿದೆ. ಶಿಯಾ ಸಮುದಾಯದವರಿಗೆ ಆಯತುಲ್ಲಾರವರ ಫತ್ವಾ ಆದೇಶ (ಹುಕುಮ್)ವಾಗಿರುತ್ತದೆ. ಆ ಸಮುದಾಯದಲ್ಲಿ ಫತ್ವಾ ನೀಡುವ ಅಧಿಕಾರ ಆಯತುಲ್ಲಾಗೆ ಮಾತ್ರ ಇದೆ. ಮತ್ತು ಕಾಲಾಂತರಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಆಯತುಲ್ಲಾಗಳು ಮಾತ್ರ ಕಂಡುಬಂದಿದ್ದಾರೆ. ಆಯತುಲ್ಲಾರ ಫತ್ವಾಗಳನ್ನು ಹಿಂಬಾಲಕರು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಆದರೆ ನಮ್ಮಲ್ಲಿ ಫತ್ವಾ ನೀಡುವವರ ಒಂದು ದಂಡು ಇದೆ. ಮತ್ತು ಸುನ್ನಿ ಸಮುದಾಯದವರಲ್ಲಿ ಫತ್ವಾದ ಮುಖ್ಯ ಉದ್ದೇಶವೆಂದರೆ, ಅದೊಂದು ಶರೀಯತ್ ಕಾನೂನಿನ ಒಂದು ಅಭಿಪ್ರಾಯವಾಗಿದೆ ಫತ್ವಾದ ಅಭಿಪ್ರಾಯದ ಮೇರೆಗೆ ನಡೆದುಕೊಳ್ಳುವುದು ಅಥವಾ ಬಿಡುವುದು ಫತ್ವಾ ಕೋರಿದವನ ಇಚ್ಛೆಯನ್ನು ಅವಲಂಬಿಸಿದೆ. ಸುನ್ನಿ ಸಮುದಾಯದವರ ಮೇಲೆ ಆದೇಶದ ರೂಪದ ಹಾಗೂ ಎಲ್ಲರೂ ಕಡ್ಡಾಯವಾಗಿ ಪಾಲಿಸಲೇಬೇಕಾದ ಸ್ವರೂಪದ ಫತ್ವಾವನ್ನು ಜಾರಿಗೊಳಿಸಲು ಸಾಧ್ಯವಿಲ್ಲ.


ಆದರೆ ಮಾಧ್ಯಮದವರು, ಫತ್ವಾ ಎಂದೊಡನೆಯೇ ಕಡ್ಡಾಯವಾದ ಆದೇಶ ಎಂದು ಪರಿಗಣಿಸುತ್ತಾರೆ ಮತ್ತು ಪ್ರತಿಯೊಂದು ಫತ್ವಾ ಬಗ್ಗೆಯೂ ದೊಡ್ಡ ಗದ್ದಲವೆಬ್ಬಿಸಲಾಗುತ್ತದೆ. ಇದೊಂದು ಸಮಸ್ಯೆಯಾದಲ್ಲಿ ಫತ್ವಾ ನೀಡುವವರ ಸಮಸ್ಯೆಯನ್ನು ನೋಡೋಣ.

ಟಿ.ವಿ. ಕ್ಯಾಮೆರಾಗಳೆದುರು ಹಣವನ್ನು ಪಡೆದುಕೊಂಡ ಮುಫ್ತಿಗಳು ಮನಸೋ ಇಚ್ಛೆ ಫತ್ವಾವನ್ನು ನೀಡಿರುವುದನ್ನು ಕಳೆದ ವರ್ಷ ನೋಡಿದ್ದೇವೆ. ಇಮ್ರಾನಾಳಿಗೆ ಸಂಬಂಧಪಟ್ಟ ಫತ್ವಾ, ನ್ಯಾಯಯುತವಾಗಿ ನಿಕಾಹ್ ಮಾಡಿಕೊಂಡಿರುವ ಪತ್ನಿಯರ ಸಂಬಂಧವು ಹರಾಮ್ ಎಂದ ಮುರಾದಾಬಾದ್‌ನ ಫತ್ವಾ-ಈ ಪಟ್ಟಿಯು ಪ್ರತಿದಿನ ಉದ್ದವಾಗುತ್ತಲೇ ಹೋಗುತ್ತದೆ. ಯಾವಾಗ ಈ ಫತ್ವಾಗಳು ಮಾಧ್ಯಮದ ಎದುರು ಬರುತ್ತವೆಯೋ ಮತ್ತು ಮುಫ್ತಿಗಳ ಗೌರವವು ಚೆಲ್ಲಾಪಿ ಹೋಗುತ್ತದೆಯೋ ಆಗ ನಮ್ಮ ಧಾರ್ಮಿಕ ನಾಯಕತ್ವವು ಎಲ್ಲಾ ತಪ್ಪನ್ನು ಕೂಡಾ ಮಾಧ್ಯಮದವರ ತಲೆಗೆ ಸವರಿ ತೆಪ್ಪಗಾಗುತ್ತಾರೆ.

ಉರ್ದು ಮೀಡಿಯಾದವರು ಇಂತಹ ಸಂದರ್ಭಗಳಲ್ಲಿ ಅತ್ಯಂತ ಹೊಣೆಗಾರಿಕೆಯನ್ನು ಪ್ರದರ್ಶಿಸಿದ್ದಾರೆ. ಒಂದೆಡೆ ಫತ್ವಾ ಬಗ್ಗೆ ಇರುವ ತಪ್ಪು ಗ್ರಹಿಕೆಯನ್ನು ಹೋಗಲಾಡಿಸಲು ಮತ್ತು ರಾಷ್ಟ್ರದ ಮೀಡಿಯಾದವರ ಆಕ್ರಮಣಕಾರಿ ನಡವಳಿಕೆಯನ್ನು ಉರ್ದು ಮೀಡಿಯಾದವರು ನಿಗ್ರಹಿಸುವಂತಹ ಪಾತ್ರ ವಹಿಸುತ್ತಾ ಮತ್ತೊಂದೆಡೆ, ಫತ್ವಾಗಳನ್ನು ಹೊರಡಿಸುವ ಕ್ರಮವನ್ನು ಬದಲಾವಣೆ ಮಾಡಬೇಕಾದ ಅಗತ್ಯವನ್ನು ಮೌಲ್ವಿಗಳಿಗೆ ಮನವರಿಕೆ ಮಾಡುತ್ತಾ, ಫತ್ವಾಗಳನ್ನು ಅತ್ಯಂತ ಸಂಯಮ, ವಿವೇಚನೆಯಿಂದ ಕೂಡಿ, ಒಂದು ವೇದಿಕೆಯಿಂದ ನೀಡತಕ್ಕದ್ದು ಹಾಗೂ ಈ ಫತ್ವಾಗಳ ಬಗ್ಗೆ ಸೂಕ್ತ ವಿವರಣೆಯನ್ನು ನೀಡುತ್ತಾ ಮಾಧ್ಯಮದವರು ಆ ಸಂದರ್ಭದ ದುರ್ಬಳಕೆಯನ್ನು ಮಾಡಿಕೊಳ್ಳದಂತಹ ಯುಕ್ತಿಯನ್ನು ಪ್ರದರ್ಶಿಸಬೇಕೆಂದು ಕರೆ ನೀಡಿದ್ದಾರೆ.

ಆದರೆ ಮೌಲ್ವಿಗಳಿಗೆ ಉರ್ದು ಪತ್ರಿಕೆಗಳನ್ನು ಓದುವ ಪುರುಸೊತ್ತು ಇಲ್ಲವೆಂದು ಕಾಣುತ್ತದೆ. ಇಂತಹ ಸನ್ನಿವೇಶದಲ್ಲಿ ನನ್ನಿಂದ ಕೆಲವೊಂದು ಸೂಕ್ತವಲ್ಲದ ಪದಪ್ರಯೋಗವಿದ್ದಲ್ಲಿ ಕ್ಷಮೆ ಇರಲಿ.

ಈ ಎಲ್ಲಾ ಗೊಂದಲದ ಸೃಷ್ಟಿಗೆ ಕಾರಣಕರ್ತರು ದಾರುಲ್-ಉಲೂಮ್ ದೇವಬಂದ್‌ನವರು. ಇಷ್ಟಾದರೂ



ಅವರ ನಿದ್ದೆ ಹರಿಯುವುದಿಲ್ಲ. ಅವರ ಒಂದೊಂದು ನಡೆಯ ಮೇಲೂ ಎಲ್ಲರ ಕಣ್ಣಿದೆ ಮತ್ತು ಇಸ್ಲಾಮ್‌ನ ಬಗ್ಗೆ ದ್ವೇಷ ಇರುವವರ ಗುರಿ ಇದೇ ದಾರುಲ್ ಉಲೂಮ್ ದೇವಬಂದ್‌ನ ಮೌಲ್ವಿಗಳು ಎಂದು ತಿಳಿದಿದ್ದರೂ ಅವರುಗಳು ಎಚ್ಚೆತ್ತುಕೊಳ್ಳುತ್ತಿಲ್ಲ.

ಅಷ್ಟೇ ಅಲ್ಲದೆ ತಾಲಿಬಾನ್‌ಗಳ ಉಗ್ರಗಾಮಿ ಇಸ್ಲಾಮ್ ಪ್ರಿಯತೆಯನ್ನು ದಾರುಲ್- ಉಲೂಮ್‌ನೊಂದಿಗೆ ಬೆಸೆಯಲಾಗುತ್ತದೆ. ತಾಲಿಬಾನ್ ಸೇರಿದಂತೆ ಅನೇಕ ಭಯೋತ್ಪಾದಕ ಸಂಘಟನೆಗಳು ತಮ್ಮನ್ನು ತಾವೇ ದೇವಬಂದ್ ಎಂದು ಕರೆದುಕೊಳ್ಳುತ್ತವೆ. ಆದರೆ ಜಮೀಯತುಲ್ ಉಲ್ಮಾದ ಜನರಲ್ ಸೆಕ್ರಟರಿ ಮೌಲಾನಾ ಮೆಹಮೂದ್ ಮದನಿಯವರು ಖಾಸಗಿ ಟಿ.ವಿ. ಚಾನೆಲ್‌ವೊಂದಕ್ಕೆ ಸಂದರ್ಶನ ನೀಡುತ್ತಾ ತಾಲಿಬಾನ್ ಅಥವಾ ಪಾಕಿಸ್ತಾನದ ಜಮೀಯತುಲ್ ಉಲ್ಮಾ ಜೊತೆಗೆ ದಾರುಲ್- ಉಲೂಮ್- ದೇವಬಂದ್‌ನೊಂದಿಗೆ ಯಾವುದೇ ಸಂಬಂಧವಿಲ್ಲವೆಂಬುದನ್ನು ವಿವರಿಸಿದ್ದಾರೆ.

ಹೆಣ್ಣುಮಕ್ಕಳ ಸಹಶಿಕ್ಷಣದ ಬಗ್ಗೆ ನೀಡಿರುವ ಫತ್ವಾದ ಹಿನ್ನೆಲೆಯಲ್ಲಿ ಮಾಧ್ಯಮದವರು ಸದರಿ ಸಂಸ್ಥೆಯನ್ನು ತಾಲಿಬಾನ್‌ನೊಂದಿಗೆ ಸಮೀಕರಿಸಿರುವುದೂ ಅಲ್ಲದೆ, ದಾರುಲ್-ಉಲೂಮ್ ದೇವಬಂದ್‌ನವರು 'ಅಫ್ಘಾನಿಸ್ತಾನದ ತಾಲಿಬಾನ್‌ಗಳ ರೀತಿಯಲ್ಲಿ ಹಿಂದೂಸ್ತಾನದಲ್ಲಿ ಶರೀಯತ್ ಕಾನೂನನ್ನು ಜಾರಿಗೊಳಿಸುವ ಗುರಿ ಹೊಂದಿದ್ದಾರೆ ಎಂಬ ಅಭಿಪ್ರಾಯವನ್ನು ಮೂಡಿಸುತ್ತಿದ್ದಾರೆ. ಹೀಗಿರುವಲ್ಲಿ ಫತ್ವಾ ನೀಡುವ ಮೊದಲು ಎಂತಹ ಎಚ್ಚರ, ವಿವೇಚನೆ, ಸಮಯ ಪ್ರಜ್ಞೆಯ ಅರಿವಿರಬೇಕು?

ಈ ಫತ್ವಾ ಹೊರಡಿಸುವ ಮೊದಲು ಭಾರತದಲ್ಲಿ ಮುಸ್ಲಿಮರ ವಿದ್ಯಾಭ್ಯಾಸದ ಬಗ್ಗೆ ವಿವರಗಳನ್ನು ನೀಡಿದ್ದಲ್ಲಿ ಸೂಕ್ತವಾಗಿರುತ್ತಿತ್ತು. ದಾರುಲ್-ಉಲೂಮ್ ದೇವಬಂದ್‌ನವರು ಮೇಲ್ಕಂಡ ಫತ್ವಾ ನೀಡುವ ಮೊದಲು ಮುಸ್ಲಿಮ್ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಶಿಕ್ಷಣ ಸಂಸ್ಥೆಗಳನ್ನು ಆರಂಭ ಮಾಡಬೇಕಿತ್ತು ಎಂದು ಫರಂಗಿ ಮಹಲ್‌ನ ಮೌಲಾನಾ ಖಾಲಿದ್‌ರ ಶೀದ್ ಹೇಳಿರುವುದು ಸಮಯೋಚಿತವಾಗಿದೆ. ಹೆಣ್ಣುಮಕ್ಕಳ ಮಾತಿರಲಿ ಮುಸ್ಲಿಮ್ ಬಾಲಕರ ವಿದ್ಯಾಭ್ಯಾಸದ ಕಡೆಯೇ ನಾವು ಯಾವ ಪ್ರಯತ್ನವನ್ನು ಪಟ್ಟಿದ್ದೇವೆ?

ಆಯಿತು, ನಡೆಯಿರಿ. ಈ ಫತ್ವಾವನ್ನು ಜಾರಿಗೊಳಿಸಿಯೇ ಬಿಡೋಣ. ಇಡೀ ದೇಶದಲ್ಲಿ ಬಾಲಕಿಯರಿಗೆ ಪ್ರತ್ಯೇಕ ಶಿಕ್ಷಣ ನೀಡುವ ಎಷ್ಟು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿವೆ? ಮೆಡಿಕಲ್, ಇಂಜನಿಯರಿಂಗ್ ಮೊದಲಾದ ವೃತ್ತಿಪರ ಮಹಿಳಾ ಕಾಲೇಜುಗಳು ದೇಶದಲ್ಲಿ ಎಲ್ಲಿಯೂ ಇಲ್ಲ. ಹಾಗಾದರೆ ನಮ್ಮ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಎಲ್ಲಿ ಮುಂದುವರೆಸೋಣ-ಸವೂದಿ ಅರೇಬಿಯಾದಲ್ಲೇ?

ಮುಂಬಯಿಯ ಅಂಜುಮನ್-ಎ-ಇಸ್ಲಾಮ್, ಪೂನಾದ ಆಜಮ್ ಕ್ಯಾಂಪಸ್, ಆಂಧ್ರ ಮತ್ತು ಕರ್ನಾಟಕದ ಅಲ್ಪಸಂಖ್ಯಾತ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಂದಲೂ ಅವರನ್ನು ಹೊರಹಾಕಿ ಭಾರತದ ಸಾಮಾಜಿಕ ಪರಿಸ್ಥಿತಿಯ ಅರಿವಿಲ್ಲದೆ, ತಮ್ಮ ವೃತ್ತದಲ್ಲಿ ಬಂಧಿತರಾಗಿರುವ ಮುಫ್ತಿಗಳ ಫತ್ವಾವನ್ನು ಒಪ್ಪಿಕೊಂಡಲ್ಲಿ ಏನಾಗಬಹುದು?

ದಾರುಲ್- ಉಲೂಮ್ ದೇವಬಂದ್‌ನ ಒಬ್ಬ ಬಹುದೊಡ್ಡ ವಿದ್ವಾಂಸರ ಮಗಳ ಹೆರಿಗೆಯ ಪರಿಸ್ಥಿತಿಯು ಗಂಡಾಂತರಕಾರಿಯಾಯಿತು. ಗರ್ಭಿಣಿಯನ್ನು ಮೀರತ್‌ನ ಒಂದು ನರ್ಸಿಂಗ್‌ಹೋಮ್‌ಗೆ ಸೇರಿಸಲಾಯಿತು. ಆ ನರ್ಸಿಂಗ್ ಹೋಮನ್ನು ವೈದ್ಯ ದಂಪತಿಗಳು ನಡೆಸುತ್ತಿದ್ದರು. ಅಂತೂ ಆಪರೇಷನ್ನಿನ ಮೂಲಕ ಆಕೆಗೆ ಗಂಡುಮಗುವಿನ ಜನನವಾಯಿತು. ಇಂತಹ ಮಹಾನ್ ವಿದ್ವಾಂಸರ ಕಣ್ಣಮುಂದೆ ಇಷ್ಟುದೊಡ್ಡ ಪಾಪ ನಡೆದುಹೋಯಿತು. ಒಬ್ಬ ಮಹಿಳೆಯನ್ನು ಆಕೆಯ ಪತಿಯಲ್ಲದೆ, ಆಕೆಯ ಬಲುಹತ್ತಿರದ ಪುರುಷ ಸಂಬಂಧಿಗಳೂ ನೋಡಬಾರದ ಸ್ಥಿತಿಯಲ್ಲಿ ಆ ಪುರುಷ ವೈದ್ಯ ನೋಡಿದ. ಮೌಲ್ವಿಗಳು ಮೌನವಾಗಿದ್ದರು. ಆಸ್ಪತ್ರೆಯ ವರಾಂಡದಲ್ಲಿ ಶಥ-ಪಥ ತಿರುಗುತ್ತಾ ಮಂತ್ರಗಳನ್ನು ಜಪಿಸುತ್ತಾ ಮಗಳ ಆರೋಗ್ಯ ಭಾಗ್ಯಕ್ಕೆ ಪ್ರಾರ್ಥಿಸುತ್ತಿದ್ದರು. ಆ ಹೊತ್ತಿನಲ್ಲಿ ಯಾವ ಶರೀಯತ್ ಆಗಲೀ ಅಥವಾ ಯಾವ ಕಾನೂನಾಗಲೀ ನೆನಪಿಗೆ ಬರಲಿಲ್ಲ ಏಕೆಂದರೆ ತಮ್ಮ ಕರುಳಿನ ಕುಡಿಯ ಜೀವನ್ಮರಣದ ಪ್ರಶ್ನೆಯಾಗಿತ್ತದು.

ಈಗ ಯಾರಾದರೂ ಮುಸ್ಲಿಮ್ ಹುಡುಗಿಯರು ವೈದ್ಯರಾಗುವವರಿದ್ದರೆ, ಈ ಫತ್ವಾದ ಹಿನ್ನೆಲೆಯಲ್ಲಿ ಒಬ್ಬ ಹೆಣ್ಣುಮಗಳು ಕೂಡಾ ವೈದ್ಯಳಾಗಲು ಸಾಧ್ಯವಿಲ್ಲ. ಚರ್ಚೆ ಸಾಕಿನ್ನು, ಭಾರತದಲ್ಲಿ ದಯವಿಟ್ಟು ಈ ಫತ್ವಾವನ್ನು ಜಾರಿಗೊಳಿಸಲಿ. ವಿಜ್ಞಾನ ತಂತ್ರಜ್ಞಾನ, ವೈದ್ಯಕೀಯ ಕ್ಷೇತ್ರದಲ್ಲಿಯಾಗಲೀ ಯಾವೊಬ್ಬ ಮುಸ್ಲಿಮ್ ಹೆಣ್ಣುಮಗಳು ಕೂಡಾ ಸಿಗುವುದಿಲ್ಲ. ದಾರುಲ್-ಉಲೂಮ್ ದೇವಬಂದ್ ಮತ್ತು ಜಮೀಯತುಲ್ ಉಲ್ಮಾ ಭಾರತದ 30 ಕೋಟಿ ಮುಸ್ಲಿಮರ 5 ಕೋಟಿ ಹೆಣ್ಣುಮಕ್ಕಳಿಗೆ [illegible] ಶಿಕ್ಷಣದ ವ್ಯವಸ್ಥೆಯನ್ನು ಮಾಡುತ್ತಾರೆ?

-ಭಾನು ಮುಷ್ತಾಕ್

ಕೃಪೆ: [illegible]

ರಾಮನ ಸೇತುವೆ ಕೆಡಗಿದ್ರೆ ಕಪಿ ಸೈನ್ಯ ಬುಟ್ಟತ್ತೆ?!

"ಕುಮಾರಸ್ವಾಮಿ ಇನ್ನೇಟು ದಿನಿದ್ದನ?" ಎಂದಳು ಜುಮ್ಮಿ.

"ಅವುನಿನ್ನ ಭಾಳಾ ದಿನಿರುತನೆ ಕಣೇ" ಎಂದ ಉಗ್ರಿ.

"ಬಾಳ ದಿನ ಅಂದ್ರೆ?"

"ಯಾವ ದುರುಮುರುಗನೂ ಇಲ್ವಂಗೆ ಬದುಕಿದ್ರೆ ಅವುರಪ್ಪನಂಗೆ ಯಂಬತ್ತು ವರ್ಸಗಂಟ ಬದುಕಬವುದು."

"ಅಯ್ಯೋ ನಿನ್ನ ಮಾರತ್ತ ಹೋಗು, ಅಂಕೇಳಿದ್ನೆ ನಾನು?"

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಇನ್ಯಾಂಕೇಳಿದೆ ನೀನು? ಇನ್ನು ಏಟು ದಿನಿರತನೆ ಅಂದ್ರೆ ಏನೇಳನ?"

"ಮುಕ್ಕಮಂತ್ರಿಯಾಗಿ ಏಟು ದಿನಿರತನೆ ಅಂದೆ."

"ಅದವ್ರನಿಗೇ ಗೊತ್ತಿಲ್ಲ, ಅವುರಪ್ಪನ್ನಾರ ಕೇಳು ಹೇಳ್ತನೆ."

"ಅವುನ ತಲ್ಯೂ ನ್ಯಟ್ಟಗಿಲ್ಲ ಅಂತರಲ್ಲಾ?"

"ನ್ಯಟ್ಟಗ್ಯಾವತ್ತಿತ್ತೂ?"

"ಸರಿಯಾಗಿ ಮಾತಾಡ್ಕ."

"ನಾನು ಸರಿಯಾಗೇ ಮಾತಾಡ್ತಯಿದ್ದಿನಿ ಕಣೆ. ಮನೆಲಿ ಯಾರ್ದಾರ ತಲಿಕೆಟ್ರೆ ನೋಡಿಕಳಕೆ ಯಾರಾರ ಇರತರೆ, ನೋಡಿಕತ್ತರೆ. ಆದ್ರೆ ಯಜಮಾನನ ತಲೆ ಕೆಟ್ರೆ ಮನಿಯೋರ ತಲಿಯಲ್ಲ ಕೆಟ್ಟಂಗೆಯ. ಅಂಗಾಗ್ಯದೆ ಜೆಡಿಎಸ್ ಪಾರ್ಟಿ ಕತೆ."

"ಇದೊಂತರ ಆದಿಕಳೋರೆದ್ರಿಕೆ ಅಂಗ್ತಾರ ಬಿದ್ದಂಗಾಯ್ತಪ್ಪ" ಎಂದ ಸೀರ.

"ಆದಿಕಳೋರಿಗ್ಯಲ್ಲ ಅಂಜಿಕಂಡ್ರೆ ದೇಸ ಆಳಕ್ಕಾದತೇನ್ಲ?" ಎಂದ ಕಾಳಮಾವ ಗಂಭೀರವಾಗಿ.

"ದ್ಯಾವೇಗೌಡ ಆದಿದಾಟಕೆ ಇವತ್ತು ಬ್ಯಲೆ ತೆರ್ಲಬೇಕಾಗ್ಯದೆ ಕಣಮಾವ."

"ಏನಾಟ ಆದಿದುನ್ಲ?"

"ಅಲ್ಲಾ ನೀನೆ ಹೇಳು, ಇವತ್ತು ಅಧಿಕಾರ ಬುಟ್ಟುಕೊಡಬೇಕಾದ್ರೆ ವಾಜಪೇಯಿ ಬೇಟ ಮಾಡಿ ಬತ್ತಿನಿ ಅಂತನೆ. ಅಂದ್ರೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗುವಾಗ್ಲು ಇವುನು ಬೇಟಿ ಮಾಡಿದ್ದ ಅಂದಂಗಾಗಲವೆ?"

"ಅಂಗೆ ಆಯ್ತಪ್ಪ."

"ಮಗ ಕೈ ಮೀರಿ ಇಂತ ಕ್ಯಲಸ ಮಾಡಿಬುಟ್ಟ ಅಂತ ನೀನು ಅತ್ತಗಂಡು ಕರಕಂಡಿದ್ದೋನು ಅಂಗೇ ಇದ್ರೆ ಇವತ್ತು ನಿನ್ನ ಬೆಲೆನೂ ಉಳಿಯದು, ಮಗನೂ ಮುಂದುವರಿದಂಗೆ ತಡಿಬವುದಿತ್ತು."

"ನೀನೇಳದು ನಿಜ ಆದ್ರು ಮಾತಿನಂಗೆ ನ್ಯಡಕಂಡ್ರೆ ಇದ್ಯಾವ ಪಂಚಾತಿನೂ ಇರದಿಲ್ಲ ಕಂಡ್ಯ."

"ಇರದಿಲ್ಲ ಸರಿ ಕಣವೂವ, ಎಡೂರಪ್ಪ ಮುಖ್ಯಮಂತ್ರಿಯಾದ್ರೆ ಅಧಿಕಾರ ಅವುನ ಕೈಗೋಯ್ತದೆ. ಮನೆಲಿರೊ ಫೈಲು ಪವರ್ರು ಯಾವ್ದು ದ್ಯಾವೇಗೌಡ್ನ ಮನೆಲಿರದಿಲ್ಲ, ಈಗ ಕುತುಕ್ನು ಬಂದಿರದೇ ಅದಕಲವೆ."

"ಈಟ ದಿನಗಂಟ ಇವುನ ಮನೆಲಿತ್ತು, ಈಗವುನ ಮನಿಗೋಯ್ತದೆ, ಆಟೆ ಅಲವೇನ್ಲ?" ಎಂದಳು ಜುಮ್ಮಿ.

"ಆಟೆ ಅಲವೇನ್ಲ ಅಂತ ನೀನೇಳೋದಷ್ಟು ಸುಲಬಲ್ಲ ಕಣೆ ಅದು. ಇಲ್ಲಿಗಂಟ ದ್ಯಾವೇಗೌಡ ಕೆ.ಪಿ.ಎಸ್. ಮೆಂಬರ್ ಯಾರಾಗಬೇಕು ಅಂತ ತಾನೇ ನೇಮಕ ಮಾಡೋನು. ಅರಸು ಪ್ರಶಸ್ತಿ ಯಾರಿಕ್ಕೊಡಬೇಕು ಅಂತ ತಾನೇ ಕೊಡಸೋನು. ಪೊಲೀಸ್ ಇಲಾಖೆಲಿ ಯಾರ್ಯಾರ್ನ ಎಲ್ಲಿಗೆ ಹಾಕಬೇಕು ಅಂತ ಹಾಕಸೋನು. ಒಟ್ಟನಲ್ಲಿ ಅವನ ತಲೆ



ಅಲ್ಲಾಡಿದ್ರೆ ಸರ್ಕಾರನೂ ಅಲ್ಲಾಡಬೇಕು ಅಂಗೆ ಮಡಿಕಂಡಿದ್ದ. ಈಗ ಅಂಥ ಪವರ್ರ ಆ ಬಿಜೆಪಿ ಬಡ್ಡೆತ್ತವುಕೆ ಬುಟ್ಟುಕೊಡಬೇಕಲ್ಲಾ, ಅದೇ ಈಗ ಬಂದಿರೊ ಪೀಕಲಾಟ."

"ಪೀಕಲಾಟಲ್ಲ ಕಣೊ ಇದೊಂಟ್ಯೆಪು ಡ್ರಾಮಾ" ಎಂದುಕೊಂಡು ವಾಟಿಸ್ಸೆ ಬಂದ.

"ಏನು ಡ್ರಾಮನೊ?"

"ಬಿಜೆಪಿಗಳಿಗೆ ಈಜಿಯಾಗಿ ಪವರ್ ಕೊಟ್ರೆ ಅವುರು ದ್ಯಾವೇಗೌಡುನ್ನ ನೆಗ್ಲೆಟ್ ಮಾಡಬವುದು. ಅದ್ರಿಂದ ಕೊಡದೇಯಿರೊ ತರ ಡ್ರಾಮಾ ಮಾದಿ ಮಾದೀ ತಾನೇಳಿದ ಕಂಡಿಶನ್ನಿಗ್ಯಲ್ಲಾ ಅವುರು ಒಪ್ಪಗಳಂಗೆ ಮಾಡಿ ಕಡಿಗೆ ಕೊಡಬವುದು, ಅದ್ಕೆ ಹಿಂಗಾಡ್ತ ಅವುನೆ ಕಣೊ ಉಗ್ರಿ."

"ನೀನೇಳೊ ಮಾತ್ನು ತಗದಾಕಂಗಿಲ್ಲ ಬುಡು."

"ಆ ಬಿಜೆಪಿಗಳ್ಯಾಕ್ಲ ತಿರುಗ ಅದೇನೊ ಉಳಿಸಿ ಕೆಡಗಿ ಅಂತ ಗಲಾಟೆ ಸುರುವಚ್ಚಗಂಡವಲ್ಲ" ಎಂದಳು ಜುಮ್ಮಿ.

"ಅದು ಶ್ರೀರಾಮ ಕಟ್ಟದ ಬ್ರಿಡ್ಜ್ ಮ್ಯಾಟ್ರು ಕಣಕ್ಕ."

"ಅದೇನು ಸರಿಯಾಗೇಳ್ಕ."

"ರಾಮ ಸೀತೆ ಕರಕಂಡು ಬರಬೇಕಾದ್ರೆ ಇಂಡಿಯಾ ದೇಸಕೂ ಲಂಕಾ ಪಟ್ನಕೂ ಸೇತುವೆ ಕಟ್ಟದ ಅಂತ ಕೇಳಿದ್ದಿಯೇನಕ್ಕ?"

"ಕೇಳದೇನು ರಾಮಾಯಣ ನಾಟಗನೆ ಬೇಕಾದೋಟು ಸತಿ ನೋಡಿದ್ದಿನಿ" ಎಂದು ಜುಮ್ಮಿ ಹೇಳಿದ ಕೂಡಲೇ ಕಾಳಮಾವ,

"ಸೀರಾಮ ದೇವರು ಇಡೀ ಕಪಿ ಸೈನ್ಯ ಕರಕಂಡೋಗಿ ಕಟ್ಟದ ಸೇತುವೆ ಅದು" ಎಂದ.

"ಕಪಿ ಸೈನ್ಯ ತಂದು ಮಡಗಿದ ಕಲ್ಲಿನ ಮ್ಯಾಲೆ ಆಂಜುಣಯ್ಯ ರಾಮ ಅಂತ ಬರದು ನೀರ್ಗೊಳಿಕೆ ಯುಸಿಯೋನಂತೆ. ಆ ಕಲ್ಲು ತೇಲಿಕಂಡು ಒಂದುಕೊಂದು ಅಂಟಕೊಂಡು ಸೇತುವೆ ಆಯ್ತಂತೆ" ಎಂದ ಸೀರ.

"ಸಮುದ್ರದ್ವಳಗಿಂದ ಭೂಮಿ ಮಟ್ಟದವರಿಗೂ ಸೇತುವೆ ಕಟ್ಟದ್ರು ಅಂದ್ರೆ, ಅವುರಿನ್ನೆಂಥಾ ದಾಸತ್ತಿನ ಜನ ಇರಬೇಕು ನೋಡು" ಎಂದ ಕಾಳಮಾವ.

"ಆಗಿನ ಆಳುತಾನೆ ಯಂಗಿದ್ರು, ವಾಲಿ ಸುಗ್ರೀವ ವಡದಾಟಕ್ಕೆ ಸುರು ಮಾಡಿಕಂಡ್ರು ಅಂದ್ರೆ, ಮರ ಮರನೆ ಕಿತ್ತುಕೊಂಡು ರುಬ್ಯಾಡೊರಂತೆ. ಮರನೇ ಬೇರಸಯಿತ ಕೀಳರು ಅಂದ್ರೆ ಅವುರಿಗೆ ಕಲ್ಲುಬಂಡೆ ಯಾವ ಲ್ಯಕ್ಕ?"

ದೇವರ ಕಾಟ ಬಲ್ಲವರಾರು

ಇತ್ತೀಚೆಗೆ ದೇವರು, ದೇವಮಾನವರುಗಳಿಗೆ ವಿಪರೀತ ತೊಂದರೆಯಾಗುತ್ತಿದೆ. ಮೊದಲೇ ಕಲಿಗಾಲ. ಬಡಪಟ್ಟಿಗೆ ಅವರನ್ನು ನಂಬುವುದೇ ಇಲ್ಲ, ತಮ್ಮ ಮೇಲೆ ನಂಬಿಕೆ ಬರಿಸಲು ಸರ್ಕಸ್ ಮಾಡಬೇಕಾಗಿದೆ. ಯಾವ ಯಾವುದೋ ವೇಷ ಧರಿಸೋದು, ಪವಾಡ ಮಾಡುವುದು ಒಂದು ರೀತೀಲಿ ಕಡ್ಡಾಯವೇನೋ ಎನಿಸಿಬಿಟ್ಟಿದೆ. ಅವರ ಅಸ್ತಿತ್ವದ ವಿಷಯ ನೋಡಿ.

ವರ್ಷವರ್ಷಾನೂ ಗಣಪತಿ ಬರ್‍ತಾನೆ. ನೀರಿನಲ್ಲಿ ಮುಳುಗ್ತಾನೆ. ಮುಳುಗೋದು ಮುಳುಗ್ತಾನೆ. ನೆಮ್ಮದಿಯಾಗಿ ಮುಳುಗಲಾದರೂ ಈ ಜನ ಅವಕಾಶ ನೀಡಬೇಕಲ್ಲ. ಕೆರೆ, ಕುಂಟೆ ನೀರು ಇದರಿಂದ ಮಲಿನ ಆಗ್ತದೆ ಅಂತ ಕೆಲವರು ತಗಾದೆ ತೆಗೀತಾರೆ. ಅಲ್ಲ ದೇವರು ಮುಳುಗಿದರೆ ನೀರು ಗಲೀಜು ಆಗುತ್ತೆ ಅಂದರೆ ಏನು ಹೇಳಬೇಕು. ಅದಕ್ಕೋ ಏನೋ ಕೆಲವರು ಬಕೀಟನಲ್ಲಿ ನೀರು ತುಂಬಿ ಅದರಲ್ಲೇ ಮುಳುಗಿಸಿ ಶಾಸ್ತ್ರ ಮುಗಿಸುತ್ತಾರೆ. ಪಾಪ ಹೊಟ್ಟೆ ಗಣಪ ಈ ಬೊಗಸೆ ನೀರಿನಲ್ಲೇ ಮುಳುಗಲೂ ಆಗದೆ, ಏಳಲೂ ಆಗದೆ ಒದ್ದಾಡಬೇಕು.

ಇದನ್ನು ಹೇಗಾದರೂ ಸಹಿಸಿಕೊಂಡಾನು ಅಂದರೆ ಈ ಅನ್ಯಾಯದ ಪರಿನೋಡಿ. ಬೆಂಗಳೂರು ಒಂದರಲ್ಲೇ ಸುಮಾರು ಅರವತ್ತು ಲಕ್ಷಕ್ಕೂ ಹೆಚ್ಚು ಗಣಪತಿ ವಿಗ್ರಹಗಳು ಮಾರಾಟ ಆಗ್ತವಂತೆ. ಅದು ಹತ್ತಿರ ಹತ್ತಿರ ಹತ್ತು ಕೋಟಿ ವ್ಯವಹಾರ ಅಂತೆ. ವ್ಯಾಪಾರ, ವ್ಯವಹಾರ ಅಂದಮೇಲೆ ದ್ರೋಹ ಚಿಂತನಂ ಇದ್ದೇ ಇರುತ್ತೆ, ಈಗ ಬಾಂಬೆ ಗಣಪತಿ V/s ಬೆಂಗಳೂರ್ ಗಣಪತಿ ನಡುವೆ ಪೈಪೋಟಿ ಪ್ರಾರಂಭ ಆಗಿದೆಯಂತೆ. ನಾನು ಬೊಂಬಾಯಿ ಗಣಪತಿ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಆಗಿರೋನು, ನಯನಾಜೂಕಿನಿಂದ ಕೂಡಿರೋನು, ತೂಕಾನೂ ಕಡಿಮೆ ಅಂತ ಒಬ್ಬ ಬಡಾಯಿ ಕೊಚ್ಚಿಕೊಂಡರೆ, ನಾನು ಬೆಂಗಳೂರ್ ಗಣಪತಿ, ಇಲ್ಲಿನ ಮಣ್ಣಿನಿಂದಲೇ ತಯಾರ್‍ಓದೋನು, ಈ ಮಣ್ಣಿನ ಮಗ ನಾನು, ಹಂಗಾಗಿ ನನ್ನ ತೂಕಾನೂ ಜಾಸ್ತಿ ಇರುತ್ತೆ ಅಂತ ಇನ್ನೊಬ್ಬ ಜಂಭ ಕೊಚ್ಚಿ ಕೊಳ್ತಿದಾನಂತೆ. ಬೆಂಗಳೂರಿನ ವಿಘ್ನೇಶ್ವರನ ಆರಾಧಕರು ಲಘು ಗಣೇಶ ಕೊಳ್ಳೋದೊ, ತೂಕದ ಗಣೇಶ ಖರೀದಿಸೋದೆ ಅನ್ನೊ ಸಂದಿಗ್ಧದಲ್ಲಿ ಬಿದ್ದಿದ್ದಾರಂತೆ.

ಇನ್ನೊಂದು ವರ್ಗದ ಜನ ಇದಾರೆ. ಅಯ್ಯೋ ಗಣೇಶ ಏನು ವಿಘ್ನ ನಿವಾರಕನೇ ಇರಬಹುದು. ಆದರೆ ಇವತ್ತು ಶ್ರಾವಣೇಲಿ ಇರೋನು ತಿರುಪತಿ ವೆಂಕಟೇಶ್ವರ. ಅವನ ತರಹ ಕಂಡರೆ ನಿನಗೂ ಘನತೆ, ನಮಗೂ ಸಮಾಧಾನ. ಅದಕ್ಕೇ ಅವನ ತರಹ ವೇಷ ಹಾಕ್ತೀವಿ ಅಂತ ಮುಖ ಒಂದನ್ನು ಬಿಟ್ಟು ವಿಶ್ವೆಲ್ಲ ಕಡೆ ತದ್ರೂಪ ತಿರುಪತಿ ವೆಂಕಟರಮಣನ ತರಹ ಕಾಣುವ ಹಾಗೆ ದೇಹಕ್ಕೆಲ್ಲ ಅದೆಷ್ಟೋ ಲಕ್ಷ ಅಮೆರಿಕನ್ ವಜ್ರಗಳನ್ನು ಅದ್ದಿದ್ದಾರಂತೆ. ನೋಡುವುದಕ್ಕೆ ಥೇಟ್ ಗಣಪತಿ ಮುಖದ ವೆಂಕಟರಮಣ ಸ್ವಾಮಿಯ ತರಹವೇ ಕಾಣ್ತಾನಂತೆ. ದೀಪದ ಬೆಳಕಿನಲ್ಲಿ ಫಳಫಳಾಂತ ಹೊಳೆಯೋ ಅಮೆರಿಕನ್ ವಜ್ರಗಳನ್ನು ನೋಡಲು ಎರಡು ಕಣ್ಣುಗಳೂ ಸಾಲದು ಅನ್ನೋದು ಭಕ್ತಾಗ್ರೇಸರ ಅಂಬೋಣ!

ಇದೆಲ್ಲವನ್ನು ನೋಡುತ್ತಿರುವ ಆ ವಿಘ್ನ ನಿವಾರಕನಿಗೆ ನಾನು ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣಪನಾಗಿ ಹುಟ್ಟಬೇಕೋ, ಮಣ್ಣಿನ ಗಣಪತಿ ಆಗಿ ಜನಿಸಬೇಕೋ ಅಥವಾ ಅಮೆರಿಕನ್ ಡೈಮಂಡ್‌ಗಳಿಂದ ಅಲಂಕೃತನಾಗಿ ಜನರಿಗೆ ದರ್ಶನ ನೀಡಬೇಕೋ ಎಂಬ ಸಂಶಯ ಮೂಡಿದೆಯಂತೆ.

ಅಂತಹ ವಿಘ್ನ ನಿವಾರಕನಿಗೇ ಈ ಪಾಟ ದ್ವಂದ್ವಗಳು ಕಾಡುತ್ತಿರಲಾಗಿ ಶ್ರೀರಾಮ ದೇವರು ದಿಕ್ಕಿಲ್ಲದ ಪರದೇಸಿ



ಯಾಗಬೇಕಾದ ಪರಿಸ್ಥಿತಿ ಉದ್ಭವಿಸಿದೆ. ಆತನ ನೆನಪು ಜನರನ್ನು ಕಾಡಬೇಕಾದರೆ ಚುನಾವಣೆಗಳೇ ಬರಬೇಕಾಗಿದೆ. ಐದು ವರ್ಷಕ್ಕೊಮ್ಮೆಯಾದರೂ ಚುನಾವಣೆಗಳು ನಡೆಯುತ್ತಿರುವುದು ಆತನ ಪುಣ್ಯ. ಆತನ ಜನ್ಮಭೂಮಿ ವಿಷಯ ಹಳಸಲಾಗುತ್ತಿದ್ದಂತೆ ಆವನ ಭಕ್ತ ಶಿರೋಮಣಿಗಳಿಗೆ ರಾಮಸೇತು ವಿಷಯ ಸಿಕ್ಕಿರುವುದು ಭರತ ಮಾತೆಯ ಕೃಪೆ. ವಾಲ್ಮೀಕಿ ರಾಮಾಯಣ, ತುಳಸೀದಾಸರ ರಾಮಚರಿತಮಾನಸ ಮುಂತಾದ ಪವಿತ್ರ ಗ್ರಂಥಗಳಲ್ಲಿ ಶ್ರೀರಾಮ ಚಂದ್ರನು ವಾನರ ಸೇನೆಯ ಸಹಾಯದಿಂದ ಈ ಸೇತುವೆಯನ್ನು 17,50,000 ವರ್ಷಗಳ ಹಿಂದೆಯೇ ಅಂದರೆ ತ್ರೇತಾಯುಗದಲ್ಲಿ ನಿರ್ಮಿಸಿದ್ದು ಎಂದು ಹಾಡಿಹೊಗಳಿದ್ದರೂ, ಕೆಲವು ಪಾಪಿಗಳು ಇದನ್ನು ನಂಬುತ್ತಿಲ್ಲ, ಸೀತಾಮಾತೆಯನ್ನು ದುರುಳ ರಾವಣನಿಂದ ಬಿಡಿಸಿಕೊಂಡು ಬಂದದ್ದು ಹೇಗೆ ಎಂದು ಪ್ರಶ್ನಿಸಿದರೆ ಆ ದುರಾತ್ಮರು ರಾಮ, ಸೀತೆ ಜನ್ಮ ತಾಳಿಯೇ ಇರಲಿಲ್ಲ ಎನ್ನುತ್ತಾರೆ. ಇದೂ ಸಾಲದು ಎಂಬಂತೆ ಈ ಹಿಂದೆ ರಾಮೇಶ್ವರಂ ಮತ್ತು ಶ್ರೀಲಂಕಾದ ನಡುವೆ ಸಮುದ್ರವೇ ಇರಲಿಲ್ಲ, ಭೂಮಾರ್ಗ ಇತ್ತು ಎಂದು ಹೇಳಿ ಆ ಮಹಾ ಮಹಿಮನ ಅಸ್ತಿತ್ವವನ್ನೇ ಅಲ್ಲಗಳೆಯುತ್ತಿದ್ದಾರೆ. ಈ ಸೇತುವೆ ಮಾನವ ನಿರ್ಮಿತ ಅಲ್ಲ, ಪ್ರಕೃತಿ ಸಹಜವಾಗಿ ನಿರ್ಮಿತವಾದದ್ದು ಎಂದು ಹೇಳುತ್ತಾ, ಭಾರತೀಯ ಪುರಾತತ್ವ ಇಲಾಖೆ ಎಂಬ ನಾಸ್ತಿಕರ ಗುಂಪಿನಿಂದ ಶ್ರೀರಾಮ ಅಥವಾ ರಾಮಾಯಣದ ಇತರ ವ್ಯಕ್ತಿತ್ವಗಳ ಅಸ್ತಿತ್ವ ಸಾಬೀತುಪಡಿಸಲು ಐತಿಹಾಸಿಕ ಪುರಾವೆಗಳಿಲ್ಲ ಎಂಬ ದೈವನಿಂದಕ ಹೇಳಿಕೆ ಕೊಡಿಸುತ್ತಿದ್ದಾರೆ. ಒಂದು ಸಮಾಧಾನಕರ ಸಂಗತಿ ಎಂದರೆ ಇಂತಹ ಹೇಳಿಕೆಗಳ ವಿರುದ್ಧ ಶ್ರೀರಾಮಭಕ್ತರು ತೀವ್ರ ಪ್ರತಿಭಟನೆ ಮಾಡುತ್ತಿರುವುದು; ಈ ನಾಡಿನ ಅಗ್ರ ಶ್ರೀರಾಮಸೇವಕರೊಬ್ಬರು ಇಂತಹ ಹೇಳಿಕೆ ವಿರುದ್ಧ ಪ್ರಧಾನಮಂತ್ರಿ ಕಚೇರಿಗೆ ತಮ್ಮ ಪ್ರತಿಭಟನಾ ಪತ್ರ ಸಲ್ಲಿಸಿರುವುದು.

ಈಗ ಶ್ರೀರಾಮನೂ ಸಂದಿಗ್ಧದಲ್ಲಿ ಸಿಲುಕಿದ್ದಾನೆ. ತನ್ನ ಸಂತತಿಗಿಂತಲೂ ರಾವಣ ಸಂತತಿಯೇ ಹೆಚ್ಚಿರುವಂತಿದೆ. ತನ್ನ ಭಕ್ತರಿಗೇನೋ ಅವರ ಕನಸಿನಲ್ಲಿ ಬಂದು ತನ್ನ ಧೀರೋದಾತ್ತ ಆದರ್ಶಗಳನ್ನು, ತಾನು ಕೈಗೊಂಡ ಭಕ್ತಪರ ಯೋಜನೆಗಳನ್ನು ವಿವರಿಸಿದ್ದಾಗಿದೆ. ಈ ರಾವಣ ವಂಶಜರಿಗೂ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾ ಹೇಗೆ, ಒಂದು ವೇಳೆ ತಿಳಿಸಿದರೂ ಅವರು ನಂಬುವರೆ ಎಂದು ಚಿಂತೆಯಲ್ಲಿ ಮುಳುಗಿದ್ದಾನೆ.

ದೇವಾನುದೇವತೆಗಳದ್ದೇ ಈ ಪರಿ ಪರಿಪಾಟಲಾದರೆ ಇನ್ನು ದೇವಮಾನವರನ್ನು ಯಾರೂ ಮೂಸಿಯೂ ನೋಡುವುದಿಲ್ಲ ಎಂಬ ಚಿಂತೆ ಅವರನ್ನು ಕಾಡಬೇಕಾದ್ದು ಸಹಜವೇ ಸರಿ. ಆಳುವ ಸರ್ಕಾರವೇ ಕಾಲಿಗೆ ಬೀಳುತ್ತೆ, ಖಜಾನೆ ಹಣವನ್ನೂ ಹರಿಸುತ್ತೆ, ಆದರೆ ಸರ್ಕಾರವೇ ಜನ ಅಲ್ಲವಲ್ಲ, ಜನ ನಂಬಬೇಕಲ್ಲ, ಅದಕ್ಕೆ ಪವಾಡ ಮಾಡಲೇ ಬೇಕಾಗುತ್ತೆ. ಈ ಹಿಂದೆ ಸತ್ಯಸಾಯಿಬಾಬಾ ಅವರು ಶೂನ್ಯದಿಂದ ವಿಭೂತಿ ಉಂಗುರ ತರಿಸುವುದು, ನಿಂಬೆಹಣ್ಣು ಪ್ರತ್ಯಕ್ಷ ಗೊಳಿಸುವುದು ಇಂತಹ ಪವಾಡಗಳನ್ನು ಮಾಡಿ ಭಕ್ತರನ್ನು ದಿಗ್ಮೂಢರನ್ನಾಗಿಸುತ್ತಿದ್ದರು. ನಿಂಬೆಹಣ್ಣಿನ ಬದಲು ಬೂದುಗುಂಬಳ ಕಾಯಿ ತರಿಸಿ ಅಂತ ಎಚ್. ನರಸಿಂಹಯ್ಯ ಅಂತಹವರು ಸವಾಲು ಒಡ್ಡಿದ್ದರೂ ಭಕ್ತರ ನಂಬಿಕೆ ಅಚಲವಾಗಿಯೇ ಇತ್ತು. ಸರ್ವಸಂಗಪರಿತ್ಯಾಗಿಗಳಾದ ಕಾವಿಧಾರಿ ಸ್ವಾಮಿಗಳ ಪವಾಡಗಳ ಎದುರು ಬಡಪಾಯಿ ಪ್ರೊಫೆಸರರ ಮಾತನ್ನು ಯಾರೂ ಗಣನೆಗೆ ತೆಗೆದುಕೊಳ್ಳಲಿಲ್ಲ ಅನ್ನುವುದು ಪ್ರಶಂಸನೀಯ!

ಇದು ಒಂಟಿ ದೇವಮಾನವರ ವಿಷಯ ಆಯಿತು. ಇತ್ತೀಚೆಗೆ ಇದು ಪ್ರಯೋಜನಕಾರಿ ಅಲ್ಲ ಅಂತಾನೋ ಏನೋ ಜಂಟಿ ದೇವಮಾನವರು ಜನಿಸಿದ್ದಾರೆ!

ಯಾರು ಅವರು?

ಕಲ್ಕಿ ಭಗವಾನ್, ಅಮ್ಮ ಭಗವಾನ್!

ಈ ದಂಪತಿ ದೇವಮಾನವರ ಮಹಿಮೆ ಏನು ಅಂತೀರಿ!

ಓರ್ವ ಗೃಹಿಣಿ ಭಕ್ತೆ ಹೇಳಿದ್ದು: ನಾನು ಭಗವಾನರ ಹತ್ತಿರ ಎಲ್ಲವನ್ನೂ ಹೇಳಿಕೊಂಡೆ. ಅವರು ಎಲ್ಲವನ್ನೂ

ಅಣಕ

ಎಚ್.ಎಲ್. ಕೇಶವಮೂರ್ತಿ

ತೋರಿಸಿದರು. ನನ್ನ ಗಂಡ ನನಗೆ ಅನ್ಯಾಯ ಮಾಡಿದ ಅಂತ ಖಚಿತ ಆಯಿತು.

ಆ ಗೃಹಿಣಿಗೆ ಒಂದು ಸಂಶಯ. ತನ್ನ ಗಂಡ ತನಗೆ ನಿಯತ್ತಾಗಿಲ್ಲ, ಬೇರೆ ಹೆಂಗಸರ ಸಂಬಂಧ ಇದೆ. ಆ ಭಗವಾನ್ ಇದನ್ನು ದೃಢೀಕರಿಸಿದ್ದಲ್ಲದೆ, ಸಾಕ್ಷಿಗಳನ್ನು ಒದಗಿಸಿದ್ದ!

ಆ ಭಗವಾನ್ ಎಲ್ಲ ತೋರಿಸಿದ ಅಂದರೆ ಬೇರೆ ಹೆಂಗಸಿನ ಜೊತೆ ಅವನು ಇದ್ದದ್ದನ್ನು ತೋರಿಸಬೇಕು ಅಲ್ಲವಾ ಎಂದು ಸ್ವಾಮಿನಿಂದಕರು ಹಲ್ಕಾ ನಗೆ ಬೀರಬಹುದು. ಆದರೆ ನಂಬಿಕೆ ಈ ಪ್ರಶ್ನೆ ಕೇಳಿಸೋಲ್ಲ ಎಂಬುದು ಅವರಿಗೆ ನೆನಪಿರಲಿ.

ಈಗ ಆ ದೇವಮಾನವರಿಗೆ ಪ್ರಚಾರ ಬೇಕು. ಈಗಾಗಲೇ ಪ್ರಚಾರ ದೊರೆತಿಲ್ಲವೆ ಎಂದರೆ ಅದು ಏನೇನೂ ಸಾಲದು. ಇನ್ನೂ ಬೇಕಾಗಿದೆ. ಎಂತಹ ದೇವಮಾನವ ಆದರೂ 'ನಾನು ದೇವಮಾನವ ಯಾರ ಹಂಗೂ ನನಗೆ ಬೇಕಿಲ್ಲ' ಎಂದು ಕುಳಿತರೆ ಇಂದಿನ ಪ್ರಚಾರ ಯುಗದಲ್ಲಿ ಮೂಲೆ ಹಿಡಿಯುವುದು ಖಂಡಿತ. ದೇವರಿಗೂ ಪ್ರಚಾರ ಇರಬೇಕು! ಅಂತಹದ್ದರಲ್ಲಿ ದೇವ ಮಾನವರಿಗೆ ಬೇಡವೇ. ಪವಾಡ ಮಾಡಿದರು!

ಎಂದು ಹೋಟೆಲ್ ಚಿಕ್ಕನೂ ರಾಮಸೇತು ನಿರ್ಮಾಣದ ಕತೆಗೆ ದನಿಗೂಡಿಸಿದ.

"ಓಹ್‌ಹೊ ರಾಮಸೇತುವೆ ಎಸ್ಟಿಮೇಟ್ ಪ್ಲಾನು ಇವುರತ್ರನೇ ಇರಂಗದೇ" ಎಂದ ವಾಟಿಸ್ವೆ.

"ಅಂಗಲ್ಲ ಕಂದ್ರ ವಾಟಿಸ್ವೆ. ಶ್ರೀರಾಮ ಸೇತುವೆ ಕಟ್ಟಿತಾಯಿರೊ ಫೋಟಾನೆ ಬತ್ತಿದ್ದೊ ಕಂದ್ರ ಆಗ. ಬೇಕಾದ್ರೆ ಈಗ್ಲೊ ತಿಮ್ಮಾಚಾರ್ರ ಮನೆಲಿ ರಾಮ ಸೇತುವೆ ಕಟ್ಟೊ ಫೋಟಾ ಆದೆ ಬೇಕಾದ್ರೆ ಹೋಗಿ ನೋಡು" ಅಂದ ಚಿಕ್ಕ.

"ಮಿಸ್ಟರ್ ಚಿಕ್ಕಣ್ಣ. ಫೋಟೊ ಸಿಗತವೆ ಕಣೊ. ಯ್ಯಂತ್ಯಂತ ಫೊಟಾ ಸಿಗತವೆ ಗೊತ್ತೆ? ನರಸಿಂಹ ಕಂಬ್ದದಿಂದ ಮದಕಂಡು ಈಚೆಗೆ ಬರೋ ಫೋಟಾನೂ ಅವೆ. ಅಂಗಂತ ನರಸಿಮ್ಮ ಇದ್ದ ಅನ್ನಕ್ಕಾದತೇನೊ?"

"ನರಸಿಮ್ಮ ದೇವರು ಕಂದ್ರ."

"ಆಯ್ತು ಶ್ರೀರಾಮನೂ ದೇವರೆಯ ನಿಮ್ಮ ಭಾಗಕ್ಕೆ. ಆ ದೇವರು ಹೆಂಡತಿ ತರಕ್ಕೆ ಅಂತ ಕಟ್ಟಿದ ಸೇತುವೆ ಕಲ್ಲು ಹಡಗಿಗೆ ತಡಕತ್ತವಂತೆ. ತಡಕಳದರಿಂದ ಬಳಸಿಗಂಡು ಬರಬೇಕಂತೆ. ಎಷ್ಟು ಬಳಸಬೇಕಪ್ಪ ಅಂದ್ರೇ, ಸುಮಾರು ಎಂಟುನೂರು ಕಿಲೋಮೀಟ್ರು ಬಳಸಬೇಕಂತೆ. ಆ ಕೋತಗಲ್ಲ ವಡದು ಮಟ್ಟ ಮಾಡಿದ್ರೆ ಬಳಸಂಗಿಲ್ಲ, ಸಮಯ, ಹಣ ಯಲ್ಲ ಉಳಿತದಂತೆ ದ್ವಡಪ್ಪ ಏನು ಮಾಡಬೇಕು ನೀನೆ ಹೇಳು ನೋಡನ" ಎಂದ ವಾಟಿಸ್ವೆ.

"ಏನು ಮಾಡಬೇಕು ಅಂದ್ರೆ. ಕಲ್ಲ ಸವರಿ, ಹಡಗು ಬರಂಗೆ ಮಾಡಿಕಬೇಕು. ರಾಮ ಕಟ್ಟಿದ ಸೇತುವೆ ಅಂತ ತಲಿಗೆ ಚಚ್ಚಿಗಳಕ್ಕಾದತೆ?"

"ಅದಪ್ಪ ತೀರ್ಪು ಅಂದ್ರೆ. ನೋಡೊ ಉಗ್ರಿ ನಮ್ಮ ದ್ವಡಪ್ಪ ಅದ್ವಾನಿಗಿಂತ್ಲೂ ರಾಮನ ಭಕ್ತ. ರಾಮನ ಸೇತುವೆ ಸವುರದರಿಂದ ಸಮಯ, ಹಣ ಉಳಿತದೆ ಅಂದ್ರೆ ಅದನ್ನ ಬದ್ಲಾಸಕ್ಕೂ ರಡಿಯಾಗ್ಯವುನೆ. ಅದೇ ವಾನರಸೇನೆ ತಯಾರಿಲ್ಲ ಇದಕೇನೇಳ್ತೀ?"

"ಲೇ ವಾಟಿಸ್ವೆ ರಾಮನ ಸೇತುವೆ ತಗಂಡು ಅವುಕೇನಾಗಬೇಕು? ಈಗ ಅವುರ ಕೈಗೊಂದು ಕಲ್ಲುಬೇಕಾಗ್ಯದೆ ಕಣೊ ಅಪ್ಪೆ."

"ಎಜ್ಞಾಟ್ಲಿ ಕರಟ್." ■

ಅದು ಹೆಗಪ್ಪಾ ಅಂದರೆ...

ಭಕ್ತರ ಮನೆಯಲ್ಲಿ ಕಲ್ಕಿ ಭಗವಾನ್, ಅಮ್ಮ ಭಗವಾನ್‌ನ ಫೋಟೋ ಇದ್ದೇ ಇರುತ್ತೆ, ಅದಕ್ಕೆ ಪೂಜೆ ಮಾಡದೆ ಭಕ್ತರು ಒಂದು ಹನಿ ನೀರೂ ಕುಡಿಯುವುದಿಲ್ಲ. ಈ ದೇಶದಲ್ಲಿ ಯಾರು ಯಾರನ್ನೋ, ಯಾವುದು ಯಾವುದನ್ನೋ ಪೂಜಿಸುವವರು ಇದ್ದಾರೆ; ಇವರೂ ಮಾಡಿಕೊಂಡು ಹಾಳಾಗಲಿ ಎಂದು ಕೆಲವರು ಉದಾಸೀನ ತೋರಬಹುದು. ಅವರ ಮಾತು ಯಾರಿಗೆ ಬೇಕು ಹೇಳಿ. ಒಂದು ದಿವಸ ಏನಾಯಿತು ಅಂದರೆ... ಇದ್ದಕ್ಕಿದ್ದಂತೆಯೇ ಅಮ್ಮ ಭಗವಾನ್‌ರ ಕಣ್ಣಿನಲ್ಲಿ ಸುರಿಯುತ್ತಿದೆ... ಏನು ಅಂತೀರಿ, ಜೇನುತುಪ್ಪ! ಅಮ್ಮನವರ ಫೋಟೋದಲ್ಲಿನ ಕಾಲನ್ನು ಸ್ಪರ್ಶಿಸಿದರೆ.... ದೇಹವೆಲ್ಲ ಕಂಪನ ಆಗುತ್ತಿದೆ! ಈ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಜನಸಮುದಾಯ ಸೇರಿತು. ಅಮ್ಮನವರ ಭಕ್ತಿ ರಸದಲ್ಲಿ ಮಿಂದಿತು! ಕಾರ್ಯ ಕಾರಣ ಸಂಬಂಧ ಬೇಕಿಲ್ಲ. ಅಯೋಧ್ಯೆಯಲ್ಲಿ ಶ್ರೀರಾಮ ಜನಿಸಿದ, ರಾಮಸೇತುವನ್ನು ನಿರ್ಮಿಸಿದ ಅನ್ನುವುದಕ್ಕೆ ಏನು ಆಕಾರ ಇದೆ? ನಂಬಿಕೆ ಮುಂದೆ, ಭಾವನೆಗಳ ಎದುರು ಇವೆಲ್ಲ ಯಾಕೆ? ಸುರಿಯಿತು ಅಷ್ಟು ಸಾಲದೆ! ಇದನ್ನು ನಂಬದ ಚಾರ್ವಾಕ ವಂಶಜರೂ ಇರಬಹುದು. ಜೇನುತುಪ್ಪ ಬದಲು ಯಾವುದಾದರೂ ಉಪಯೋಗಕ್ಕೆ ಬರುವ ವಸ್ತು ಸುರಿಸಬಾರದಿತ್ತೆ ಅಂತಲೂ ಅನ್ನಬಹುದು. ಇಂತಹವೆಲ್ಲ ಇದ್ದದ್ದೇ ಬಿಡಿ.

ಇನ್ನು ಕೆಲವು ಸ್ವಾಮಿಗಳು ಇದ್ದಾರೆ.

ಅವರು ಎಂತಹವರು ಅನ್ನುತ್ತೀರಿ?

ಬದುಕಿಗೆ ಅದೃಷ್ಟ ತರುತ್ತಾರೆ; ದಾರಿದ್ರ್ಯ ನಿವಾರಣೆ ಮಾಡುತ್ತಾರೆ!

ಯಾರಿಗೆ ಇಂತಹ ಸ್ವಾಮಿ ಪ್ರಾಯಮಾನವಾಗುವುದಿಲ್ಲ?

ಪರಿಚಯ ಆದ ತಕ್ಷಣ ಮನೆಗೆ ಕರೆ ತರುತ್ತಾರೆ. ಪೂಜೆ ಪುನಸ್ಕಾರ, ಊಟೋಪಚಾರ ನಡೆಯುತ್ತೆ,

ಇಂತಹ ಮಹಾಮಹಿಮರು ಹೀಗೆ ಬಂದು ಹಾಗೆ ಹೋದರೆ ಸಾಕೆ?

ಮನೆಯಲ್ಲಿಯೇ ಒಂದೆರಡು ದಿನ ತಂಗಲು ಆತಿಯಾತನ ಒತ್ತಾಸೆ. ಎಷ್ಟು ಮನೆಗಳಲ್ಲಿ ಅವರಿನ್ನೂ ಸೇವೆ ಮಾಡಬೇಕೋ ಏನೋ. ಆದರೆ ಭಕ್ತರ ಒತ್ತಾಯ ಮೀರುವುದು ಹೇಗೆ ಅಂತ ಸಮ್ಮತಿಸುತ್ತಾರೆ.

ಆಮೇಲೆ ಏನಾಗುತ್ತೆ ಅಂತೀರಿ?

ಮಹಾಮಹಿಮರುದಾನಮಾಡುತ್ತಾರೆ-ಮಕ್ಕಳ ದಾನ!

ಅಯುತಲ್ಲ, ದಾರಿದ್ರ್ಯ ನಿವಾರಣೆ!


ಮಕ್ಕಳೇ ಆಸ್ತಿ ಅಲ್ಲವೇ!

ಇದನ್ನು ಅರ್ಥ ಮಾಡಿಕೊಳ್ಳದೆ ಈ ಕಲಿಯುಗದಲ್ಲಿ ಇಂತಹ ಮಹಾಮಹಿಮರನ್ನು ಜೈಲಿಗೆ ಅಟ್ಟುತ್ತಿರುವುದು ಪೊಲೀಸೋ ಏನೋ... ■

ಗುರು ಹರಣ

ಒಂದು ಕ್ಲಾಸು. ಕ್ಲಾಸಿನಲ್ಲಿ ಮತ್ತು ಇಡೀ ಕಾಲೇಜಿನಲ್ಲಿ ಹರಿಜನರ ವಿದ್ಯಾರ್ಥಿಗಳೇ ಹೆಚ್ಚು. ಈ ಕ್ಲಾಸಿನಲ್ಲಿ ಕೆಲವು ತಂಟೆ ಹುಡುಗರಿದ್ದಾರೆ; ಎಲ್ಲ ಕ್ಲಾಸುಗಳಲ್ಲಿ ಇರುವಂತೆಯೇ ಈ ಹುಡುಗರ ಪುಂಡುತನ ಮಿತಿಮೀರುತ್ತದೆ; ಅಧ್ಯಾಪಕ ಸಿಟ್ಟಿನಿಂದ ಬಯ್ಯುತ್ತಾನೆ. ಈ ಅಧ್ಯಾಪಕ ಮೇಲುಜಾತಿಯವನು. ಆತನ ಬೈಗುಳ ಸ್ವಲ್ಪ ಎಲ್ಲೆ ಮೀರಿದೆ. ಹುಡುಗರು ಕೂಡಲೆ ಒಗ್ಗಟ್ಟಾಗಿ ಕೂಗತೊಡಗುತ್ತಾರೆ. ಪ್ರಿನ್ಸಿಪಾಲರ ಛೇಂಬರ್‌ಗೆ ಹೋಗಿ ಘೋಷಣೆ ಕೂಗಿ ಅಧ್ಯಾಪಕನನ್ನು ಕಿತ್ತು ಹಾಕಲು ಒತ್ತಾಯಿಸುತ್ತಾರೆ.

ಅಧ್ಯಾಪಕ ತನ್ನ ತಪ್ಪನ್ನು ನೆನೆದು, ತಾನು ಕೆಲಸ ಕಳೆದುಕೊಳ್ಳುವ ಅಪಾಯವನ್ನು ಕಂಡುಕೊಂಡು ನಡುಗತೊಡಗುತ್ತಾನೆ. ಪ್ರಿನ್ಸಿಪಾಲ್ ಕರೆಸುತ್ತಾರೆ. ಅಧ್ಯಾಪಕ ಭಯಗೊಂಡಿರುವುದು ಅವರಿಗೆ ಗೊತ್ತಾಗುತ್ತದೆ. ಅಧ್ಯಾಪಕ ಕ್ಷಮೆ ಕೇಳಿಕೊಳ್ಳಬೇಕೆಂದು ಪ್ರಿನ್ಸಿಪಾಲ್ ಸೂಚಿಸುತ್ತಾರೆ. ಆದರೆ ಹುಡುಗರೇ ಮೊದಲು ಗಲಾಟೆ ಮಾಡಿದ್ದು; ಅದನ್ನು ನಿವಾರಿಸಲು ಮಾತ್ರ ತಾನು ಸಿಟ್ಟು ಮಾಡಿದ್ದು ಎಂಬುದು ಅಧ್ಯಾಪಕನಿಗೆ ಗೊತ್ತಿದೆ. ಕ್ಷಮೆ ಕೇಳಿಕೊಳ್ಳುತ್ತಾನೆ. ಆದರೆ ಹುಡುಗರು ಬಿಡುವುದಿಲ್ಲ. ಸಾರ್ವಜನಿಕ



ಮರೆಯುವ ಮುನ್ನ



■ ಪಿ. ಲಂಕೇಶ್ ಜನವರಿ 1, 1989

ಸ್ಥಳದಲ್ಲಿ ಎಲ್ಲರೆದುರಿಗೆ ಕೈ ಮುಗಿದುನಿಂತು ಕ್ಷಮೆ ಕೇಳಿಕೊಳ್ಳಬೇಕೆಂದು ಒತ್ತಾಯಿಸುತ್ತಾರೆ. ಕೆಲಸ ಕಳೆದುಕೊಳ್ಳಲಾರದೆ ಅಧ್ಯಾಪಕ ಇದಕ್ಕೂ ಒಪ್ಪುತ್ತಾನೆ. ಅಲ್ಲಿಯ ದೃಶ್ಯ ನೋಡಿದವರಿಗೆ ವಿಚಿತ್ರ ತಳಮಳ ಆಗುತ್ತದೆ. ಅಧ್ಯಾಪಕ ಕೈಮುಗಿದು ನಿಂತಿದ್ದಾನೆ. ಹುಡುಗರು ಗೇಲಿ ಮಾಡುತ್ತಾ ಇನ್ನಷ್ಟು ಬಗ್ಗಿ ನಿಲ್ಲಲು ಹೇಳುತ್ತಾರೆ. ಆತ ಎಲ್ಲದಕ್ಕೂ ಒಪ್ಪಿ ವಿಧೇಯನಾಗಿ ಕ್ಷಮೆ ಕೇಳುತ್ತಾನೆ.

- ಇದು ನಡೆದ ದೃಶ್ಯ. ಇದರ ಬಗ್ಗೆ ನೀವು ಆಳವಾಗಿ ಯೋಚಿಸಿ. ಈ ದೃಶ್ಯದ ಪರಿಣಾಮವನ್ನು ನೀವು ಧ್ಯಾನಿಸಬೇಕೆಂಬುದು ನನ್ನ ಇಷ್ಟ. ತುಂಟ ಹುಡುಗರನ್ನು ರೇಗಿ ಸುಮ್ಮನಾಗಿಸುವುದಕ್ಕೆ ಬದಲು ಅಧ್ಯಾಪಕ ಉದ್ಧಟನಾಗಿ ವರ್ತಿಸಿದ; ಆದರೆ ಇದು ಸಿಟ್ಟಿನಿಂದ; ವಿದ್ಯಾರ್ಥಿಗಳು ಸೇಡಿನಿಂದ ವರ್ತಿಸಿ ಒಂದು ಜೀವಂತ ಸಂಬಂಧವನ್ನೇ, ಒಂದು ಮೌಲ್ಯವನ್ನೇ ಧ್ವಂಸಗೊಳಿಸಿದರು. ಮಾಸ್ತರು, ಶಿಷ್ಯನ ಸಂಬಂಧ ವಿಚಿತ್ರವಾದದ್ದು. ಮುಂದುವರಿದ ರಾಷ್ಟ್ರಗಳಲ್ಲಿ ಕೂಡ ಅಧ್ಯಾಪಕನನ್ನು ತೆಗೆದು ಬರೀ ಯಂತ್ರಗಳಿಂದಲೇ ಶಿಕ್ಷಣ ನೀಡಲಾಗಿಲ್ಲ, ವಿಡಿಯೋಗಳು, ದೂರದರ್ಶನಗಳು, ರೆಕಾರ್ಡಿಂಗ್, ಸ್ಪೀಕಿಂಗ್ ಯಂತ್ರಗಳು ಅಧ್ಯಾಪಕನ ಸ್ಥಾನವನ್ನು ಆಕ್ರಮಿಸಲು ಆಗಿಲ್ಲ, ಅಧ್ಯಾಪಕ ನಿಜಕ್ಕೂ ಗುರು; ಸಂವೇದಿಸುವ, ವಿವರಿಸುವ, ಮನಸ್ಸಿಗೆ ಜ್ಞಾನವನ್ನು ತಲುಪಿಸುವ ಜೀವ. ಗುರು ಶಿಷ್ಯನ ಸಂಬಂಧ ಕನಿಷ್ಠ ಪಕ್ಷ ಗೆಳೆಯರ ಸಂಬಂಧದಂತಾದರೂ ಇರಬೇಕು. ಇಲ್ಲಿ ಶಿಷ್ಯನನ್ನು ಹತ್ತಿಕ್ಕುವ, ಅವಮಾನ ಮಾಡುವ ಅಧ್ಯಾಪಕ ಕೆಟ್ಟದ್ದು ಮಾಡುತ್ತಾನೆ; ಅದಕ್ಕಿಂತ ಹೆಚ್ಚಾಗಿ ಗುರುವಿನ ಘನತೆಯನ್ನು ಪೂರ್ತಿ ಕಿತ್ತುಹಾಕುವ ಶಿಷ್ಯ ತನ್ನನ್ನೇ ನಾಶಪಡಿಸಿಕೊಳ್ಳುತ್ತಾನೆ. ಇಲ್ಲಿ ವಿದ್ಯೆ ಸ್ವೀಕರಿಸುವುದು ಹಾಗಿರಲಿ, ಕಲಿಕೆಯನ್ನು ಪಡೆಯುವುದೂ ಆಗುವುದಿಲ್ಲ.

ನಮ್ಮ ಆತುರ, ಹುಂಬತನದಲ್ಲಿ ನಮ್ಮನ್ನು ನಾವು ನಾಶಪಡಿಸಿಕೊಳ್ಳಕೂಡದು.

ಚೈನಾ ಪ್ರೇಮ

ಯಾರೋ ಒಬ್ಬರ ಎದಿರು ನಾನು ಚೈನಾದ ಅಭಿರುಚಿ, ಜೀವನದ ಪ್ರೇಮ ಕುರಿತು ಮಾತಾಡಿದ್ದೆನೆಂದು ಕಾಣುತ್ತದೆ. ಒಂದು ದಿನ ನನ್ನ ಮೇಜಿನ ಮೇಲೆ ಒಂದು ಪುಟ್ಟ ಪುಸ್ತಕ ಇತ್ತು, ಅದು ಚೈನಾದ ಪ್ರೇಮಗೀತೆಗಳ ಸಂಕಲನ. ಪ್ರೇಮ ಗೀತೆಗಳಿಗೆ ಒಪ್ಪುವಂಥ ಮೆದು ಹೊದಿಕೆಯ ಪುಸ್ತಕ; ಮರದ ಚಿತ್ರವುಳ್ಳ ಪುಸ್ತಕ. ಅವತ್ತು ಅಲ್ಲಲ್ಲಿ ಕಣ್ಣಾಡಿಸಿದ್ದ ನಾನು ಈಗ ನಡುವಿನ ಒಂದು ಹಾಳೆತೆರೆದು ಓದುತ್ತೇನೆ.

ಒಂದು ಹಕ್ಕಿ ಎಲೆಗಳ ನಡುವೆ
ತನ್ನ ಇನಿಯನನ್ನು ಸುಲಭವಾಗಿ ಕಾಣಬಲ್ಲದು;
ಆದರೆ ತರುಣಿಯ ಕಣ್ಣೀರು ಮುಗಿಲಿನಿಂದ ಬೀಳುವ
ಮಳೆಯಂತೆ ಸುರಿದರೂ
ಇನಿಯನ್ನ ತರಲಾರದು.

ಇನ್ನೊಂದು ಪದ್ಯದಿಂದ:

ನಾನು ನದಿ ಹರಿದು ಬರುವಲ್ಲಿ ಬದುಕುತ್ತಿರುವೆ
ನೀನು ನದಿ ಹರಿದು ಹೋಗುವಲ್ಲಿ
ಇರುವೆ; ನಾವಿಬ್ಬರೂ ಅದೇ ನದಿಯ ನೀರು
ಕುಡಿದರೂ, ಒಬ್ಬರಿಗೊಬ್ಬರು ಕಾಣಸಿಗುತ್ತಿಲ್ಲ.



ಹಳ್ಳಿಯ ಹುಡುಗಿಯರು
ನದಿಯಲ್ಲಿ ನೈದಿಲೆ ಹೂವ ಕೀಳಲು
ಬಂದಿದ್ದಾರೆ; ದೂರದ ಖುರ ಪುಟ್ಟ
ಧ್ವನಿ ಕೇಳಿದ ಅವರು ಬೊಂಬಿನ
ಪೊದೆಯ ಹಿಂದೆ
ಅವಿತುಕೊಳ್ಳುತ್ತಾರೆ. ಸೈನಿಕರು
ಹುಡುಗಿಯರಿದ್ದಲ್ಲಿಗೆ ಬಂದು,
ಏನೋ ಅನ್ನಿಸಿ ಕ್ಷಣ ನಿಂತು ಮುಂದೆ
ಹೋಗುತ್ತಾರೆ. ಆಗ
ಹುಡುಗಿಯರಲ್ಲಿ ಒಬ್ಬಳ ಕೈ
ಹಿಡಿದ ನೈದಿಲೆಯನ್ನು ನೆಲಕ್ಕೆ
ಬೀಳಿಸಿ ಬಡಿವ ಎದೆಯ
ಒತ್ತಿ ಹಿಡಿಯುತ್ತದೆ....

ಈ ಮಾತು ಸುಂದರಿಗೆ:

ಗಾಳಿ ನಿನ್ನ ವಸ್ತ್ರಗಳ
ಉಬ್ಬಿಸಿದಾಗ ನೀನು
ಮೋಡಗಳ ಉಟ್ಟಿರುವ ದೇವಕನ್ಯೆಯಂತೆ ಕಾಣುವೆ;
ಭಿಕ್ಷುಕ ನಿನ್ನನ್ನು ಕಂಡು ತನ್ನ ಹಸಿವು ಮರೆಯುತ್ತಾನೆ.

ಮಾತೃಭಾಷೆಗಾಗಿ

ಅವರ ಹೆಸರು ಗೋವಿಂದರಾವ್ ಮೆಹಂದಳೇಕರ. ಮಹಾರಾಷ್ಟ್ರದ ಪೂನಾದವರು; ಹತ್ತೊಂಭತ್ತನೆ ಶತಮಾನದಲ್ಲಿ ಇದ್ದವರು. ಮರಾಠಿ ಇವರ ಭಾಷೆ. ಮರಾಠಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ವಿಜೃಂಭಿಸುತ್ತಿದ್ದ ಕಾಲ ಅದು. ಕನ್ನಡ ನಶಿಸಿಹೋಗುತ್ತಿದ್ದ ಕಾಲ. ಈ ಗೋವಿಂದರಾವ್ ಕರ್ನಾಟಕದಿಂದ ಬಂದಿದ್ದ ಹದಿಮೂರು ವರ್ಷದ ಪುಟ್ಟ ಬಾಲಕನನ್ನು ಗಮನಿಸಿದ್ದರು. ಆತ ಮಾಧ್ಯಮಿಕ ಶಾಲೆಯಲ್ಲಿದ್ದ, ಆತನಲ್ಲಿದ್ದ ಜ್ಞಾನದ ದಾಹ, ಶಿಸ್ತು, ಪ್ರತಿಭೆಯನ್ನು ಕಂಡಿದ್ದರು. ಆತನ ಬಡತನ ಕೂಡ ಅವರಿಗೆ ಗೊತ್ತಿತ್ತು, ಗೋವಿಂದರಾವ್ ಹುಡುಗನನ್ನು ಕರೆದು ಅಭಯಹಸ್ತ ನೀಡಿದರು; ಅವನ ಓದಿಗೆ ಹಣ ನೀಡತೊಡಗಿದರು. ಗೋವಿಂದರಾಯರ ನೆರವಿಲ್ಲದಿದ್ದರೆ ಈ ಹುಡುಗ ಪೂನಾದಿಂದ ತನ್ನ ಊರಾದ ಗೋಕಾಕಕ್ಕೆ ಹಿಂದಿರುಗಬೇಕಿತ್ತು, ಇದೇ ಹುಡುಗ ಗೋವಿಂದರಾಯರ ಸಹಾಯದಿಂದ ವಿದ್ಯಾಭ್ಯಾಸ ಮುಗಿಸಿ ಕರ್ನಾಟಕಕ್ಕೆ ಹಿಂದಿರುಗಿ ಕನ್ನಡವನ್ನು ಬೆಳೆಸಿದ ಡೆಪ್ಯೂಟಿ ಚೆನ್ನಬಸಪ್ಪ.



ಚೆನ್ನಬಸಪ್ಪನವರಿಂದಾಗಿ ಕರ್ನಾಟಕದಲ್ಲಿ ಮರಾಠಿ ಪ್ರಾಬಲ್ಯ ಕಡಿಮೆಯಾಗಿ ಕನ್ನಡ ಬೆಳೆಯಿತು. ಕನ್ನಡಿಗರ ಆತ್ಮಗೌರವ ಬೆಳೆಯಿತು. ಕನ್ನಡ ಶಾಲೆಗಳು, ಸಾಹಿತ್ಯ ಸಮೃದ್ಧಿಯಾಗಿ ಬೆಳೆದವು.

ಮರಾಠಿ ಮನುಷ್ಯ ಗೋವಿಂದರಾವ್ ಮೆಹಂದಳೇಕರರಿಗೆ ತಾವು ಬೆಳೆಸಿದ ಹುಡುಗ ಚೆನ್ನಬಸಪ್ಪ ಕನ್ನಡಕ್ಕೆ ಸಂಜೀವಿನಿಯಾದದ್ದು ಕಂಡು ಏನು ಅನ್ನಿಸಿರಬಹುದು? ಮೆಚ್ಚಿಗೆ, ಅಭಿಮಾನ; ಕೃತಕೃತ್ಯ ಭಾವನೆ. ಯಾಕೆಂದರೆ ಮಾತೃ ಭಾಷೆಯ ವಿಚಾರದಲ್ಲಿ ಉದಾರಿ ಗೋವಿಂದರಾವ್ ಅವರಲ್ಲಿ ಸಣ್ಣತನವಿರುವುದು ಸಾಧ್ಯವಿಲ್ಲ; ಅವರಿಗೆ ಮರಾಠಿ ಇದ್ದಂತೆಯೇ ಚೆನ್ನಬಸಪ್ಪನವರಿಗೆ ಕನ್ನಡ. ಯಾರು ಮಾತೃಭಾಷೆಯ ಏಳಿಗೆಗೆ ಕಾರಣವಾದರೂ ಆತ ಅರ್ಥಪೂರ್ಣ ವ್ಯಕ್ತಿ. ಗೋವಿಂದರಾಯರಿಗೆ ಚೆನ್ನಬಸಪ್ಪ ಪ್ರೀತಿಯ ಕಣ್ಮಣಿ.

ಮಾತೃಭಾಷೆಯ ಬಗ್ಗೆ ಸಣ್ಣತನ ಇರಕೂಡದು.

*****

ಹೀಗೆನ್ನುತ್ತಿರುವಾಗಲೇ ಮೊನ್ನೆ ಬಿಜಾಪುರ ಜಿಲ್ಲೆಯಲ್ಲಿ ಮಿತ್ರರೊಬ್ಬರು ಹೇಳಿದ್ದು ನನ್ನನ್ನು ಕೆರಳಿಸುತ್ತಿದೆ. ಮಹಾರಾಷ್ಟ್ರದಲ್ಲಿ ಸೇರಿರುವ ಕನ್ನಡ ಗ್ರಾಮಗಳಲ್ಲಿ ಕನ್ನಡವನ್ನು ನಾಶಗೊಳಿಸುತ್ತಿವೆ; ಕನ್ನಡ ಅಧ್ಯಾಪಕನೊಬ್ಬ ನಿವೃತ್ತನಾದರೆ ಹೊಸಬರನ್ನು ನೇಮಿಸುತ್ತಿಲ್ಲ, ಅಲ್ಲಿಯ ಕನ್ನಡಿಗರು ತಮ್ಮ ಭಾಷೆಯ ವಿನಾಶ ನೋಡಿ ಅಸಹಾಯಕತೆ, ನೋವಿನಲ್ಲಿ ಮುಳುಗಿದ್ದಾರೆ.

ಚಾಮಲಾಪುರ ವಿದ್ಯುತ್ ಸ್ಥಾವರ ಮೈಸೂರಿಗೆ ಮರಣ ಶಾಸನ ಬರೆಯುತ್ತಿರುವ ಕೋ-ಜಾ ಸರ್ಕಾರ



ಕೋ-ಜಾ ಸರ್ಕಾರ ರಾಜ್ಯದ ಅಭಿವೃದ್ಧಿಗೆ ಮಾಡಬೇಕಾದದ್ದೇನೂ ಮಾಡಲಿಲ್ಲ, ಕನಿಷ್ಠ ಪಕ್ಷ ಜನರನ್ನು ನೆಮ್ಮದಿಯಿಂದ ಬದುಕಲೂ ಕೂಡ ಬಿಡುತ್ತಿಲ್ಲ ಎಂದರೆ ಏನೆನ್ನಬೇಕು? ತನ್ನ ಆಡಳಿತಾವಧಿಯಲ್ಲಿ ನೂರಾರು ರೈತರ ಆತ್ಮಹತ್ಯೆಗಳಿಗೆ ಕಾರಣವಾದ ಸರ್ಕಾರ ಈಗ ಮೈಸೂರಿಗೂ ಮರಣಶಾಸನ ಬರೆಯಲು ಮುಂದಾಗಿದೆ. ಹೆಗ್ಗಡದೇವನ ಕೋಟೆಯ ಚಾಮಲಾಪುರದಲ್ಲಿ ಒಂದು ಶಾಖೋತ್ಪನ್ನ ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವ ಮೂಲಕ ಇಡೀ ಪ್ರದೇಶವನ್ನು ನರಕವನ್ನಾಗಿ ಮಾಡಲು ಹೊರಟಿದೆ.

ಚಾಮಲಾಪುರದಲ್ಲಿ ಈ ವಿದ್ಯುತ್ ಸ್ಥಾವರ ಸ್ಥಾಪನೆಯಾದದ್ದೇ ಆದರೆ ಅದಕ್ಕೆ ಹೊಂದಿಕೊಂಡಿರುವ ಬಂಡೀಪುರ, ನಾಗರಹೊಳೆ, ಕಾಕನಕೋಟೆ, ಕಾರಪುರ ಅರಣ್ಯ ಪ್ರದೇಶಗಳು ನಾಶವಾಗಿ ಅಲ್ಲಿ ವಾಸಿಸುತ್ತಿರುವ ವೈವಿಧ್ಯಮಯ ವನ್ಯಜೀವಿಗಳು, ಪಕ್ಷಿ ಸಂಕುಲಗಳು ನಿಧಾನವಾಗಿ ಕಣ್ಮರೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಏಕೆಂದರೆ, ಈ ವಿದ್ಯುತ್ ಸ್ಥಾವರವು ಹೊರಸೂಸುವ ಹಾರುಬೂದಿ ಹಾಗೂ ಇತರ ತ್ಯಾಜ್ಯ ವಸ್ತುಗಳು ಅರಣ್ಯ ಮತ್ತು ವನ್ಯಜೀವಿಗಳಿಗೆ ಮಾತ್ರವಲ್ಲ, ಸುತ್ತಮುತ್ತಲಿನ ಕೆರೆ-ಹಳ್ಳಕೊಳ್ಳಗಳಿಗೆ, ಕಬಿನಿ ಜಲಾಶಯ ಮತ್ತು ಕೃಷ್ಣರಾಜಸಾಗರ ಜಲಾಶಯಕ್ಕೆ ಸೇರಿ ತುಂಬಲಾರದಷ್ಟು ಹಾನಿಯುಂಟಾಗಲಿದೆ. ಕೃಷ್ಣರಾಜಸಾಗರದಂತಹ ಬೃಹತ್ ಜಲಾಶಯದ ನೀರೇ ಕಲುಷಿತಗೊಂಡರೆ ಆಗಬಹುದಾದ ಅನಾಹುತವನ್ನು ಯಾರು ಬೇಕಾದರೂ ಊಹಿಸಬಹುದು.

ಚಾಮಲಾಪುರದಿಂದ ಸುಮಾರು 50 ಕಿ.ಮೀ. ದೂರದ ಎಲ್ಲಾ ಲಕ್ಷಾಂತರ ಎಕರೆ ವ್ಯವಸಾಯ ಯೋಗ್ಯ ಭೂಮಿ ಈ ಸ್ಥಾವರದ ತ್ಯಾಜ್ಯಗಳಿಂದ ಕಲುಷಿತಗೊಂಡು ಬಂಜರು ಭೂಮಿಯಂತಾದರೂ ಆಶ್ಚರ್ಯವಿಲ್ಲ. ಅಂದರೆ, ದೇವೇಗೌಡನಂತಹ ನಕಲಿ ಮಣ್ಣಿನ ಮಕ್ಕಳು, ಮಣ್ಣಿನ ಮೊಮ್ಮಕ್ಕಳು ಈ ನೆಲದ ಅಸಲಿ ಮಣ್ಣಿನ ಮಕ್ಕಳನ್ನು ನಾಶ ಮಾಡಲು ಪಣತೊಟ್ಟು ಹೊರಟಿರುವುದು ಮೇಲ್ನೋಟಕ್ಕೇ ಕಾಣುತ್ತಿದೆ.


ಇಂಧನ ಖಾತೆ ಸಚಿವ ರೇವಣ್ಣನವರ, ಅಂದರೆ ಮಣ್ಣಿನ ಮೊಮ್ಮಗನ ವಿಶೇಷ ಆಸಕ್ತಿಯಿಂದ ಮೂಡಿಬರುತ್ತಿರುವ ಈ ಯೋಜನೆಯು ಸುಮಾರು 6,500 ಕೋಟಿ ರೂ.ಗಳಷ್ಟು ವೆಚ್ಚವುಳ್ಳದ್ದಾಗಿದೆ. ಅವರ ಪ್ರಕಾರವೇ ಈ ಯೋಜನೆಗಾಗಿ ಸುಮಾರು 3,000 ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಂಡು ಸುಮಾರು 30,000 ಕೃಷಿಕರನ್ನು ಎತ್ತಂಗಡಿ ಮಾಡಲಾಗುತ್ತದೆ. ಇದು ಮಣ್ಣಿನ ಮೊಮ್ಮಕ್ಕಳು ಈ ರಾಜ್ಯದ ಅಸಲಿ ಮಣ್ಣಿನ ಮಕ್ಕಳಿಗೆ ಕೊಡುತ್ತಿರುವ ಬಳುವಳಿ. ಅಲ್ಲದೇ, ಈ ಸ್ಥಾವರವು ಪ್ರತಿದಿನ ನೂರು ಕೋಟಿ ಕಬಿನಿ ನೀರನ್ನು ಕುಡಿಯಲಿದೆ.

ಈ ಸ್ಥಾವರದಲ್ಲಿ ಪ್ರತಿದಿನ 5.3 ಮಿಲಿಯನ್ ಟನ್ ಕಲ್ಲಿದ್ದಲನ್ನು ಉರುವಲಾಗಿ ಬಳಸಲಾಗುತ್ತದೆ. ಇದರಿಂದ 50 ಟನ್ ನೈಟ್ರಿಕ್ ಆಕ್ಸೈಡ್, ವಾರ್ಷಿಕ 7.5 ಮಿಲಿಯನ್ ಟನ್ ಕಾರ್ಬನ್ ಡೈ ಆಕ್ಸೈಡ್ ಹಾಗೂ ಪ್ರತಿದಿನ 6000 ಟನ್ ಕಲ್ಲಿದ್ದಲು ತ್ಯಾಜ್ಯ ಉತ್ಪಾದನೆಯಾಗಲಿದೆ ಎಂದರೆ ಈ ಸ್ಥಾವರ ಉಂಟು ಮಾಡಲಿರುವ ಪರಿಸರ ಮಾಲಿನ್ಯವನ್ನು ಅಂದಾಜಿಸಬಹುದೆ?

ಮೈಸೂರಿನಿಂದ ಕೇವಲ 15 ಕಿ.ಮೀ. ದೂರದಲ್ಲಿ (ವೈಮಾನಿಕ ದೂರ) ಸ್ಥಾಪನೆಯಾಗಲಿರುವ ಈ ಸ್ಥಾವರ ನಗರಕ್ಕೂ ಭಾರಿ ಅಪಾಯ ತಂದೊಡ್ಡಲಿದೆ. ಅದು ಹೊರಸೂಸುವ ನೈಟ್ರೋಜನ್ ಆಕ್ಸೈಡ್ ಮತ್ತು ಸಲ್ಫರ್ ಆಕ್ಸೈಡ್, ಪಾದರಸಗಳ ಪರಿಣಾಮವಾಗಿ ಆಮ್ಲ ಮಳೆ ಸುರಿಯಲಿದೆ. ಅಂದರೆ, ಸುತ್ತಮುತ್ತಲಿನ ಜನ ಜಾನುವಾರುಗಳು ಸರ್ವನಾಶವಾದಂತೆ.



ಚಾಮಲಾಪುರದಲ್ಲಿ ನಡೆದ ಪ್ರತಿಭಟನೆಯ ವೇಳೆ ಪೊಲೀಸರ ದೌರ್ಜನ್ಯ



ಈ ಸ್ಥಾವರವು ಹೊರಸೂಸುವ ತ್ಯಾಜ್ಯಗಳಿಂದ ಆಸುಪಾಸಿನ ಗಿರಿಜನರೂ ಅಪಾಯಕ್ಕೀಡಾಗಲಿದ್ದಾರೆ. ಮೊನ್ನೆ ಮೈಸೂರು ವಲಯ ಅರಣ್ಯ ಸಂರಕ್ಷಣಾಧಿಕಾರಿ ಪತ್ರಿಕಾಗೋಷ್ಠಿ ಮಾಡಿ ಗಿರಿಜನರನ್ನು ಈ ಯೋಜನೆಗಾಗಿ ಒಕ್ಕಲೆಬ್ಬಿಸಲಾಗುವುದು ಎಂದು ಹೇಳಿರುವುದು ಮತ್ತಷ್ಟು ಆತಂಕವನ್ನು ಸೃಷ್ಟಿಸಿದೆ.

ಈ ಸ್ಥಾವರ ಸೃಷ್ಟಿಸುವ ಮತ್ತೊಂದು ಭೀಕರ ಸಮಸ್ಯೆ ಎಂದರೆ ಅಣುವಿಕಿರಣದ್ದು. ಅದು ಹೊರಸೂಸುವ ಅಣುವಿಕಿರಣಗಳು ಎನ್‌ಒಆರ್‌ಎಸ್ ಎಂದು ಕರೆಯಲ್ಪಡುವ ಆರ್‌ಎಎಸ್ ಡಿಒಎಸ್ 222 ಎಂಬ ವಿಷಕಾರಿ ವಸ್ತು ಒಮ್ಮೆ ಮಾನವನ ಶ್ವಾಸಕೋಶ ಪ್ರವೇಶಿಸಿತೆಂದರೆ ಮುಗಿಯಿತು, ಕ್ಯಾನ್ಸರ್‌ದಂತಹ ಭೀಕರ ಕಾಯಿಲೆಗಳು ಕಟ್ಟಿಟ್ಟ ಬುತ್ತಿ, ಅಂದರೆ, ಒಂದು ವೇಳೆ ಚಾಮಲಾಪುರದಲ್ಲಿ ಈ ಸ್ಥಾವರ ಸ್ಥಾಪನೆಯಾದದ್ದೇ ಆದಲ್ಲಿ, ವಿಶ್ವದಲ್ಲಿಯೇ ಅರಮನೆಗಳ ನಗರ, ಪಿಂಚಣಿದಾರರ ಸ್ವರ್ಗ ಎಂದೆಲ್ಲಾ ಕರೆಸಿಕೊಂಡಿದ್ದ ನಗರ ಕ್ಯಾನ್ಸರ್ ರೋಗಿಗಳ ನಗರ ಎಂದು ಕರೆಸಿಕೊಳ್ಳುವ ದಿನ ದೂರವಿಲ್ಲ, ಕೇವಲ ಮೈಸೂರು ಏಕೆ? ಈ ವಿಕಿರಣಗಳು, ತ್ಯಾಜ್ಯಗಳು ಕಾವೇರಿಯನ್ನು ತಲುಪಿದರೆ ಈ ನೀರನ್ನೇ ಕುಡಿದು ಬದುಕುತ್ತಿರುವ ಬೆಂಗಳೂರಿನ ಜನರ ಕತೆ ಏನೆಂದು ಊಹಿಸಿ.

ಈ ಸ್ಥಾವರದ ತ್ಯಾಜ್ಯಗಳು ಸುತ್ತಮುತ್ತಲ ಪ್ರದೇಶದ ಅಂತರ್ಜಲವನ್ನು ಸೇರುವುದರಿಂದ ಅಂತರ್ಜಲವೂ ಕಲುಷಿತವಾಗಿ ಬೋರ್‌ವೆಲ್‌ಗಳನ್ನು ಬಳಸುತ್ತಿರುವ ಜನರೂ ಅಪಾಯದ ಅಂಚಿಗೆ ಹೋಗಲಿದ್ದಾರೆ.

ಆದರೆ, ದುರಂತ ಎಂದರೆ, ಯಾವೊಬ್ಬ ರಾಜಕಾರಣಿಯೂ ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ. ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ನಮ್ಮ ಜನಪ್ರತಿನಿಧಿಗಳು ತಿಂಡಿ ಸರಿಯಾಗಿ ಕೊಡುತ್ತಿಲ್ಲ, ಟೀ ಸರಿಯಾಗಿ ಸಿಗುತ್ತಿಲ್ಲ ಎಂಬ ಚರ್ಚೆಗಳನ್ನು ಮಾಡಿದರೇ ಹೊರತು ಈ ಯೋಜನೆಯ ಬಗ್ಗೆಯಾಗಲೀ, ರೈತರ ಆತ್ಮಹತ್ಯೆಗಳ ಬಗ್ಗೆಯಾಗಲೀ ಗಂಭೀರವಾಗಿ ಚರ್ಚಿಸಲೇ ಇಲ್ಲ.

ರಾಜಕಾರಣಿಗಳು ಈ ಯೋಜನೆಯ ಬಗ್ಗೆ ಮಾತನಾಡದಿರುವುದನ್ನು ನೋಡಿದರೆ ಎಲ್ಲರೂ ಒಂದಿಷ್ಟು ಕಮೀಷನನ್ನು ತಿಂದು ಸುಮ್ಮನಾಗಿರುವುದು ಮೇಲ್ನೋಟಕ್ಕೇ ಅರ್ಥವಾಗುತ್ತದೆ. ಹಾಗಾಗಿ, ಈಗ ಜನರೇ ಬೀದಿಗಿಳಿದು ಹೋರಾಡಲು ಸಜ್ಜಾಗಿದ್ದಾರೆ. ಸರ್ಕಾರ, ಅದರಲ್ಲೂ ವಿಶೇಷವಾಗಿ ಮಣ್ಣಿನ ಮೊಮ್ಮಕ್ಕಳು ಇಂತಹ ಒಂದು ಜನವಿರೋಧಿ, ಪರಿಸರ ವಿರೋಧಿ ಯೋಜನೆಯನ್ನು ಹಿಂತೆಗೆದುಕೊಳ್ಳದಿದ್ದರೆ ಮೈಸೂರಿನ ಜನ ಅವರಿಗೆ ತಕ್ಕ ಪಾಠ ಕಲಿಸುವ ದಿನಗಳು ದೂರವಿಲ್ಲ.


-ವರದಿಗಾರ

ಏನೇ ಆದರೂ 'ಮಾಮಾಮು' ನೋಡಬೇಕಾದ ಚಿತ್ರ

ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾಮಾಮು' ಚಿತ್ರವನ್ನೂ, ಅದನ್ನು ಕುರಿತು ಪ್ರೊ ವಿ.ಎಸ್. ಶ್ರೀಧರ ಅವರು ಬರೆದಿದ್ದ ವಿಮರ್ಶೆಯನ್ನು ನೋಡಿ ಈ ಪ್ರತಿಕ್ರಿಯೆ. ಆ ಚಿತ್ರ ಕುರಿತಂತೆ ಶ್ರೀಧರ ಅವರು ಹೇಳಿರುವುದು ಸರಿಯಾದರೂ ಇವತ್ತಿನ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದಿಂದಾಗುತ್ತಿರುವ ಅನ್ಯಾಯಗಳ ಬಗ್ಗೆ ಸಿನಿಮಾ ಮಾಡುವುದು ಕಷ್ಟ ಸರಿ. ಹಾಗಿದ್ದರೂ ಅಂತಹ ಒಂದು ಪ್ರಯೋಗವನ್ನು ನಾಗತಿಹಳ್ಳಿ ಮಾಡಿದ್ದಾರೆ. ಇವತ್ತು ಹಲವಾರು ವರದಿಗಳಿಗಿಂತ, ಲೇಖನಗಳಿಂತ ಸಿನಿಮಾದಂತಹ ಮಾಧ್ಯಮ ಬಹಳಷ್ಟು ಜನರನ್ನು ತಲುಪುವುದರಿಂದ ಅವರ ಈ ಚಿತ್ರವನ್ನು- ಅದರ ಎಲ್ಲ ಓರೆಕೋರೆಗಳೊಂದಿಗೆ- ಸ್ವೀಕರಿಸಬೇಕಿದೆ. ನಾನಂತೂ ಅದನ್ನೇ ಮಾಡುತ್ತಿದ್ದೇನೆ. 'ಮಾಮಾಮು' ಥಿಯೇಟರ್‌ನಿಂದ ನಿಕಾಲಿಯಾಗುವ ಮುನ್ನವೇ ಅದನ್ನು ನೋಡಿ ಎಂದು ನನ್ನ ಸುತ್ತ ಇರುವ ಜನರಿಗೆ ಹೇಳುತ್ತಿದ್ದೇನೆ. ಬೇರೆ ಯಾವ ಉದ್ದೇಶದಿಂದಲ್ಲವಾದರೂ, ನಮ್ಮ ದೇಶಕ್ಕೆ, ಸಮಾಜಕ್ಕೆ ಕಾದಿರುವ ಅಪಾಯವನ್ನು ಜನ ಅರಿಯಲೆಂದು.

-ಅಶೋಕ್, ಬೆಂಗಳೂರು





ಗೆಳೆಯನೊಬ್ಬ ಜಾಗತೀಕರಣ, ಭೂಕಬಳಿಕೆ, ರೈತರ ಬವಣೆ, ನಕ್ಸಲೈಟ್-ಸಿನಿಮಾ ಎಂದರಿಂದ ನಾಗತಿಹಳ್ಳಿಯವರ 'ಮಾಮಾಮು' ನೋಡಿದಾಗ ನಮ್ಮ ಬಿ. ಚಂದ್ರೇಗೌಡರ ಮೇಲೆ ಸಿಟ್ಟಾಯಿತು! ನಮ್ಮೆಲ್ಲರ ಜನಪ್ರಿಯ ಅಂಕಣ 'ಲಂಕೇಶ್'ನ 'ಬಯಲು ಸೀಮೆಯ ಕಟ್ಟೆಪುರಾಣ'ದ ಪಾತ್ರಗಳನ್ನು ನಾಗತಿಹಳ್ಳಿಯವರು ಸಿನಿಮಾದಲ್ಲಿ ಬಳಸಿಕೊಂಡ ರೀತಿ ವಾಸ್ತವ ಕಲ್ಪನೆಗೆ ವಿರುದ್ಧವಾಗಿದೆ. ಸಿನಿಮಾ ರಂಗದಲ್ಲಿ ದುರ್ಬೀನ್ ಹಾಕಿ ಹುಡುಕಿದರೂ 'ಕಟ್ಟೆ ಪುರಾಣ'ದ ಪಾತ್ರಗಳನ್ನು ಮಾಡುವವರು-ಅದರಲ್ಲೂ ಮಂಡ್ಯದಲ್ಲಿಯ ಅಪ್ಪಟ ಗ್ರಾಮ್ಯ ಭಾಷೆಯಾಡುವವರು ಸಿಗಲಾರರು. ದೊಡ್ಡಣ್ಣ, ಸಿಹಿಕಹಿ ಚಂದ್ರು, ಅರುಣ್‌ಪ್ರಸಾದ್, ತಾರಾ, ಮಂಡ್ಯ ರಮೇಶ್-ಕಾಳಮಾವ, ಸೀರ, ಉಗ್ರಿ, ಜುಮ್ಮಿ, ವಾಟಿಸ್ಸೆ (ಇವರಲ್ಲಿ ವಾಟಿಸ್ಸೆ ಪಾತ್ರ ಮಾಡಿದ ಮಂಡ್ಯ ರಮೇಶ್ ಪರವಾಗಿಲ್ಲ)ಗೆ ತಕ್ಕ ಆಯ್ಕೆಯೇ ಅಲ್ಲ. ಕೊನೆಪಕ್ಷ ಕುರುಚಲು ಗಡ್ಡ, ಮಾಸಿದ ಬಟ್ಟೆ, ಕೆದರಿದ ತಲೆಗೂದಲು, ಒಡಕಲು ದೇಹಗಳು ಹೊಂದಿರುವ ಗ್ರಾಮೀಣ್ಯ ಜನಗಳ ರೀತಿಯಾದ್ರು ಇವರನ್ನು ತೋರಿಸಿಲ್ಲ. ಒಟ್ಟಿನಲ್ಲಿ ಗೌಡರು ಸ್ನೇಹಕ್ಕೆ 'ಕಟ್ಟೆಪುರಾಣ'ದ ಪಾತ್ರಗಳನ್ನು ಮಾರಿಕೊಂಡಿದ್ದಾರೆ-ಹಾಗೇ ನಾಗತಿಹಳ್ಳಿಯವರು ಈ ಪಾತ್ರಗಳಿಗೆ ನ್ಯಾಯ ಒದಗಿಸದೇ ಸ್ನೇಹಾನ ದುರುಪಯೋಗಿಸಿಕೊಂಡು ನಮ್ಮೆಲ್ಲರ ನೈಜ ಕಲ್ಪನೆಯ ವಿಕಾರ ಮಾಡಿದ್ದಾರೆ.

-ಡಿ.ಎಲ್. ಮಂಜು, ಕೇರಳ

ತೆ / ಹೊಗಳಿಕೆ / ಳಿ / ಕೆ

'.....ಮಲ್ಲಿಗೆ' ಸಿನಿಮಾ ನೋಡಿದಾಗ ನನಗೆ ನೆನಪಾದು ಸಿದ್ಧಲಿಂಗಯ್ಯನವರ 'ಭೂತಯ್ಯನ ಮಗ ಅಯ್ಯು' ಚಿತ್ರದ ವಿಷ್ಣುರವರ 'ಗುಳ್ಳ'ನ ಪಾತ್ರ. ಅದರಲ್ಲಿ ಸಾಮಾನ್ಯ ರೈತನಾಗಿ ನಟಿಸಿದ್ದ ವಿಷ್ಣುರವರಿಗೆ ಕಾಸ್ಟ್ಯೂಮ್ ಸಹ ಪಾತ್ರಕ್ಕೆ ಹೊಂದುವಂತಿತ್ತು. ಆದರೆ 'ಮಲ್ಲಿಗೆ'ಯಲ್ಲಿ ಹಾಗಿಲ್ಲ. ನಮ್ಮ ಸುತ್ತ-ಮುತ್ತ ಎಲ್ಲೂ ಬಣ್ಣಬಣ್ಣದ ಪೇಟಗಳನ್ನು ಧರಿಸಿದ ರೈತರ್‍ಯಾರು ಕಾಣಿಸಲ್ಲ, ರೈತರ ಸಮಾವೇಶಗಳಲ್ಲಿ ರಾಜಕೀಯ ನಾಯಕರು ತಲೆಗೆ ರುಮಾಲು ಧರಿಸಿ ಪೋಸು ಕೊಡುವಂತೆ ವಿಷ್ಣು ಕೂಡ ಕಾಣುತ್ತಾ 'ಹೂವಯ್ಯ'ನಾಗಲು ಯತ್ನಿಸಿದ್ದಾರೆ. ಚಿತ್ರ ಎಲ್ಲಿ ಕಲಾತ್ಮಕ ಚಿತ್ರವಾಗಿಬಿಡುತ್ತದೋ ಎಂಬ ಆತಂಕದಲ್ಲಿ ಕಮರ್ಷಿಯಲ್ ಮಾಡಲು ಹೋಗಿ ನಾಗತಿಹಳ್ಳಿ ಸೋತಿತ್ತಾರೆ. ಆದರೂ ಇವತ್ತು ಜಾಗತೀಕರಣದ ಬಗ್ಗೆ ಜನರು ಹಲವು ಪ್ರಶ್ನೆಗಳನ್ನು ಕೇಳುವಂತೆ ಮಾಡಿದ್ದಾರೆ. ಇದಕ್ಕಾಗಿಯಾದರು ನಾಗ್ತಿಹಳ್ಳಿಗೆ ಥ್ಯಾಂಕ್ಸ್ ಹೇಳಲೇಬೇಕು.

-ಒದುಸಿದ್ದೇಗೌಡ ಕೆಬ್ಬೇಹಳ್ಳಿ, ಕನಕಪುರ

ಸಾಮಾನ್ಯ ದಶರತನ ಅಸಾಮಾನ್ಯ ಸಾಧನೆ ಕುರಿತ (ಕಂಡಹಾಗೆ) ಸಂಪಾದಕೀಯುವು ನಮ್ಮನ್ನಾಳುವ ನಾಯಕರು ಬರೀ ಭರವಸೆ ಕೊಡುವುದರಲ್ಲೇ ಅಧಿಕಾರದ ಸವಿಯುಂಡು, ಕಿಂಚಿತ್ತೂ ಜನಪರ ಕಾಳಜಿ ಇಲ್ಲದೆ ನಡೆದುಕೊಳ್ಳುತ್ತಿರುವುದು ಪ್ರಜಾತಂತ್ರ ವ್ಯವಸ್ಥೆಗೇ ಕಪ್ಪು ಚುಕ್ಕಿಯಂತಿದ್ದಾರೆ ಅನ್ನಿಸಿತು.

ತನ್ನ ಪ್ರೀತಿಯ ಮಡದಿ ಫಾಗುಣಿಯ ಸಾವಿಗೆ ಕಾರಣವಾಗಿದ್ದ ಬೆಟ್ಟವನ್ನೇ ಕೆತ್ತಿದ ದಶರತನ ಸಾಧನೆ ನಿಜಕ್ಕೂ ಮೆಚ್ಚುವಂಥದ್ದು. ಇದರಿಂದ ಹಳ್ಳಿಯ ಜನರ ಅಪಾರ ಶ್ರಮ ಮತ್ತು ಅಮೂಲ್ಯ ಸಮಯವನ್ನು ಉಳಿಸಿದ. ಇಂತಹ ಜನಪರ ಕಾಯಕವನ್ನು ಗುರುತಿಸದ ಸರ್ಕಾರಗಳು ಇನ್ನೆಂಥಹ ಕಾರ್ಯಗಳನ್ನು ಗುರುತಿಸಲು ಸಾಧ್ಯ.

-ಜದೇಕುಂಟೆ ಮಂಜುನಾಥ್, ಧಾರವಾದ

'ಲಂಕೇಶ್' ವಾರಪತ್ರಿಕೆಯ ಸೆಪ್ಟೆಂಬರ್5 ರ ಸಂಚಿಕೆಯಲ್ಲಿ 'ಮಾತೆ ಮಾದೇವಿಯ ಭೂಕಬಳಿಕೆ'ಯ ಬಗ್ಗೆ ಓದಿ ಗಾಬರಿಯಾಯಿತು. ಮಾತೆಯವರು ಅಧ್ಯಾತ್ಮದ ಹೆಸರೇಳಿಕೊಂಡು ರಿಯಲ್ ಎಸ್ಟೇಟ್ ದಂಧೆಗಿಳಿದಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಅಷ್ಟೇ ಅಲ್ಲದೆ ಭೂಮಿಯನ್ನು ನುಂಗುವ ಉದ್ದೇಶದಿಂದ ಸಿಕ್ಕ ಸಿಕ್ಕಲ್ಲೆಲ್ಲಾ ಬಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಬಸವಣ್ಣನನ್ನು 'ವಾಚ್‌ಮೆನ್'ನಂತೆ ಮಾಡುತ್ತಿರುವುದು ಮಾನವತಾವಾದಿ ಬಸವಣ್ಣನವರಿಗೆ ಮಾಡುತ್ತಿರುವ ದ್ರೋಹವೇ ಸರಿ.

ಇನ್ನಾದರೂ ಮಾತೆ ಮಹಾದೇವಿಯಂತವರು ತಮ್ಮ ಸ್ವಾರ್ಥಕ್ಕಾಗಿ ಬಸವಣ್ಣನವರ ಆದರ್ಶವನ್ನು ಬಲಿಕೊಡುವುದನ್ನು ನಿಲ್ಲಿಸಲಿ.

-ಡಿ.ಎಲ್. ನಾಗರಾಜು, ಹರಪನಹಳ್ಳಿ

ಮಾತಾಡ್ ಮಾತಾಡ್

ಬಾ ಲಾ ಜಿ



ಬಾಲಾಜಿ ಯಾನೆ ಈಶ್ವರ್ ಎಂಬ ರವಿಚಂದ್ರನ್ ಸಹೋದರ ಮಾತಾಡುವುದಿಲ್ಲ ಎಂಬುದು ಅನೇಕರ ಅಭಿಪ್ರಾಯ. ಏಕೆಂದರೆ ಈತ ಹತ್ತು ವರ್ಷಗಳಿಂದ ಉದ್ಯಮದಲ್ಲಿದ್ದರೂ, ಆ ಅವಧಿಯಲ್ಲಿ ಎರಡು ಚಿತ್ರಗಳಲ್ಲಿ ನಟಿಸಿದ್ದರೂ ಆತ ಮಾತಾಡಿರೋದು ಬಹಳ ಕಡಿಮೆ. ಆದರೆ ಮೊನ್ನೆ ಪತ್ರಕರ್ತರಿಗೆ ಸಿಕ್ಕಿದ್ದ ಬಾಲಾಜಿ ಎಲ್ಲರೂ ಬೆಚ್ಚಿಬೀಳುವಂತೆ ಮಾತನಾಡಿದರು. ಒಂದು ಹಂತದಲ್ಲಂತೂ ಅವರ ಸಹೋದರ ರವಿಚಂದ್ರನ್ ಪರಕಾಯಪ್ರವೇಶ ಮಾಡಿದಂತೆ ಕಾಣಿಸಿದರು. ಯಾಕೆಂದರೆ ಬಾಲಾಜಿ ಕೂಡ ರವಿಚಂದ್ರನ್ ತರಹ ನೇರ ಮಾತಿನ ವ್ಯಕ್ತಿ. ಜೊತೆಗೆ ಅಲ್ಲಲ್ಲಿ ಪಂಚ್ ಮತ್ತು ಪನ್ ಡಯಲಾಗ್‌ಗಳಿಂದ ರಂಜಿಸುತ್ತಾರೆ. ಅವರ ಮಾತಿನ ಒಟ್ಟಾರೆ ಸಾರಾಂಶ ಇಲ್ಲಿದೆ:

"ರವಿಚಂದ್ರನ್ ನನ್ನ ಪಾಲಿಗೆ ಸಹೋದರ, ಗಾಡ್‌ಫಾದರ್ ಮಾತ್ರವಲ್ಲ ಅವರೇ ನನ್ನ ಪಾಲಿನ ಆದರ್ಶ ಮತ್ತು ಸ್ಫೂರ್ತಿ. ಅವರು ನನ್ನನ್ನು ಸಹೋದರ ಎನ್ನುವುದಕ್ಕಿಂತ ಹಿರಿಯ ಮಗನಂತೆ ನೋಡಿಕೊಳ್ಳುತ್ತಿದ್ದಾರೆ. ಹೀಗಾಗಿ ಅವರೇ ನನಗೆ ಅಣ್ಣ ಮತ್ತು ಅಪ್ಪ... ಅವರ ಎದುರು ನಾನು ಮಾತನಾಡುವುದಿಲ್ಲ, ತಿನ್ನಲ್ಲ, ಕುಡಿಯೋಲ್ಲ. ಆದರೆ ನನ್ನ ಎಲ್ಲಾ ಅಗತ್ಯಗಳನ್ನು ಅವರು ಅರಿತು ನಾನು ಕೇಳುವ ಮೊದಲೇ ಪೂರೈಸುತ್ತಾರೆ."

ಬಾಲಾಜಿ ಹೀಗೆ ತಮ್ಮ ಸಹೋದರನ ಗುಣಗಾನದಲ್ಲಿದ್ದಾಗ "ಹಾಗಾದರೆ ನೀವು ಬೇರೆ ಮನೆ ಮಾಡಿದ್ದು ಯಾಕೆ?" ಎಂದು ಪತ್ರಕರ್ತರು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ "ವಾಸ್ತು ಕಾರಣಕ್ಕಾಗಿ ನಾನು ಆರು ತಿಂಗಳ ಕಾಲ ಬೇರೆ ಮನೆಯಲ್ಲಿ ಇರಬೇಕಾಯಿತು. ಆದರೆ ವಾಸ್ತು ಅವಧಿ ಮುಗಿದ ನಂತರ ಅಣ್ಣ ಕರೆದರು, ನಾನಿನ್ನೂ ಹೋಗಲಾಗಿಲ್ಲ ಅಷ್ಟೇ. ಇದಕ್ಕೆ ವಿಶೇಷ ಅರ್ಥ ಬೇಡ" ಎಂದು ಬಾಲಾಜಿ ಹೇಳಿದರು.

"ನಿಮ್ಮ 'ಅಹಂ ಪ್ರೇಮಾಸ್ಮಿ' ಚಿತ್ರ ಸುದೀರ್ಘವಾಗಿ ಎಳೆದುಕೊಂಡು ಹೋಗಿದ್ದರಿಂದ ನಿಮ್ಮ ತಾರುಣ್ಯದ ದಿನಗಳನ್ನು ವೇಸ್ಟ್ ಮಾಡಿದಿರಿ ಎಂದೆನಿಸುವುದಿಲ್ಲವೇ?" ಎಂಬ ಪ್ರಶ್ನೆಗೂ ಅವರ ಬತ್ತಳಿಕೆಯಲ್ಲಿ ಉತ್ತರವಿತ್ತು, "ಆ ಸಂದರ್ಭದಲ್ಲಿ ನಮ್ಮ 'ಕಲಾವಿದ' ಚಿತ್ರ ಬಾಕ್ಸ್ ಆಫೀಸಿನಲ್ಲಿ ಸೋತಿದ್ದರಿಂದ ನಮಗೆ ಕೋಟ್ಯಾಂತರ ರೂಪಾಯಿ ನಷ್ಟವಾಗಿತ್ತು; ಅದೇ ಸಂದರ್ಭದಲ್ಲಿ ಆದಾಯ ತೆರಿಗೆ ದಾಳಿಯೂ ನಡೆಯಿತು. ಇಂತಹ ಸಂಕಷ್ಟದ ಸಂದರ್ಭದಲ್ಲಿ ಈಶ್ವರಿ ಸಂಸ್ಥೆಗೆ ಒಂದು ಸೂಪರ್ ಹಿಟ್ ಚಿತ್ರದ ಅಗತ್ಯವಿತ್ತು. ಆ ಕಾರಣಕ್ಕಾಗಿ 'ನಿಮ್ಮ ಚಿತ್ರ ಮೊದಲೇ ಮುಗಿಸಿ, ಹಣ ಮಾಡಿದ ನಂತರ ನನ್ನ ಚಿತ್ರ ಮುಗಿಸಿ' ಎಂದು ಅಣ್ಣನಿಗೆ ನಾನೇ ಹೇಳಿದ್ದೆ" ಎಂದೂ ಉತ್ತರಿಸಿದರು.

ಕೊನೆಗೆ ಅವರು ಹೇಳಿದ ಇನ್ನೊಂದು ವಾಕ್ಯ ಅರ್ಥಪೂರ್ಣವಾಗಿತ್ತು. "ಅಣ್ಣ ಕಲಾವಿದನಾಗಿ ಯಶಸ್ಸು ಕಾಣೋದು ಮುಖ್ಯ. ಆದರೆ ನನಗೆ ಎರಡೆರಡು ಜವಾಬ್ದಾರಿಗಳಿವೆ. ನನ್ನ ತಂದೆ ವೀರಾಸ್ವಾಮಿಯವರ ಹಂಚಿಕಾ ಸಂಸ್ಥೆಯ ಕೆಲಸವನ್ನೂ, ಅಣ್ಣನ ಚಿತ್ರದ ಮಾರ್ಕೆಟಿಂಗ್ ಕೆಲಸವನ್ನೂ ನಾನು ನಿಭಾಯಿಸಬೇಕಾಗಿದೆ" ಎಂದು ಹೇಳಿದರು. ಅಂದರೆ ತಂದೆ ಮತ್ತು ಅಣ್ಣನ ಕನಸುಗಳನ್ನು ಸಾಕಾರಗೊಳಿಸಲು ಬಾಲಾಜಿ ಹೆಣಗಾಡುತ್ತಿದ್ದಾರೆ. ಇದರಿಂದಾಗಿ ಅವರ ಕಲಾವಿದ ಬದುಕು ನಿರೀಕ್ಷಿಸಿದಷ್ಟು ಸುಮಧುರವಾಗಿಲ್ಲ.

ಚಿತ್ರರಂಗವನ್ನೂ ಕಾಡುತ್ತಿರುವ ರಾಮ

ರಾಮಸೇತು ಬಗ್ಗೆ ರಾಜಕೀಯ ವಲಯದಲ್ಲಿ ವಾದ ವಿವಾದಗಳು ನಡೆಯುತ್ತಿರುವ ಸಂದರ್ಭದಲ್ಲೇ ದೇಶದ ನಾನಾ ಭಾಷೆಗಳ ಚಿತ್ರರಂಗಗಳಲ್ಲಿ ರಾಮಾಯಣ ಸೇರಿದಂತೆ ಮಹಾಭಾರತದ ಬಗ್ಗೆಯೂ ಮಾತು ಕೇಳಿಬರುತ್ತಿದೆ. ನಿರ್ಮಾಪಕ ಬಾಬಿ ಡಿಯೋಲ್‌ರೊಂದಿಗೆ ಮಹಾಭಾರತ ಕುರಿತಂತೆ ಖ್ಯಾತ ನಿರ್ದೇಶಕ ಮಣಿರತ್ನಂರವರು ಮಾಡಬಯಸಿದ್ದ ಚಿತ್ರ ಸದ್ಯದಲ್ಲೇ ಪ್ರಾರಂಭವಾಗುವ ಸೂಚನೆಗಳಿಲ್ಲ. ಆದರೆ ರಾಜ್ ಕುಮಾರ್ ಸಂತೋಷಿ ಎಂಬ ಇನ್ನೋರ್ವ ಖ್ಯಾತ ನಿರ್ದೇಶಕ ರಾಮಾಯಣ ಕುರಿತ ಚಿತ್ರವನ್ನು ಪ್ರಾರಂಭಿಸಲು ಸಜ್ಜಾಗಿದ್ದಾರೆ.




ಅವರ ಚಿತ್ರದಲ್ಲಿ ರಾಮನಾಗಿ ಅಜಯ್ ದೇವಗನ್, ಸೀತೆಯಾಗಿ ಕಾಜೋಲ್ ಮತ್ತು ರಾವಣನಾಗಿ ಕನ್ನಡಿಗ ಪ್ರಕಾಶ್ ರೈ ನಟಿಸಲಿದ್ದಾರಂತೆ. ಈ ಮಧ್ಯೆ ರಾಮನ ಪಾತ್ರ ಮಾಡಬಯಸಿದ್ದ ಸಲ್ಮಾನ್ ಖಾನ್ ಸದ್ಯಕ್ಕೆ ಕೃಷ್ಣನ ಜನ್ಮಸ್ಥಾನವನ್ನು ಎದುರಿಸುತ್ತಿರುವುದರಿಂದ ಆತನ ಆಸೆಯು ಹಾಗೇ ಉಳಿದಿದೆ. ಆದರೆ ಅಮೆರಿಕದಲ್ಲಿರುವ ಎನ್ ಆರ್ ಐ ಉರು ಪಟೇಲ್ ಎಂಬುವವರು ಅಲ್ಲಿಂದಲೇ ಹನುಮಂತನನ್ನು ಕುರಿತ ಚಿತ್ರವನ್ನು ತಯಾರಿಸುವುದರಲ್ಲಿ ಮಗ್ನರಾಗಿದ್ದಾರೆ.

ಹೀಗೆ ಹಿಂದಿ ಮತ್ತು ಅಮೆರಿಕದಲ್ಲಿ ರಾಮ, ಹನುಮಂತನ ಬಗ್ಗೆ ಆಶೆ-ನಿರಾಶೆಗಳು ಸಂಭವಿಸುತ್ತಿದ್ದರೆ, ಪಶ್ಚಿಮ ಬಂಗಾಳದಲ್ಲಿರುವ ಮತ್ತೋರ್ವ ಖ್ಯಾತ ನಿರ್ದೇಶಕಿ ಅಪರ್ಣ ಸೇನ್‌ರವರು ಸೀತೆಯ ದೃಷ್ಟಿಕೋನವನ್ನು ಆಧರಿಸಿ ಚಿತ್ರವೊಂದನ್ನು ಮಾಡುವುದಾಗಿ ಹೇಳಿದ್ದಾರೆ. ಆಕೆ ಈ ಯೋಜನೆ ಕುರಿತು ಕಳೆದ ಒಂದು ದಶಕದಿಂದ ಚಿಂತಿಸುತ್ತಿದ್ದರೂ ಅದಕ್ಕೆ ಇನ್ನೂ ಕಾಲ ಕೂಡಿ ಬಂದಿಲ್ಲ. ಯಾಕೆಂದರೆ ಅದನ್ನು ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ತಯಾರಿಸಲು ಇಚ್ಛಿಸಿದ್ದು ಅದಕ್ಕೆ ಅಪಾರ ಬಂಡವಾಳವನ್ನು ಹೂಡಲು ಯಾರೂ ಮುಂದೆಬಂದಿಲ್ಲ.

ಈ ಮಧ್ಯೆ, ಆಕೆಯ ಶಿಷ್ಯನಾಗಿರುವ ಮತ್ತೋರ್ವ ಖ್ಯಾತ ನಿರ್ದೇಶಕ ರಿತುಪರ್ಣೋ ಘೋಶ್‌ರವರು ಮಹಾಭಾರತದಲ್ಲಿನ ದ್ರೌಪದಿಯ ಕತೆಯನ್ನು ಹೇಳುವ ಚಿತ್ರಕತೆಯನ್ನು ತಯಾರಿಸಿದ್ದಾರಲ್ಲದೆ, ಅದರಲ್ಲಿ ದ್ರೌಪದಿಯ ಪಾತ್ರಕ್ಕೆ ಬಾಲಿವುಡ್ ನಟಿ ಬಿಪಾಷಾ ಬಸುಳೇ ಸೂಕ್ತ ಎಂದೂ ನಿರ್ಧರಿಸಿದ್ದಾರೆ. "ಆದರೆ ದ್ರೌಪದಿಯ ಕತೆಯಿಂದಾಗಿ ಅಪರ್ಣ ಸೇನ್‌ರವರ ಸೀತೆಯ ಕತೆಗೆ ಧಕ್ಕೆಯಾಗುವುದಾದರೆ ನಾನು ನನ್ನ ಚಿತ್ರವನ್ನು ಮುಂದೂಡಲು ಸಿದ್ಧ" ಎಂದಿದ್ದಾರೆ ರಿತುಪರ್ಣೋ ಘೋಶ್.

ಅಂತೂ ಎಲ್ಲೆಲ್ಲಿಯೂ ರಾಮ, ರಾವಣ ಮಾತ್ರವಲ್ಲದೆ ಸೀತೆ, ದ್ರೌಪದಿಯರ ಬಗ್ಗೆಯೂ ಜಪವೋ ಜಪ!

ಬ್ರಾಹ್ಮಣ ಕ್ಯಾತೆ




ಬ್ರಾಹ್ಮಣ ಸಂಘದವರು ಮತ್ತೆ ಕ್ಯಾತೆ ತೆಗೆದಿದ್ದಾರೆ. ಈ ಬ್ರಾಹ್ಮಣರಿಗೆ ಬಹುಶಃ ಕ್ರಿಯೇಟಿವಿಟಿ ಎಂಬುದು ಗೊತ್ತೇ ಇಲ್ಲ ಎನಿಸುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ಪಕ್ಷದ ನಾಯಕನಾಗಿದ್ದ ರವೀಂದ್ರ ಅಭಿನಯದ 'ಅಯ್ಯಂಗಾರ್ ಐ. ಪಿ. ಎಸ್' ಎಂಬ ಚಿತ್ರ ಮೊನ್ನೆ ಸೆಟ್ಟೇರಿತು. ಈ ಚಿತ್ರದ ಹೆಸರನ್ನು ಬದಲಾಯಿಸಬೇಕೆಂದು ಬ್ರಾಹ್ಮಣ ಸಂಘದವರು ಫಿಲ್ಮ್ ಚೇಂಬರ್‌ಗೆ ದೂರು ನೀಡಿದ್ದಾರೆ. ಆದರೆ ರವೀಂದ್ರ "ಈ ಚಿತ್ರದಲ್ಲಿ ನಾವು ಬ್ರಾಹ್ಮಣರನ್ನು ಅವಹೇಳನ ಮಾಡಿಲ್ಲ, ಹಾಗಾಗಿ ಚಿತ್ರದ ಹೆಸರನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ" ಎಂದು ಮರು ಸವಾಲು ಹಾಕಿದ್ದಾರೆ.

'ಅಯ್ಯಂಗಾರ್ ಐ. ಪಿ. ಎಸ್' ಎಂದು ಚಿತ್ರಕ್ಕೆ ಹೆಸರಿಟ್ಟರೆ ಬ್ರಾಹ್ಮಣ ಸಂಘದವರ ಗಂಟು ಏನು ಹೋಗುತ್ತದೆ? ಇಷ್ಟಕ್ಕೂ ಚಿತ್ರವೊಂದಕ್ಕೆ ಹೆಸರಿಡಬೇಕಾದರೆ ಇಂತಹ ದೊಣ್ಣೆ ನಾಯಕರ ಅನುಮತಿ ಖಂಡಿತಾ ಅಗತ್ಯವಿಲ್ಲ, ಚಿತ್ರದ ಹೆಸರಿನ ಬಗ್ಗೆ ಚರ್ಚಿಸಲು ಫಿಲ್ಮ್ ಚೇಂಬರೇ ಒಂದು ಸಮಿತಿಯನ್ನು ರಚಿಸಿದೆ. ಈ ಹಿಂದೆ ಇದೇ ಸಂಘದವರು ರವಿಚಂದ್ರನ್ ನಿರ್ದೇಶನದ 'ಬ್ರಾಹ್ಮಣ' ಎಂಬ ಚಿತ್ರಕ್ಕೆ ಕ್ಯಾತೆ ತೆಗೆದಿದ್ದರು. ಕೊನೆಗೆ ರವಿಚಂದ್ರನ್ 'ಬ್ರಾಹ್ಮಣ' ಹೆಸರಿನ ಬದಲಿಗೆ 'ರವಿಶಾಸ್ತ್ರಿ' ಎಂದು ಹೊಸ ಹೆಸರಿಟ್ಟಿದ್ದರು. ಹಾಗೆ ನೋಡಿದರೆ ಈ ಚಿತ್ರ ಬರುವ ಮೊದಲು ದರ್ಶನ್ 'ಶಾಸ್ತ್ರಿ' ಎಂಬ ಚಿತ್ರದಲ್ಲಿ ಲಾಂಗು, ಮಚ್ಚು ಹಿಡಿದು ರಕ್ತದೋಕುಳಿಯನ್ನೇ ಹರಿಸಿದ್ದರು. ಆಗ ಈ ಜನಿವಾರಿಗಳ ಸಂಘ ಚಕಾರ ಎತ್ತಲಿಲ್ಲ.

ಇಷ್ಟಕ್ಕೂ, ಈ ಬ್ರಾಹ್ಮಣ ಸಂಘ ಕಳೆದ ಒಂದು ವರ್ಷದಿಂದ ಸಿನಿಮಾ ಟೈಟಲ್ ಬಗ್ಗೆ ಕ್ಯಾತೆ ತೆಗೆದದ್ದು ಬಿಟ್ಟರೆ ಬೇರೆ ಏನೂ ಮಾಡೇ ಇಲ್ಲ ಎಂದು ಸ್ವತಃ ಬ್ರಾಹ್ಮಣರೇ ಹೇಳುತ್ತಿದ್ದಾರೆ.

ದಿನೇಶ್ ಬಾಬುರವರ ಇನ್ನೊಂದು ತರಹದ ದಾಖಲೆ!


ಮೊನ್ನೆ ಹನ್ನೆರಡೇ ದಿನಗಳಲ್ಲಿ ಚಿತ್ರವೊಂದರ ಚಿತ್ರೀಕರಣವನ್ನು ಮುಗಿಸಿ ದಾಖಲೆ ಸ್ಥಾಪಿಸಿರುವ ದಿನೇಶ್ ಬಾಬುರವರನ್ನು 'ನಿರ್ಮಾಪಕರ ಕಲ್ಪವೃಕ್ಷ' ಎಂದು ಕೆಲವರು ಬಣ್ಣಿಸುತ್ತಿದ್ದಾರೆ. ಏಕೆಂದರೆ ಹೀಗೆ ಆದಷ್ಟು ಬೇಗನೆ ಚಿತ್ರೀಕರಣ ಮುಗಿಸಿದರೆ ಅದು ನಿರ್ಮಾಪಕನ ಆರ್ಥಿಕ ಆರೋಗ್ಯಕ್ಕೆ ಒಳ್ಳೆಯದು ಎಂಬ ಕಾರಣದಿಂದ.



ಆದರೆ ದಿನೇಶ್ ಬಾಬುರವರ ರೆಕಾರ್ಡ್ ಮಾತ್ರ 'ಕಲ್ಪವೃಕ್ಷ' ಎಂಬ ಬಿರುದಿಗೆ ಸರಿಹೊಂದುವುದೇ ಇಲ್ಲ ಎಂದು ಹಲವು ಗಾಂಧಿನಗರಿಗಳು ವ್ಯಂಗ್ಯವಾಡುತ್ತಿದ್ದಾರೆ. ಅವರ ಪ್ರಕಾರ ಬಾಬು ಎರಡೇ ವಾರಗಳಲ್ಲಿ ಚಿತ್ರೀಕರಣವನ್ನೇನೋ ಮುಗಿಸಿರಬಹುದು. ಆದರೆ ಅವರು ನಿರ್ದೇಶಿಸಿರುವ ಹಲವು ಚಿತ್ರಗಳು ಎರಡು ವರ್ಷಗಳಾದರೂ ಬಿಡುಗಡೆಯಾಗಿಲ್ಲ. ಅದಕ್ಕೆ ಅವರು ಉದಾಹರಣೆಯಾಗಿ ನೀಡುವುದು 'ಆಕಾಶ ಗಂಗೆ' ಎಂಬ ಚಿತ್ರವನ್ನು. ಇದು ಸಂಪೂರ್ಣಗೊಂಡು ಕಳೆದ ಎರಡು ವರ್ಷಗಳಿಂದ ಡಬ್ಬಾದಲ್ಲೇ ಕೊಳೆಯುತ್ತಿದೆ.

ಅದಷ್ಟೇ ಅಲ್ಲದೆ, ದಿನೇಶ್ ಬಾಬು ನಿರ್ದೇಶನದ ಚಿತ್ರಗಳು ಬಿಡುಗಡೆ ಆಗಬೇಕಾದರೆ ನಿರ್ಮಾಪಕ ಭಗೀರಥ ಪ್ರಯತ್ನವನ್ನೇ ಮಾಡಬೇಕು. ಒಂದು ವೇಳೆ ಬಿಡುಗಡೆಯಾದರೂ ಬಿ ಮತ್ತು ಸಿ ಕೇಂದ್ರಗಳಲ್ಲಿ ಇವರ ಚಿತ್ರ ಅಷ್ಟೇನೂ ಓಡುವುದಿಲ್ಲ. ಸದ್ಯಕ್ಕೆ 'ಆಕಾಶ ಗಂಗೆ', 'ಗಣೇಶ', 'ಮಿಸ್ಟರ್ ಗರಗಸ' ದಿನೇಶ್ ಬಾಬು ನಿರ್ದೇಶಿಸಿರುವ, ಡಬ್ಬಾದಲ್ಲೇ ಕೊಳೆಯುತ್ತಾ ಬಿಡುಗಡೆಯ ಭಾಗ್ಯಕ್ಕಾಗಿ ಕಾಯುತ್ತಿರುವ ಚಿತ್ರಗಳು. ಇದೂ ಒಂದು ರೀತಿಯಲ್ಲಿ ದಾಖಲೆಯೇ ಅಲ್ಲವೆ?!

ಮೂರಕ್ಕೆ ಸ್ವಮೇಕ್



'ರಾಮ ಶಾಮ ಭಾಮ' ಮತ್ತು 'ಸತ್ಯವಾನ್ ಸಾವಿತ್ರಿ' ಎಂಬ ಎರಡು ರಿಮೇಕ್ ಚಿತ್ರಗಳ ನಂತರ ನಟ-ನಿರ್ದೇಶಕ ರಮೇಶ್ ಸ್ವಮೇಕ್ ಚಿತ್ರವೊಂದಕ್ಕೆ ಕೈ ಹಾಕಿದ್ದಾರೆ. ಚಿತ್ರದ ಹೆಸರು 'ಆಕ್ಸಿಡೆಂಟ್' ಆಗಿದ್ದು ಮೊನ್ನೆ ಇದರ ಮುಹೂರ್ತ ಅದ್ದೂರಿಯಾಗಿ ನಡೆಯಿತು. ಈ ಚಿತ್ರದ ವಿಶೇಷತೆ ಎಂದರೆ ಮೂರು ಕಥಾವಸ್ತುಗಳನ್ನು ಸೇರಿಸಿ ಒಂದು ಚಿತ್ರವನ್ನು ಮಾಡುತ್ತಿರುವುದು. ತಮ್ಮ ಮೊದಲೆರಡು ಚಿತ್ರಗಳಲ್ಲಿ ಪ್ರೇಕ್ಷಕರನ್ನು ನಕ್ಕು ನಲಿಸಿದ ರಮೇಶ್ ಈ ಬಾರಿ ಸಸ್ಪೆನ್ಸ್ ಥ್ರಿಲ್ಲರ್‌ಗೆ ಶರಣಾಗಿದ್ದಾರೆ.

ಅಂದಹಾಗೆ, ರಮೇಶ್‌ರವರಂತೆಯೇ ಈಗಾಗಲೇ ಎರಡು ರಿಮೇಕ್ ಚಿತ್ರಗಳನ್ನು ಕನ್ನಡ ಚಿತ್ರ ಪ್ರೇಕ್ಷಕರಿಗೆ ನಿರ್ದೇಶಕನಾಗಿ ಉಣಿಸಿರುವ ಸುದೀಪ್ ಕೂಡ ಆದಷ್ಟು ಬೇಗ ರಮೇಶ್ ಹಾದಿಯಲ್ಲೇ ಸಾಗಿ ಸ್ವಮೇಕ್ ಚಿತ್ರವೊಂದನ್ನು ನಿರ್ದೇಶಿಸುವಂತಾಗಲಿ ಎಂಬುದು ನಮ್ಮ ಶುಭ ಹಾರೈಕೆ.

ಮಹಿಳೆಯರಿಂದ, ಮಹಿಳೆಯರಿಗಾಗಿ, ಮಹಿಳೆಯರ ಬಗ್ಗೆ!



ಅಂದಕಾಲತ್ತಿಲ್‌ನ ಕನಸಿನ ಕನ್ಯೆ ಹೇಮಾಮಾಲಿನಿ ಈಗ ಚೆಡ್ಡಿಗಳ ಬಿಜೆಪಿ ಪಕ್ಷದಿಂದ ಸಂಸದೆ. ಆದರೆ ಸಂಸದೆಯಾಗಿ ಆಕೆ ಸಂಸತ್ತಿನ ಭವನದಲ್ಲಿ ಜನಪರವಾಗಿ ಚಕಾರವೆತ್ತಿಲ್ಲದಿದ್ದರೂ ಆಕೆ ಇವತ್ತಿಗೂ ಚಿತ್ರರಂಗದಲ್ಲಿ ಬ್ಯುಸಿ ಆಗಿರುವ ನಟಿ ಮತ್ತು ನೃತ್ಯಗಾರ್ತಿ. ಈಗ ಚಿತ್ರ ನಿರ್ಮಾಣಕ್ಕೂ ಇಳಿದಿರುವ ಹೇಮಾ ಮಾಲಿನಿ ತಮ್ಮ ಹೊಸ ಚಿತ್ರದ ನಿರ್ದೇಶಕಿಯಾಗಿ ಮಾಜಿ ನಟಿ ರೇವತಿಯನ್ನು ಆಯ್ಕೆ ಮಾಡಿದ್ದಾರೆ. ಈಗಾಗಲೇ 'ಮಿತ್ರ್' ಮತ್ತು 'ಫಿರ್ ಮಿಲೆಂಗೆ' ಎಂಬ ಎರಡು ಚಿತ್ರಗಳನ್ನು ನಿರ್ದೇಶಿಸಿರುವ ರೇವತಿ ಖ್ಯಾತಿ ಗಳಿಸಿದ್ದಾರೆ. ಅಂದಹಾಗೆ ಅದೇ ಚಿತ್ರದಲ್ಲಿ ನಟಿಸಲು ಈಗಲೂ ಉರಿಯುವ ಜ್ವಾಲೆಯಂತಿರುವ ರೇಖಾಳನ್ನು ಮತ್ತು ತನ್ನ ಮಗಳು ಈಶಾಳನ್ನೇ ಆಯ್ಕೆಮಾಡಿದ್ದಾರೆ.

ತಾಯಿ-ಮಗಳ ಸಂಬಂಧವನ್ನು ಕುರಿತ ಈ ಚಿತ್ರ ಮಹಿಳೆಯರಿಗಾಗಿ, ಮಹಿಳೆಯರಿಂದ, ಮಹಿಳೆಯರ ಬಗೆಗಿನ ಚಿತ್ರ ಎಂದರೆ [illegible]?

ಶಿಲ್ಪಾ ಎಂಬ ಹೂ, ಉಪ್ಪಿ ಎಂಬ ನಾರು



ಶಿಲ್ಪಾ ಶೆಟ್ಟಿ ಬ್ರಿಟನ್‌ನಲ್ಲಿ ಜನಾಂಗೀಯ ನಿಂದನೆಗೆ ಗುರಿಯಾಗಿದ್ದರಿಂದ ಆಕೆಗೆ ಮತ್ತೆ ಜನಪ್ರಿಯತೆ ಸಿಕ್ಕಿತು. ಆದರೆ ಅದರೊಂದಿಗೆ ಅದೆಷ್ಟೋ ನಿರ್ಮಾಪಕರ ಮತ್ತು ಹಂಚಿಕೆದಾರರ ಅದೃಷ್ಟ ಕೂಡ ಖುಲಾಯಿಸಿತು ಎಂದರೆ ನಂಬುತ್ತೀರಾ. ಆದರೆ ಇದು ನಿಜ. ಹಾಗೆ ಅದೃಷ್ಟ ಖುಲಾಯಿಸಿದವರಲ್ಲಿ ಕನ್ನಡ ಚಿತ್ರ ನಿರ್ಮಾಪಕ ರಾಮು ಹೆಸರು ಕೇಳಿಬರುತ್ತಿದೆ.

ಇವರು ನಿರ್ಮಿಸಿದ 'ಆಟೋ ಶಂಕರ್' ಎಂಬ ಕನ್ನಡ ಚಿತ್ರದಲ್ಲಿ ಶಿಲ್ಪಾ ಶೆಟ್ಟಿ ಉಪೇಂದ್ರ ಎದುರಿಗೆ ಖಳ ನಾಯಕಿಯಾಗಿ ಆರ್ಭಟಿಸಿದ್ದು ನಿಮಗೆಲ್ಲಾ ಗೊತ್ತೇ ಇದೆ. ಈಗ ಈ ಚಿತ್ರವನ್ನು ಹಿಂದಿಯಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಚಿತ್ರದ ಹೆಸರು 'ಶಿಲ್ಪಾ ದಿ ಬಿಗ್ ಡಾನ್'. ಇದನ್ನು ಸ್ವತಃ ರಾಮು ಮಾಡುತ್ತಿದ್ದಾರೋ ಅಥವಾ ಹಿಂದಿ ಹಕ್ಕನ್ನು ಬೇರೆಯವರಿಗೆ ನೀಡಿದ್ದಾರೋ ಗೊತ್ತಿಲ್ಲ.



ಈ ಚಿತ್ರಕ್ಕೆ ಸಂಬಂಧಪಟ್ಟ ಜಾಹೀರಾತುಗಳಲ್ಲಿ ಶಿಲ್ಪಾ ಶೆಟ್ಟಿಯ ದೊಡ್ಡ ದೊಡ್ಡ ಫೋಟೋಗಳು ರಾರಾಜಿಸುತ್ತಿವೆ. ಆದರೆ ಅವುಗಳಲ್ಲಿ ನಮ್ಮ ಹೀರೋ ಉಪೇಂದ್ರರ ಮುಖ ಎಲ್ಲೂ ಕಾಣಿಸುತ್ತಿಲ್ಲ! ಅಂತೂ ಇಂತೂ ಹೂವಿನೊಂದಿಗೆ ನಾರು ಕೂಡ ಸ್ವರ್ಗ ಸೇರಿತು ಎಂಬಂತೆ ಕರಾವಳಿ ತೀರದ ಈ ಬೆಡಗಿಯ ಜೊತೆಗೆ ಅದೇ ಕರಾವಳಿ ತೀರದ ಉಪೇಂದ್ರ ಹಿಂದಿ ಪ್ರೇಕ್ಷಕರಿಗೆ ಪರಿಚಿತರಾಗಲಿದ್ದಾರೆ.

ಶಂಕರ್‌ನಾಗ್ ಅಮರ್ ಹೈ!



ಶಂಕರ್‌ನಾಗ್ ತೀರಿಕೊಂಡು ಹಲವಾರು ವರ್ಷಗಳೇ ಆದರೂ ಅವರಿನ್ನೂ ಜನರ ಮನಸ್ಸಿನಲ್ಲಿ, ಚಿತ್ರರಂಗದವರ ಹೃದಯದಲ್ಲಿ ಜೀವಂತವಾಗಿದ್ದಾರೆ. ಇಲ್ಲವೆಂದರೆ ಇವತ್ತಿಗೂ ಆಟೋ ಚಾಲಕರು ತಮ್ಮ ವಾಹನಗಳ ಮೇಲೆ ಶಂಕರ್‌ರವರ ಫೋಟೋ ಬರೆಸುತ್ತಿದ್ದರಾ, ಚಿತ್ರರಂಗದವರು ಶಂಕರ್ ನಟಿಸಿದ್ದ ಎರಡು ಹಳೇ ಚಿತ್ರಗಳ ಹೆಸರುಗಳನ್ನೇ ತಮ್ಮ ಹೊಸ ಚಿತ್ರಗಳಿಗೆ ಇಡುತ್ತಿದ್ದರಾ?

ನಟ-ನಿರ್ದೇಶಕ ರಮೇಶ್ ರವರು ಈಗ ಪ್ರಾರಂಭಿಸಿರುವ ಮೂರನೆ ಚಿತ್ರದ ಹೆಸರು 'ಆಕ್ಸಿಡೆಂಟ್' ಆಗಿದ್ದರೆ, 'ಸೈನೈಡ್' ಖ್ಯಾತಿಯ ನಿರ್ದೇಶಕ ರಮೇಶ್ ತೆಗೆಯುತ್ತಿರುವ ಹೊಸ ಚಿತ್ರದ ಹೆಸರು 'ಮಿಂಚಿನ ಓಟ'. ಅಂದಹಾಗೆ ಈ ಇಬ್ಬರು ನಿರ್ದೇಶಕರ ಹೆಸರು ರಮೇಶ್ ಆಗಿದ್ದು ತಮ್ಮ ಚಿತ್ರಗಳಿಗೆ ಶಂಕರನಾಗ್ ನಟಿಸಿದ್ದ ಚಿತ್ರಗಳ ಹೆಸರನ್ನೇ ಇಟ್ಟಿದ್ದಾರೆ.

ಹಾಗೆ ನೋಡಿದರೆ, ಕಳೆದ ವರ್ಷವಷ್ಟೇ ಉಪೇಂದ್ರ ನಟಿಸಿದ್ದ ರಾಮು ನಿರ್ಮಾಣದ ಚಿತ್ರಕ್ಕೆ 'ಆಟೋ ಶಂಕರ್' ಎಂದು ಹೆಸರಿಟ್ಟಿದ್ದರು. ಅದಕ್ಕಿಂತ ಹಿಂದೆ 'H_2O' ಚಿತ್ರದ ಹಾಡೊಂದರಲ್ಲಿ ಉಪೇಂದ್ರರವರು ಶಂಕರ್ ನಾಗ್ ಮ್ಯಾನರಿಸಮ್ ಅನ್ನು ಅನುಸರಿಸಿದ್ದರು.

ಮೊನ್ನೆ ಮೊನ್ನೆಯಷ್ಟೇ 'ರಂಗ ಶಂಕರ'ದಲ್ಲಿ ಸಾವಿರ ನಾಟಕಗಳನ್ನು ಆಡಿಸುವ ಮುಖಾಂತರ ಪತ್ನಿ ಅರುಂಧತಿ ನಾಗ್ ಕೂಡ ಶಂಕರ್‌ನನ್ನು ಸ್ಮರಿಸಿದ್ದಾರೆ. ಶಂಕರ್ ನಿಧನರಾದ ನಂತರ ಇಷ್ಟು ವರ್ಷಗಳಾದರೂ ಇದೆಲ್ಲ ನಡೆಯುತ್ತಿರುವುದನ್ನು ಕಂಡು 'ಶಂಕರ್ ಅಮರ್ ಹೈ' ಅಂದರೆ ತಪ್ಪಾಗಲಾರದಲ್ಲವೇ?

ಮತ್ತೆ ಬಂದ ಗಣೇಶ




ನಟ ಗಣೇಶನ ಜನಪ್ರಿಯತೆಯೊಂದಿಗೆ ಆತನ ಹೆಸರು ಪಾಪ್ಯುಲರ್ ಆಗಿದೆಯೇ? ಈ ಪ್ರಶ್ನೆ ಯಾಕೆಂದರೆ ಈ ಕನ್ನಡ ಚಿತ್ರರಂಗದ ಹಲವಾರು ಜನ ತಮ್ಮ ಚಿತ್ರಗಳಿಗೆ ಗಣೇಶ್ ಎಂಬ ಹೆಸರನ್ನೇ ಇಡುತ್ತಿದ್ದಾರೆ!

ಇತ್ತೀಚೆಗೆ ಏನಾಗುತ್ತಿದೆ ಎಂದರೆ ಚಿತ್ರದ ಹೆಸರು ಇಡುವಾಗ ನಿರ್ಮಾಪಕರು ಒಂದೋ ಮಳೆಯ ಸುತ್ತಮುತ್ತ ಗಿರಕಿ ಹೊಡೆಯುತ್ತಿದ್ದಾರೆ, ಅದಿಲ್ಲವೆಂದರೆ ಗಣೇಶ ಎಂಬ ಹೆಸರಿನ ಬೆನ್ನು ಹತ್ತುತ್ತಿದ್ದಾರೆ. ಉದಾಹರಣೆಗೆ ರವಿಚಂದ್ರನ್‌ರಂತಹ ಶೋ ಮಾಸ್ಟರ್ ಕೂಡ ತಮ್ಮ ಹೊಸ ಚಿತ್ರಕ್ಕೆ 'ಮಂಜಿನ ಹನಿ' ಎಂದು ಹೆಸರಿಟ್ಟು ಈ ಚಿತ್ರವನ್ನು 'ಮುಂಗಾರು ಮಳೆ' ಚಿತ್ರೀಕರಣಗೊಂಡ ಸಕಲೇಶಪುರದಲ್ಲಿ ತೆಗೆಯುತ್ತಿದ್ದಾರೆ. ಇದರ ಜೊತೆಗೆ 'ಹನಿಹನಿ' ಹಾಗೂ ಇನ್ನೂ ಇಂತಹದ್ದೇ ಹೆಸರಿನ ಕೆಲವು ಚಿತ್ರಗಳು ಸೆಟ್ಟೇರಿವೆ.

ಈ ಮಧ್ಯೆ ಗಣೇಶ ಹೆಸರಿಗೂ ಬೇಡಿಕೆ ಬಂದು ಬಿಟ್ಟಿದೆ. ದಿನೇಶ್ ಬಾಬು ತಮ್ಮ ನಿರ್ದೇಶನದ ಜಗ್ಗೇಶ್ ನಟಿಸಿರುವ ಚಿತ್ರವೊಂದಕ್ಕೆ 'ಗಣೇಶ' ಎಂದು ಹೆಸರಿಟ್ಟಿದ್ದಾರೆ. ಹಾಗೆಯೇ ಗಣೇಶ ಬ್ರ್ಯಾಂಡಿನ ಅನೇಕ ಚಿತ್ರಗಳನ್ನು ನೀಡಿದ ಫಣಿ ರಾಮಚಂದ್ರ ಕೂಡ ಏಳು ವರ್ಷದ ಅಜ್ಞಾತವಾಸದಿಂದ ಹೊರಬಂದು ಈಗ ತಮ್ಮ ಹೊಸ ಚಿತ್ರಕ್ಕೆ 'ಗಣೇಶ ಮತ್ತೆ ಬಂದ' ಎಂಬ ಹೆಸರಿಟ್ಟಿದ್ದಾರೆ. ಇವರ ನಿರ್ದೇಶನದ 'ಗಣೇಶನ ಮದುವೆ', 'ಗೌರಿ ಗಣೇಶ', 'ಗಣೇಶ ಸುಬ್ರಹ್ಮಣ್ಯ', 'ಗಣೇಶನ ಗಲಾಟೆ', 'ಗಣೇಶ ಐ ಲವ್ ಯೂ' ಮೊದಲಾದ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಅಷ್ಟೊಂದು ಯಶಸ್ಸು ಕಾಣದಿದ್ದರೂ ಇವು ಎಲ್ಲರ ಗಮನ ಸೆಳೆದಿದ್ದವು. ಈ ಬಾರಿ ಫಣಿ ರಾಮಚಂದ್ರರಿಗೆ ಗಣೇಶ ಮತ್ತೆ ಒಲಿಯುತ್ತಾನೋ ಕಾದು ನೋಡಬೇಕು.

ಹೀರೋ ಆದ ಲೂಸ್ ಮಾದ




'ದುನಿಯಾ' ಚಿತ್ರದಲ್ಲಿ ಲೂಸ್ ಮಾದ ಎಂಬ ಹೆಸರಿನ ಪುಟ್ಟ ಪಾತ್ರದಲ್ಲಿ ಕಾಣಿಸಿಕೊಂಡು ಲೂಸ್ ಮಾದ ಎಂದೇ ಪಾಪ್ಯುಲರ್ ಆಗಿರುವ ಹುಡುಗ ಈಗ ನಾಯಕನಾಗಿ ನಟಿಸುತ್ತಿದ್ದಾನೆ. ಆ ಚಿತ್ರಕ್ಕೂ ಈ ಚಿತ್ರಕ್ಕೂ ಇರುವ ಸಾಮ್ಯತೆ ಏನೆಂದರೆ ಅವೆರಡರ ನಿರ್ಮಾಪಕರು ಈ ಹುಡುಗನ ತಂದೆಯಾದ ಸಿದ್ಧರಾಜುರವರು.

'ದುನಿಯಾ' ಚಿತ್ರದ ಯಶಸ್ಸು ಅದರ ತಂಡಕ್ಕೆ ಎಷ್ಟು ಆತ್ಮವಿಶ್ವಾಸ ತಂದಿತ್ತು ಎಂಬುದಕ್ಕೆ ಈಗ ಈ ಹುಡುಗನೂ ನಾಯಕನಾಗುತ್ತಿರುವುದೇ ಸಾಕ್ಷಿ. ಅಂದು ನಿರ್ಮಾಪಕನ ಮಗನಾದ ಈ ಹುಡುಗನಿಗೆ ನಿರ್ದೇಶಕ ಸೂರಿ ಪುಟ್ಟ ಪಾತ್ರವನ್ನು ನೀಡಿದ್ದರು. ಅದನ್ನು ಸಂಕೋಚದಿಂದಲೇ ಸ್ವೀಕರಿಸಿದ್ದ ಈ ಹುಡುಗ ಚೆನ್ನಾಗಿಯೇ ನಿಭಾಯಿಸಿದ್ದ. ಈಗ ಮೈಚಳಿ ಬಿಟ್ಟು ಫುಲ್‌ಟೈಮ್ ಹೀರೋ ಆಗಲು ಹೊರಟಿದ್ದಾನೆ.



'ಅವ್ವ' ಚಿತ್ರದಲ್ಲಿ ವಿಜಯ್

ದಿನೇಶ್ ಬಾಬುಗೆ ಬಡ್ತಿ



ದಿನೇಶ್ ಬಾಬು ಎಂಬ ಮಲೆಯಾಳಿ ಛಾಯಾಗ್ರಾಹಕ ಕಂ ನಿರ್ದೇಶಕರಿಗೆ ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ಬಡ್ತಿ ಸಿಕ್ಕಿದೆ. ಅವರೀಗ ತಮ್ಮ ಮುಖಕ್ಕೆ ಬಣ್ಣ ಹಚ್ಚಿ ನಟರಾಗುತ್ತಿದ್ದಾರೆ. 'ಆಕ್ಸಿಡೆಂಟ್' ಚಿತ್ರದಲ್ಲಿ ಅವರಿಗೆ ಪಾತ್ರ ಕೊಡುವ ಮೂಲಕ ನಟ-ನಿರ್ದೇಶಕ ರಮೇಶ್ ಗುರುಕಾಣಿಕೆ ಸಲ್ಲಿಸುತ್ತಿದ್ದಾರೆಯೇ ಎಂಬ ಪ್ರಶ್ನೆ ಗಾಂಧಿನಗರದಲ್ಲಿ ಕೇಳಿಬರುತ್ತಿದೆ.

ಈ ದಿನೇಶ್ ಬಾಬು ಹತ್ತಾರು ವರ್ಷಗಳಿಂದ ಇಲ್ಲೇ ನೆಲೆಸಿದ್ದರೂ, ಹತ್ತನ್ನೆರಡು ಕನ್ನಡ ಚಿತ್ರಗಳನ್ನು ನಿರ್ದೇಶಿಸಿದ್ದರೂ ಇವತ್ತಿಗೂ ಅವರಿಗೆ ಮಾತನಾಡಲು ಎರಡು ಕನ್ನಡ ಪದಗಳೂ ಬರುವುದಿಲ್ಲ. ಅದರಲ್ಲೂ ತಮ್ಮ ಮೂಲ ರಾಜ್ಯವಾದ ಕೇರಳದಲ್ಲಿ ಅವಕಾಶಗಳೇ ಇಲ್ಲದಂತಾಗಿ ಅಲ್ಲಿ ಅವರು ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲದಂತಿರುವಾಗ ಅವರಿಗೆ ಅವಕಾಶಗಳನ್ನು, ಪ್ರೋತ್ಸಾಹವನ್ನು ನೀಡಿ ಬೆಂಬಲಿಸಿದ್ದು ಕನ್ನಡ ಚಿತ್ರರಂಗ ಮತ್ತು ಇಲ್ಲಿನ ಪ್ರೇಕ್ಷಕರು. ಆದರೂ ಈ ಮನುಷ್ಯ ಇಲ್ಲಿನ ಭಾಷೆಯನ್ನು ಕಲಿಯುವ ಗೋಜಿಗೆ ಈತನಕ ಹೋಗಿಲ್ಲ ಎಂದರೆ ಅದನ್ನು ಏನೆಂದು ಪರಿಗಣಿಸಬೇಕು?

ಮೊನ್ನೆ ಮೊನ್ನೆ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದ ಹೊರ ರಾಜ್ಯದ ಪೂಜಾ ಗಾಂಧಿ ಮತ್ತು ಜೆನ್ನಿಫರ್ ತರಹದ ಹುಡುಗಿಯರು ಈಗ ಒಂದಿಷ್ಟು ಕನ್ನಡ ಕಲಿತಿರುವಾಗ ಈ ಮನುಷ್ಯನಿಗೆ ಏನು ದಾಡಿ ಎಂಬ ಕೋಪ ಬರುವುದೂ ಸಹಜವೇ. ಆದ್ದರಿಂದ ನಟನಾಗಿ ಬಡ್ತಿ ಪಡೆದಿರುವ ದಿನೇಶ್ ಬಾಬು ಈಗಲಾದರೂ ಒಂದಿಷ್ಟು ಕನ್ನಡ ಕಲಿಯುವಂತಾಗಲಿ ಎಂಬುದು ಎಲ್ಲರ ಅಪೇಕ್ಷೆ.



ಅಂದಹಾಗೆ ಅವರು ಕನ್ನಡ ಕಲಿಯುವಂತಾಗಲಿ ಎಂದೇ ರಮೇಶ್ ಅವರಿಗೆ ತಮ್ಮ ಚಿತ್ರದಲ್ಲಿ ಪಾತ್ರ ಕೊಟ್ಟಿರಲೂಬಹುದು ಎಂಬ ಮಾತು ಕೂಡ ಗಾಂಧಿನಗರದಿಂದ ಕೇಳಿಬರುತ್ತಿದೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar